ಅಂತರಾಷ್ಟ್ರೀಯ [illegible] [illegible]
ಅಧ್ಯಯನ

ರಚಿಸಿದವರು
ಸಂಶೋಧನಾ ವಿದ್ಯಾರ್ಥಿ

ಮಾರ್ಗದರ್ಶಕರು
ಡಾ. ಎ. ಪ್ರ. ನಾಗರಾಜ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ
ಸಂಶೋಧನಾ ಪ್ರಬಂಧ

"ಅಂತರ್ಜಾಲದಲ್ಲಿ ಕನ್ನಡ ಭಾಷೆ ಹಾಗೂ ಸಾಹಿತ್ಯದ ಅಧ್ಯಯನ"

ರಮೇಶ ಎಸ್
ಸಂಶೋಧನಾ ವಿದ್ಯಾರ್ಥಿ
ನೋಂದಣಿ ಸಂಖ್ಯೆ : ಕೆ.ವಿ.ಎಂ.ಬಿ.ಕೆ.ಎಸ್ – ೦೦೫೩೭ – ೨೦೧೨

ಮಾರ್ಗದರ್ಶಕರು

ಡಾ. ಬಿ.ಆರ್. ನರಸಿಂಹಮೂರ್ತಿ
ಆಯ್ಕೆ ಶ್ರೇಣಿ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ಚಿಕ್ಕಬಳ್ಳಾಪುರ

ಕಾವ್ಯಮಂಡಲ
ಬೆಂಗಳೂರು
೨೦೧೧–೨೦೧೨

968

ದೃಢೀಕರಣ ಪತ್ರ

ರಮೇಶ ಎಸ್ ಇವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **"ಅಂತರ್ಜಾಲದಲ್ಲಿ ಕನ್ನಡ ಭಾಷೆ ಹಾಗೂ ಸಾಹಿತ್ಯದ ಅಧ್ಯಯನ"** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 29/6/12
ಸ್ಥಳ: ಬೆಂಗಳೂರು

ಮಾರ್ಗದರ್ಶಕರು

ಡಾ. ಬಿ.ಆರ್. ನರಸಿಂಹಮೂರ್ತಿ
ಆಯ್ಕೆ ಶ್ರೇಣಿ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ಚಿಕ್ಕಬಳ್ಳಾಪುರ

ಪ್ರಮಾಣ ಪತ್ರ

"ಅಂತರ್ಜಾಲದಲ್ಲಿ ಕನ್ನಡ ಭಾಷೆ ಹಾಗೂ ಸಾಹಿತ್ಯದ ಅಧ್ಯಯನ" ಎಂಬ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು **ಡಾ. ಬಿ.ಆರ್. ನರಸಿಂಹಮೂರ್ತಿ**ಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ದಿನಾಂಕ: 29/6/12
ಸ್ಥಳ: ಬೆಂಗಳೂರು

ರಮೇಶ ಎಸ್
ಸಂಶೋಧನಾ ವಿದ್ಯಾರ್ಥಿ

ಪರಿವಿಡಿ

ಅಧ್ಯಾಯ ೧
ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೧
ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಕಾಲ ಕಾಲಕ್ಕೆ ಬದಲಾಗುತ್ತಿರುವ ಸನ್ನಿವೇಶಕ್ಕೆ ಹೊಂದಿಕೊಳ್ಳುತ್ತಿರುವ ಮಾನವ, ತನ್ನ ಅಭಿವೃದ್ಧಿಯತ್ತ ಚಲಿಸುತ್ತಿದ್ದಾನೆ. ಕಾಲದ ಜೊತೆಗೆ ಮಾನವನೋ, ಮಾನವನ ಜೊತೆಗೆ ಕಾಲವೋ ತಿಳಿಯದು. ಒಟ್ಟಿನಲ್ಲಿ ನಿರಂತರವಾಗಿ ಸನ್ಮಾರ್ಗದತ್ತ ನಡೆಯುತ್ತಿರುವುದಷ್ಟೆ ತೃಣಮಾತ್ರದ ಮಾನವನ ಕಾಯಕ. ಮೊದಲು ಆಹಾರವನ್ನು ಅರಸಿ, ನಂತರದ ಕಾಲದಲ್ಲಿ ಬೇಯಿಸಿ ತಿನ್ನಲು ಕಲಿತ ಮಾನವ. ನಂತರದಲ್ಲಿ ಕೌಟುಂಬಿಕ ಜೀವನದತ್ತ ಆರ್ಥಿಕ ವ್ಯವಸ್ಥೆಯನ್ನು, ಶೈಕ್ಷಣಿಕ ವ್ಯವಸ್ಥೆಯನ್ನು, ತಾಂತ್ರಿಕ ವ್ಯವಸ್ಥೆಗಳನ್ನು ರೂಪಿಸಿಕೊಂಡು, ಜೀವನವನ್ನು ಮತ್ತಷ್ಟು ಆಧುನೀಕರಣಗೊಳಿಸಿಕೊಂಡು ಈಗ ಹಕ್ಕಿಯಂತೆ ಹಾರಬಲ್ಲ, ಮೀನಿನಂತೆ ಈಜಬಲ್ಲ ಶಕ್ತಿಯನ್ನೂ ಹೊಂದಿದ್ದಾನೆ. ಇದಕ್ಕೆಲ್ಲ ಮೂಲ ಪ್ರೇರಣೆಯೆಂದರೆ ಅವನ ಬೌದ್ಧಿಕ ಸಾಮರ್ಥ್ಯ. ಪ್ರಸ್ತುತ ಗಣಕ ಭಾಷೆಯನ್ನು ಬಳಸಿಕೊಂಡು, ಮನುಷ್ಯ ಏನೆಲ್ಲವನ್ನೂ ಸಾಧಿಸಲು ಹೊರಟಿದ್ದಾನೆ. ಅದಕ್ಕೆ ಗಣಕಯಂತ್ರದಲ್ಲಿನ ಜಾಲವೂ ಹೆಚ್ಚಿನ ಪುಷ್ಠಿ ನೀಡಿದೆ. ವಿಶ್ವದ ಯಾವುದೇ ವಿಷಯವನ್ನು ಸುಲಭವಾಗಿ ಅಂತರ್ಜಾಲದಲ್ಲಿ ನಾವು ಇಂದು ಶೋಧಿಸಬಹುದು. ದೃಶ್ಯ – ಶ್ರವ್ಯ ಮಾಧ್ಯಮಗಳೆರಡರಲ್ಲಿ ದೊರಕಬಹುದಾದ ವಿಷಯಗಳನ್ನು ಅಂತರ್ಜಾಲದಲ್ಲಿ ಪಡೆಯಬಹುದು. ಕೇವಲ ಪುಸ್ತಕಗಳನ್ನು ಓದಿ ಆನಂದಿಸಬೇಕಿದ್ದ ಜನತೆಗೆ, ಸಮೂಹ ಮಾಧ್ಯಮಗಳು ಇಂದು ಭರಪೂರ ಮನರಂಜನೆಯನ್ನು ಒದಗಿಸುತ್ತಿವೆ.

ದೃಶ್ಯ ಮಾಧ್ಯಮವಾದ ಅಂತರ್ಜಾಲದಲ್ಲಿ ನಮ್ಮ ದೇಸೀ ಸಾಹಿತ್ಯದ ಜೊತೆಗೆ ವಿಶ್ವದ ಸಾಹಿತ್ಯವನ್ನು ಅರಿತುಕೊಂಡು, ನಾಡಿನ ಸಾಂಸ್ಕೃತಿಕ ಅಭಿಮಾನವನ್ನು ಹೆಚ್ಚಿಸುವ ಸದವಕಾಶವಿದೆ. ಇಂದಿನ ಅಂತರ್ಜಾಲ ಪದ್ಧತಿ, ಅದರೊಳಗಿನ ಸಾಹಿತ್ಯವು ಶಾಲಾಮಟ್ಟದಿಂದ ಆರಂಭಿಸಿ ವಿಶ್ವವಿದ್ಯಾಲಯಗಳವರೆಗೆ ಮುಟ್ಟಿದೆ. ಪ್ರಾಚೀನ ಕಾಲದಲ್ಲಿ ಕೇವಲ ಮುದ್ರಿತ ಬರವಣಿಗೆಗಳನ್ನು ಹುಡುಕಿಕೊಂಡು ಅಧ್ಯಯನ ಮಾಡುವುದು ಕಷ್ಟಸಾಧ್ಯವಾಗಿತ್ತು. ಆದರೆ ಈಗ ಅಂತರ್ಜಾಲವಿರುವುದರಿಂದ ಅಗತ್ಯಕ್ಕೆ ತಕ್ಕಂತೆ ಬೇಕಾದಲ್ಲಿ ಸುಲಭವಾಗಿ ಅಗತ್ಯ ಪುಸ್ತಕಗಳನ್ನು ಗಣಕಯಂತ್ರದಲ್ಲಿಯೇ ತಿರುವಿಹಾಕಬಹುದು. ಇಂತಹ ಸುವರ್ಣಾವಕಾಶವನ್ನು ತಂತ್ರಜ್ಞಾನ ನಮಗೆ ಕೊಡುಗೆಯಾಗಿ ಇತ್ತಿದೆ. ಅಂತರ್ಜಾಲದಲ್ಲಿ ಅತ್ಯಗತ್ಯವಾಗಿ ಬೇಕಾದ ವಿವಿಧ ಸಾಹಿತ್ಯ ಪ್ರಕಾರಗಳನ್ನು ನಾವು ಅಧ್ಯಯನ ಮಾಡಬಹುದು. ಅದಕ್ಕೆಂದೇ ಅನೇಕಾನೇಕ ಖಾಸಗಿ ಬ್ಲಾಗ್‌ಗಳು ಅಂತರ್ಜಾಲದಲ್ಲಿವೆ. ಸಾಹಿತ್ಯಾಧ್ಯಯನದಲ್ಲಿ ಸಾಕಷ್ಟು ಅಭಿರುಚಿಯುಳ್ಳ ಸಹೃದಯರಿಗೆ ಅಂತರ್ಜಾಲವು ಚಿಲುಮೆಯಂತಿದೆ. ಹಳೆಗನ್ನಡ ಪಠ್ಯಗಳನ್ನು ಹೊಸಗನ್ನಡದಲ್ಲಿ ಅನುವಾದಿಸಿದ

ಬರವಣಿಗೆಗಳನ್ನು ಅಂತರ್ಜಾಲದಲ್ಲಿ ಗುರುತಿಸಬಹುದು. ಅಂತರ್ಜಾಲದಲ್ಲಿ ಸಾಹಿತ್ಯವು ವಿವಿಧ ಮಜಲುಗಳಲ್ಲಿ ಬಳಕೆಯಾಗುವುದನ್ನು ಪ್ರಸ್ತುತದ ಹಲವು ವಿದ್ಯಮಾನಗಳಿಂದ ತಿಳಿಯಬಹುದು.

ತಂತ್ರಜ್ಞಾನ ಒಂದರಿಂದಲೇ ಸಾಹಿತ್ಯದ ವೈವಿಧ್ಯತೆಯ ಅರಿವು ಸಾಧ್ಯವಾಗುವುದಿಲ್ಲ. ಅದಕ್ಕೆ ಪೂರಕವಾಗಿ ಓದುಗರೂ ಪ್ರೋತ್ಸಾಹವನ್ನು ನೀಡಬೇಕು. 'ದೇಶ ಸುತ್ತು ಕೋಶ ಓದು' ಎನ್ನುವ ಮಾತಿದೆ. ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಈ ಅಂತರ್ಜಾಲವು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡು, ಸಮಕಾಲೀನ ಸಮಾಜದ ಕನ್ನಡಿಯಾಗಿದೆ. ಮುಖ ಮನಸ್ಸಿನ ಪ್ರತಿಬಿಂಬವಾಗಿರುವಂತೆ ಇಂದು **'ಫೇಸ್ ಬುಕ್'** ವ್ಯಕ್ತಿತ್ವದ ಪ್ರತಿಬಿಂಬವಾಗಿ ರೂಪುಗೊಂಡಿದೆ.

ಪ್ರಸ್ತುತ ಅಂಕಿ ಅಂಶಗಳನ್ನೊಮ್ಮೆ ನೋಡಿದರೆ ಸುಮಾರು ೨೦ ಕೋಟಿ ಜನ ಈ ಅಂತರ್ಜಾಲ ಪದ್ಧತಿ ಬಳಸುತ್ತಿದ್ದಾರೆ. ಅಂತರ್ಜಾಲವು ಇಂದು ವಿಶ್ವದ ಬಹುದೊಡ್ಡ ವೇದಿಕೆಯಾಗಿ ಬೆಳೆಯುತ್ತಿದೆ. ಈ ವೇದಿಕೆಯಲ್ಲಿ ನೀವು ಯಾವ ವಿಷಯವನ್ನು ಬೇಕಾದರೂ ಹಂಚಿಕೊಳ್ಳಬಹುದು; ಪಡೆಯಬಹುದು. ಬೇಕಿದ್ದರೆ ವಸ್ತುವೊಂದನ್ನು ಖರೀದಿಸಬಹುದು ಅಥವಾ ಬಿಕರಿ ಮಾಡಬಹುದು. ಅಂತಹ ಬಹುದೊಡ್ಡ ಜಾಗತಿಕ ವೇದಿಕೆಯಾಗಿ ಅಂತರ್ಜಾಲ ನಿರ್ಮಾಣಗೊಂಡಿದೆ. ಈ ವೇದಿಕೆ ಕನ್ನಡ ಸಾಹಿತ್ಯದ ಬೆಳವಣಿಗೆಗೂ ಪೂರಕವಾಗಬಲ್ಲುದು ಎಂಬ ನಿರೀಕ್ಷೆಯಿದೆ. ಅದಕ್ಕಾಗಿ ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯ ಹೆಚ್ಚು ಹೆಚ್ಚು ಸಂಗ್ರಹಗೊಳ್ಳಬೇಕಾದ ಜರೂರತ್ತಿದೆ. ಇದರಿಂದ ಕನ್ನಡ ಸಾಹಿತ್ಯದ ಓದು ವಿಶ್ವದೆಲ್ಲೆಡೆ ಹಬ್ಬಿ, ಕನ್ನಡದ ಘನತೆ ಹೆಚ್ಚಿ ಮತ್ತಷ್ಟು ಪ್ರಗತಿಯ ದಾರಿಯನ್ನು ತಲುಪುತ್ತದೆ. ಅದಕ್ಕೆ ಎಲ್ಲರ ಪ್ರೀತಿ, ಬೆಂಬಲ, ಸಹಕಾರ ಅತ್ಯಗತ್ಯವಾಗಿ ಬೇಕು. ಕನ್ನಡ ಭಾಷೆಯನ್ನು ಕಂಪ್ಯೂಟರಿನಲ್ಲಿ ಅಳವಡಿಸಲು ಹಲವಾರು ಯೋಜನಾ ಕಾರ್ಯಗಳು ಸಫಲವಾಗಿದ್ದು, ಅದರ ಫಲವನ್ನು ಈಗ ಪಡೆಯುತ್ತಿದ್ದೇವೆ. ಮತ್ತಷ್ಟು ಸಂಶೋಧನೆಗಳು ಮುಂದುವರಿಯುತ್ತಿವೆ.

ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಕಂಪ್ಯೂಟರ್ ವಿವಿಧ ಹಂತಗಳಲ್ಲಿ ಸಾರ್ವಜನಿಕರಿಗೆ ಅನೇಕ ವಿಧದಲ್ಲಿ ಉಪಯೋಗಕಾರಿಯಾಗಿದೆ. ಇಂದು ಕಂಪ್ಯೂಟರ್– ಓದು, ಬರಹದ ಜ್ಞಾನಾರ್ಜನೆಗೆ ಹೊಸ ಆಯಾಮವನ್ನು ಕಲ್ಪಿಸಿ, ಇಡೀ ವಿಶ್ವವನ್ನೇ ಕರತಲಾಮಲಕವಾಗಿಸಿದೆ. ಜೀವನ ಪೂರ್ತಿ ಕಲಿತರೂ ಕಲಿಯುತ್ತಲೇ ಇರಬೇಕಾದ ಪರಿಸರ ಸೃಷ್ಟಿಸಿದ್ದು ಈ ಗಣಕಲೋಕ. ಸೋದಾಹರಣವಾಗಿ ಹೇಳುವುದಾದರೆ, ರಾಶಿ ರಾಶಿ ಪುಸ್ತಕಗಳ ಜ್ಞಾನರಾಶಿ ಅಂಗುಲ ಗಾತ್ರದ ಕಂಪ್ಯೂಟರ್ ಚಿಪ್‌ನಲ್ಲಿದೆ ಎಂದರೆ ಅಚ್ಚರಿಯಲ್ಲವೇ?

ಆಧುನಿಕ ಯುಗದಲ್ಲಿನ ಹೊಸ ಆವಿಷ್ಕಾರಗಳು, ಸುಧಾರಣೆಗಳು ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ತಂದಿವೆ. ಪರಂಪರಾಗತ ಬೋಧನಾ ವಿಧಾನಕ್ಕೆ ಪೂರಕವಾಗಿ ಈ ಗಣಕಯಂತ್ರ

ಹೊಸ ವಿಚಾರಗಳನ್ನು ವಿನಿಮಯ ಮಾಡಲು ಯಶಸ್ವಿಯಾಗಿದೆ. ಬದಲಾವಣೆ ಸಮಾಜದ ಸಹಜ ಕ್ರಿಯೆ. ಇದನ್ನೇ ಅವಲಂಬಿಸಿ, ಮಾನವನು ತನ್ನ ವ್ಯಾಪ್ತಿಯನ್ನು ಮತ್ತಷ್ಟು ವೃದ್ಧಿಪಡಿಸಿ, ಸುಲಭದ ಜೀವನದತ್ತ ಸಾಗಲು ಬೇಕಾಗುವ ಎಲ್ಲಾ ಸಾಮಾಗ್ರಿಗಳನ್ನು ಹಂತ ಹಂತವಾಗಿ ಕಂಡುಹಿಡಿದು ಉಪಯೋಗಕ್ಕೆ ತರುತ್ತಿರುವುದು ವಿಶೇಷವಾದ ಸಂಗತಿಯಾಗಿದೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ನಮ್ಮ ಕನ್ನಡ ಭಾಷೆ ಬಳಕೆಯಾಗುತ್ತಿರುವುದು ಕನ್ನಡಿಗರ ಹೆಮ್ಮೆ ಎಂದು ತಿಳಿಯಬಹುದು. (ಮಾಹಿತಿ ತಂತ್ರಜ್ಞಾನದಲ್ಲಿ ಕನ್ನಡದ ಬಗೆಗೆ ಅಸಡ್ಡೆಯಿದೆ ಎಂಬ ಕೂಗು ಸರ್ವೇ ಸಾಮಾನ್ಯವಾಗಿಬಿಟ್ಟಿದೆ) ಕನ್ನಡ ಭಾಷೆ, ಸಾಹಿತ್ಯವನ್ನು ಕೇವಲ ಪುಸ್ತಕಗಳ ಮಾದರಿಯಲ್ಲಿ ಓದುವ ಪ್ರಕ್ರಿಯೆ ಇಲ್ಲಿಯವರೆಗೂ ಇತ್ತು. ಆದರೆ ಈಗ ದಿನಪತ್ರಿಕೆಗಳಿಂದ ಪ್ರಾರಂಭವಾಗಿ ದೊಡ್ಡ ದೊಡ್ಡ ಕಾದಂಬರಿಗಳೂ ಸುಲಭವಾಗಿ ಅಂತರ್ಜಾಲದಲ್ಲಿ ದೊರಕುತ್ತಿದ್ದು ನಮ್ಮೆಲ್ಲರಿಗೂ ಉಪಯುಕ್ತವಾಗಿದೆ. ಕೇವಲ ಬರವಣಿಗೆ ಎಂದು ಜನ ತಿಳಿಯದ ಹಾಗೆ ಮಾಡಿದೆ ದೃಶ್ಯ ಮಾಧ್ಯಮವಾದ ಗಣಕಯಂತ್ರ. ಇದರಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಕನ್ನಡ ಸಾಹಿತ್ಯ ಪ್ರಕಾರಗಳು ಇವುಗಳಿಗೆ ಸಂಬಂಧಿಸಿದ ಕೆಲವು ಲೇಖನ, ನೆಚ್ಚುಗೆಯಾದ ಕಥೆ, ಕಾದಂಬರಿಯ ಭಾಗಗಳನ್ನು ನೋಡಬಹುದು. ಅವುಗಳ ವ್ಯಾಪ್ತಿಯನ್ನು ಗುರುತಿಸುವ ಪ್ರಯತ್ನ ಈ ಪ್ರಬಂಧದಲ್ಲಿ ಕೈಗೊಳ್ಳಲಾಗಿದೆ. ಅಲ್ಲದೆ ಹಲವು ಜನಪ್ರಿಯ ಕವಿಗಳು, ಕತೆಗಾರರು, ವಚನಕಾರರು ಮತ್ತು ಅವರ ವಚನಗಳನ್ನು, ವೈಯಕ್ತಿಕ ವಿಚಾರಗಳನ್ನು ಸಚಿತ್ರವಾಗಿ ತಿಳಿಯಬಹುದು. ಅಂತರ್ಜಾಲದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ಅಳವಡಿಕೆಯಾಗಿರುವ ವಿವಿಧ ಲೇಖನಗಳ, ವಿಮರ್ಶೆಗಳ ಪ್ರಯೋಜನವನ್ನು ಪಡೆದುಕೊಳ್ಳಬಹುದು. ವಚನಕಾರರಾದ ಅಲ್ಲಮಪ್ರಭು, ಅಕ್ಕಮಹಾದೇವಿ, ದಾಸಿಮಯ್ಯ, ಬಸವಣ್ಣ ಮುಂತಾದವರ ೩೫೦ಕ್ಕೂ ಹೆಚ್ಚು ವಚನಗಳ ಸಾರಾಂಶವನ್ನು ಅಂತರ್ಜಾಲದಲ್ಲಿ ತಿಳಿದುಕೊಳ್ಳಬಹುದು.

ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಬರವಣಿಗೆ ಕಬ್ಬಿಣದ ಕಡಲೆಯಾದದ್ದೇ ಹೆಚ್ಚು. ಬಹುತೇಕ ಇಂಗ್ಲೀಷ್ ಭೂಯಿಷ್ಟವಾದ ತಂತ್ರಜ್ಞಾನದ ಭಾಷೆಯನ್ನು ಕನ್ನಡವಾಗಿಸುವುದು ಬಹುದೊಡ್ಡ ಪ್ರಕ್ರಿಯೆ ಮತ್ತು ಸವಾಲು. ಅಂತಹ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪರಿಪೂರ್ಣಗೊಳಿಸಬೇಕಾದರೆ, ಅಂತರ್ಜಾಲದಲ್ಲಿ ಕನ್ನಡ ಭಾಷೆಯನ್ನು ಅಳವಡಿಸಲು ಕನ್ನಡ ಭಾಷೆಯ ಪಾಂಡಿತ್ಯದ ಜೊತೆಗೆ ತಂತ್ರ ಜ್ಞಾನದ ಅರಿವಿರಬೇಕು.

ತಾಂತ್ರಿಕತೆಯ ಜೊತೆಗೆ ಕನ್ನಡ ಭಾಷೆಯ ಪ್ರೌಢಿಮೆ ಹೊಂದಿರುವ ಕನ್ನಡಿಗರು ಇಂದು ಅಂತರ್ಜಾಲ ತಾಣಗಳನ್ನು ನಿರ್ಮಿಸಿಕೊಂಡಿದ್ದಾರೆ. ಅದರಲ್ಲಿ ಅವರು ತಮ್ಮ ಲೇಖನ, ವಿಮರ್ಶೆ, ಕಥೆ, ಕವನ ಇತ್ಯಾದಿಗಳನ್ನು ಪ್ರಸಾರ ಮಾಡುತ್ತಿದ್ದಾರೆ. ಇದರ ಉಪಯೋಗವನ್ನು ಕನ್ನಡಾಸಕ್ತರು ಪಡೆದು

ಕೊಳ್ಳುತ್ತಿದ್ದಾರೆ. ಹಲವಾರು ಸಂಸ್ಥೆಗಳು ಸಹ ತಮ್ಮದೇ ಆದ ಖಾಸಗಿ ಜಾಲತಾಣಗಳನ್ನು ನಿರ್ಮಿಸಿ ಕೊಂಡು, ಅದರಲ್ಲಿ ವಿಶಿಷ್ಟವಾದ ಬರವಣಿಗೆಗಳನ್ನು ಪ್ರಕಟಿಸುವ ಪ್ರಯತ್ನ ಮಾಡುತ್ತಿವೆ. ಅವುಗಳ ಬಗೆಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಮಾಹಿತಿ ವಿನಿಮಯ ಹಂತಕ್ಕೆ ಬಂದರೆ ಇಂದು ಕಂಪ್ಯೂಟರ್ ಹೆಚ್ಚಿನ ಶ್ರಮವಿಲ್ಲದೆ ಕಡಿಮೆ ಖರ್ಚಿನಲ್ಲಿ ಅತ್ಯಧಿಕ ಮಾಹಿತಿಯನ್ನು ಸಂಗ್ರಹಿಸುವ ಮತ್ತು ರವಾನಿಸುವ ಅನುಕೂಲಗಳನ್ನು ಗರ್ಭೀಕರಿಸಿ ಕೊಂಡಿದೆ. ಎಲೆಕ್ಟ್ರಾನಿಕ್ ಕಾಮರ್ಸ್, ಇ ಮೇಲ್, ಇಂಟರ್ನೆಟ್‌ಗಳ ಮೂಲಕ ನಮಗೆ ಬೇಕಾದ ಮಾಹಿ ತಿಯ ಮೂಲ ವಿವರಣೆಯನ್ನು ಪಡೆದುಕೊಳ್ಳಬಹುದು. ಇಂದು ತೊಂದರೆಗಳಿಲ್ಲದೆ ಎಲ್ಲವನ್ನು ಸುಗಮ ವಾಗಿ ಮಾಡುವ ಹಂತಕ್ಕೆ ಮಾನವ ತಲುಪಿದ್ದಾನೆ ಎಂಬುದಕ್ಕೆ ಕಂಪ್ಯೂಟರ್ ಮತ್ತು ಅಂತರ್ಜಾಲವೇ ಸಾಕ್ಷಿಯಾಗಿರುವುದನ್ನು ತಿಳಿಯಬಹುದು.

ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿರುವ ಮಾನವ ಜೀವಿ ತನ್ನ ಬೌದ್ಧಿಕ ವಿಶಾಲತೆಯನ್ನು ವೃದ್ಧಿಪಡಿಸಲು ಹಲವಾರು ಸಂಶೋಧನೆಗಳನ್ನು ಕೈಗೊಂಡು, ಅದರಿಂದ ದೊರಕಿದ ಫಲಿತಗಳನ್ನು ಬಳಸಿಕೊಂಡು ಅನೇಕ ಸುಧಾರಣೆಗಳನ್ನು ಜಾರಿಗೊಳಿಸಿ, ತನ್ನ ಬದುಕನ್ನು ಉದಾತ್ತೀಕರಿಸಿಕೊಂಡಿದ್ದಾನೆ. ಅವನ ತಾಂತ್ರಿಕ ಬೆಳವಣಿಗೆಯು ಅವನನ್ನು ಉನ್ನತ ಮಟ್ಟಕ್ಕೇರಿಸಿದೆ. ಭೂಮಿಯ ಮೇಲೆ ಮಾನವ ವಿಕಾಸದ ವೇಗಕ್ಕೆ ಇಂದಿನ ತಂತ್ರಜ್ಞಾನವನ್ನು ಉನ್ನತೀಕರಿಸಿಕೊಳ್ಳುತ್ತಿ ದ್ದಾನೆ. ಇದಕ್ಕೆ ಪ್ರಸ್ತುತ ವಿದ್ಯಮಾನಗಳೇ ಸಾಕ್ಷಿಯಾಗಿವೆ.

ಜೀವವಿಕಾಸದ ಪಥದಲ್ಲಿ ಮನುಷ್ಯ ಬೆಂಕಿಯನ್ನು ಕಂಡುಹಿಡಿದು, ಅದರಿಂದ ಅಡುಗೆ ಮಾಡಿ, ಹಸಿವು ನೀಗಿಸಿಕೊಂಡು ಬೆಳೆದು ಸಾವಿರಾರು ವರ್ಷಗಳೇ ಕಳೆದಿವೆ. ಇಂದು ಆಕಾಶಕ್ಕೆ ಹಾರಿ ತೇಲುವ, ಅಲ್ಲಿಯೇ ಗೂಡು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದ್ದಾನೆ. ಯಂತ್ರಜ್ಞಾನ ಮತ್ತು ಯಾಂತ್ರೀಕರಣವು ಅವನ ಕ್ಷಮತೆಯನ್ನು ಹೆಚ್ಚಿಸಿದೆ. ಇಂದು ಕ್ಷಣ ಮಾತ್ರದಲ್ಲಿ ಮಾಹಿತಿ ನೀಡುವ ಕಂಪ್ಯೂಟರ್, ಯಾವುದೇ ಕೆಲಸ ವನ್ನು ಪೂರೈಸುವ ಭಿನ್ನ ಯಂತ್ರಗಳನ್ನು ಕಂಡುಹಿಡಿದು ಅದರಲ್ಲಿ ಬೇಕಾದ ಗುಣಾತ್ಮಕ ಸುಧಾರಣೆ ಗಳನ್ನು ಮಾಡಿದ್ದಾನೆ.

ಒಂದು ಕಾಲಕ್ಕೆ ಕೋಣೆಗಳ ತುಂಬಾ ಆವರಿಸಿ, ಕ್ಲಿಷ್ಟ ಸಮಸ್ಯೆಗಳನ್ನೋ ಮಂಗಳ ಗ್ರಹದ ಕಕ್ಷೆ ಯನ್ನೋ, ಕ್ಷಿಪಣಿಯ ಮಾರ್ಗವನ್ನೋ ಗಂಭೀರವಾಗಿ ಗುಣಿಸುತ್ತಿದ್ದ, ವಿಜ್ಞಾನಿಗಳ, ತಂತ್ರಜ್ಞರ ಕೈಗೆ ಮಾತ್ರ ಎಟಕುತ್ತಿದ್ದ ಕಂಪ್ಯೂಟರ್, ತಟ್ಟನೆ ಇಂದು ನಮ್ಮ ಮೇಜಿನ ಮೇಲೆ, ತೊಡೆಯ ಮೇಲೆ ಕೂರು ವಷ್ಟು ಸಣ್ಣ ಗಾತ್ರದಲ್ಲಿ, ಅಂಗೈಯಲ್ಲಿ ಹಿಡಿಯುವಷ್ಟು, ಮಣಿಕಟ್ಟಿನ ಮೇಲೆ ಕಟ್ಟುವಷ್ಟು ಪುಟ್ಟದಾಗಿದೆ.

ಕಂಪ್ಯೂಟರ್ ಪದದ ಅರ್ಥ : ಒಂದು ಕಾಲಕ್ಕೆ ಕಂಪ್ಯೂಟರ್ ಎಂಬ ಪದದ ಅರ್ಥ ಗುಣಿಸುವ ಕೆಲಸ ಮಾಡುವ ವ್ಯಕ್ತಿ ಎಂದಿತ್ತು. ಹಳೆಯ ಇಂಗ್ಲೀಷ್ ನಿಘಂಟುಗಳಲ್ಲಿ ಕಂಪ್ಯೂಟರ್ ಎಂದರೆ **one who computers** ಎಂದಿದೆ. ಅವೇ ಹೊಚ್ಚ ಹೊಸ ನಿಘಂಟು ತೆರೆದು ನೋಡಿದರೆ **computer a programmable electronic device.** ವಿವರಿಸುತ್ತಾರೆ. "ಒಂದು ಕಾಲಕ್ಕೆ ಮನುಷ್ಯ ಮಾಡುತ್ತಿದ್ದ ಕೆಲಸವನ್ನೆಲ್ಲ ಇಂದು ಕಂಪ್ಯೂಟರ್ ಮಾಡುತ್ತಿದೆ. ಮಾತ್ರವಲ್ಲ ಮನುಷ್ಯ ಮಾಡಲಾರದ ಕೆಲಸವನ್ನೂ ಕಂಪ್ಯೂಟರ್ ಮಾಡುತ್ತಿದೆ."[1] ಹೀಗಾಗಿ ಇಂದಿನ ಕಾಲವನ್ನು 'ಕಂಪ್ಯೂಟರ್ ಯುಗ'ವೆಂದು ಕರೆಯಲಾಗುತ್ತಿದೆ.

ಕಂಪ್ಯೂಟರ್ ಇತಿಹಾಸ : ಕಂಪ್ಯೂಟರ್‌ಗಳಿಗೆ ೫೦೦೦ ವರ್ಷಗಳ ಇತಿಹಾಸವಿದೆ. ಅಬಾಕಸ್ ಅತ್ಯಂತ ಪ್ರಾಚೀನವಾದ ಯಾಂತ್ರಿಕ ಕಂಪ್ಯೂಟರ್. ಬಹುಶಃ ಚೀನಾದಲ್ಲಿ ಕಂಡು ಹಿಡಿದ ಈ ಕಂಪ್ಯೂಟರಿಗೆ ಮರದ ಚೌಕಟ್ಟಿದ್ದು, ಹತ್ತು ಸರಳುಗಳಿರುತ್ತಿದ್ದವು. ಒಂದೊಂದು ಸರಳಿನಲ್ಲಿ ಸರಿದಾಡಬಲ್ಲ ಹತ್ತು ಮರದ ಮಣಿಗಳಿದ್ದು, ಈ ಸರಳುಗಳು ಬಿಡಿ, ಹತ್ತು, ನೂರು, ಸಾವಿರ ಮುಂತಾದ ಸ್ಥಾನವನ್ನು ಸೂಚಿಸುತ್ತಿದ್ದವು. ಈ ಮಣಿಗಳನ್ನು ಮೇಲೆ ಕೆಳಗೆ ಚಲಿಸಿ ಗುಣಿಸಲಾಗುತ್ತಿತ್ತು. ನೋಡಲು ಮಕ್ಕಳ ಆಟಿಕೆಯಂತೆ ಕಾಣಿಸುವ ಅಬಾಕಸ್ ಬಳಿಸಿ, ಪೂರ್ಣಾಂಕಗಳನ್ನು ಕೂಡುವುದು, ಕಳೆಯುವುದು, ಗುಣಿಸುವುದು, ಭಾಗಿಸುವುದು ಸಾಧ್ಯವಿತ್ತು. ಇಂದಿಗೂ ಮಲೇಷಿಯಾ, ಇಂಡೋನೇಷಿಯಾ ಮೊದಲಾದ ಪೂರ್ವ ದೇಶಗಳಲ್ಲಿ ಇದನ್ನು ಬಳಸುವವರಿದ್ದಾರೆ. ೧೯೮೩ ರಷ್ಟು ಇತ್ತೀಚೆಗೆ ಜಪಾನಿನಲ್ಲಿ ೨೦ ಲಕ್ಷ ಅಬಾಕಸ್‌ಗಳು ತಯಾರಾಗುತ್ತಿದ್ದವು.

ಮೊಟ್ಟ ಮೊದಲು ಡಿಜಿಟಲ್ ಕಂಪ್ಯೂಟರ್‌ನ ವಿನ್ಯಾಸ ಮಾಡಿದವರು ಚಾರ್ಲ್ಸ್ ಬ್ಯಾಬೇಜ್. ಈತನನ್ನು ಕಂಪ್ಯೂಟರಿನ ಜನಕ ಎಂತಲೂ ಕರೆಯುತ್ತಾರೆ. ಈತ ಆಂಗ್ಲ ವಿಜ್ಞಾನಿ ಹಾಗೂ ಗಣಿತಜ್ಞನಾಗಿದ್ದನು. ಈತ ಪ್ರೋಗ್ರಾಮ್ ಮಾಡಬಲ್ಲ ಕಂಪ್ಯೂಟರ್‌ಗಳ ವಿನ್ಯಾಸವನ್ನು ೧೮೩೪ರಲ್ಲಿ ರಚಿಸಿದ. ಒಂದು ನಿರ್ದಿಷ್ಟ ಕೆಲಸವನ್ನು ಮಾಡಲು ಕಂಪ್ಯೂಟರಿಗೆ ನೀಡುವ ಆಜ್ಞೆಗಳ, ನಿರ್ದೇಶನಗಳ ಸಂಕಲನಕ್ಕೆ ಪ್ರೋಗಾಮ್ ಎನ್ನುತ್ತೇವೆ.

ಬ್ಯಾಬೇಜ್ ೨೦ ವರ್ಷಗಳ ಹಿಂದೆ ಕಂಡುಹಿಡಿದ ಕೂಡುವ ಯಂತ್ರ ಮುಂದುವರಿಕೆಯಾಗಿ ಅನಲಿಟಿಕಲ್ ಎಂಜಿನ್ ರೂಪುಗೊಂಡಿತ್ತು. ಇದು ಗಣಿತದ ಸಮಸ್ಯೆಗಳನ್ನು ತೂತು ಕೊರೆದ ಕಾರ್ಡುಗಳಿಂದ ಓದಬಲ್ಲದಿತ್ತು. ನಂತರ ಅವನ್ನು ಗುಣಿಸಿ ಹೇಳುತ್ತಿತ್ತು. ಈ ಯಂತ್ರಕ್ಕೆ ಕಾರ್ಯ ನಿರ್ದೇಶನಗಳನ್ನು ಆಡಾ ಎಂಬ ಗಣಿತಜ್ಞೆ ಬರೆದಿದ್ದಳು. ಈ ಬಗೆಯಲ್ಲಿ ಈಕೆ ಪ್ರಪಂಚದ ಮೊಟ್ಟ ಮೊದಲ ಕಂಪ್ಯೂಟರ್ ಪ್ರೋಗ್ರಾಮರ್ ಎನಿಸಿಕೊಂಡಳು. ಆದರೆ ಬ್ಯಾಬೇಜ್‌ನ ವಿಚಾರಗಳು ಆತನ ಕಾಲಕ್ಕಿಂತ

ತುಂಬಾ ಮುಂದೋಡಿದ್ದವು. ಆ ಕಾಲದಲ್ಲಿ ಅಂಥ ಅನಲಿಟಿಕಲ್ ಎಂಜಿನ್ ಅನ್ನು ಪೂರ್ಣ ರೀತಿಯಲ್ಲಿ ತಯಾರಿಸಲಾಗಲಿಲ್ಲ. ಅದೃಷ್ಟಕ್ಕೆ ಬ್ಯಾಬೇಜ್‌ನ ನೋಟು ಪುಸ್ತಕಗಳು ಹಾಳಾಗದೆ, ಮರೆತು ಹೋಗಿದ್ದ ಈ ವಿನ್ಯಾಸ ೧೯೩೭ರಲ್ಲಿ ಆಕಸ್ಮಿಕವಾಗಿ ಮತ್ತೆ ಬೆಳಕಿಗೆ ಬಂತು.

"೧೯ನೇ ಶತಮಾನದ ಕಡೆಯ ಭಾಗದಲ್ಲಿ ಹರ್ಮನ್ ಹೋಲರಿತ್ ಕಂಪ್ಯೂಟರಿನ ಶಕ್ತಿಯನ್ನು ೧೮೮೦ರ ಅಮೇರಿಕೆಯ ಜನಗಣತಿ ಮಾಹಿತಿಯನ್ನು ಸಂಗ್ರಹಿಸಲು ಬಳಸಿದ. ಈತ ಕಂಡು ಹಿಡಿದ ಮೊದಲ ವಿದ್ಯುತ್ ಕಂಪ್ಯೂಟರ್ ಈ ಕೆಲಸದ ಅಗಾಧ ಶ್ರಮವನ್ನು ಕುಗ್ಗಿಸಿತು. ೧೮೮೦ರಲ್ಲಿ ಜನಗಣತಿಗೆ ೧೮ ವಾರಗಳು ಬೇಕಾಗಿದ್ದರೆ, ೧೮೯೦ರಲ್ಲಿ ಜನಸಂಖ್ಯೆ ೬೦೦ ಲಕ್ಷಕ್ಕೆ ಏರಿದ್ದರೂ ಆರು ವಾರದಲ್ಲಿ ಜನಗಣತಿಯ ಕೆಲಸ ಮುಗಿದಿತ್ತು. ಹರ್ಮನ್ ಹೋಲರಿತ್ ಉದ್ಯಮವೊಂದನ್ನು ಆರಂಭಿಸಿದನು. ಮುಂದೆ ೧೯೨೪ರಲ್ಲಿ ಅದು ಪ್ರಪಂಚದ ಭಾರೀ ಕಂಪ್ಯೂಟರ್ ಉದ್ಯಮ ಸಂಸ್ಥೆಯಾಗಿ ಐ.ಬಿ.ಎಂ. ಆಗಿ ಬೆಳೆದು ನಿಂತಿತು. ಬ್ಯಾಬೇಜ್‌ನ ನಂತರ ಒಂದು ಶತಮಾನದವರೆಗೂ ಕಂಪ್ಯೂಟರ್ ರಂಗದಲ್ಲಿ ಹೆಚ್ಚಿನ ಅಭಿವೃದ್ಧಿ ಕಾಣಬರಲಿಲ್ಲ. ೧೯೪೦ರ ದಶಕದಲ್ಲಿ ಎಲೆಕ್ಟ್ರಾನಿಕ್ ನಿರ್ವಾತ ಕೊಳವೆಗಳಿಂದ ಕಂಪ್ಯೂಟರ್‌ಗಳನ್ನು ತಯಾರಿಸಿದಾಗ ಕಂಪ್ಯೂಟರಿನ ನಿಜವಾದ ವಿಕಾಸ ಆರಂಭವಾಯಿತು."[೨]

ಪೆನ್ಸಿಲೇನಿಯಾ ವಿಶ್ವವಿದ್ಯಾಲಯದಲ್ಲಿ ೧೯೪೦ರಲ್ಲಿ ನಿರ್ಮಿಸಿದ ಎನಿಯಾಕ್ ಎಂಬ ಮೊಟ್ಟ ಮೊದಲ ಹಾಗೂ ಅತಿ ದೊಡ್ಡ ಎಲೆಕ್ಟ್ರಾನಿಕ್ ಕಂಪ್ಯೂಟರ್ ಅಮೇರಿಕೆಯ ಭೂಸೇನೆಯಲ್ಲಿ ಬಳಕೆಗೆ ಬಂದಿತು. ಯುದ್ಧದ ಹೊಸ ತೋಪುಗಳನ್ನು ಹಾರಿಸಿದಾಗ ಅವು ಹಾಯುವ ಹಾದಿ, ಸಾಗುವ ದೂರ, ದಿಕ್ಕು, ಅವು ಹಿಡಿವ ಮಾರ್ಗವನ್ನು ಗುಣಿಸಲು ಈ ಕಂಪ್ಯೂಟರನ್ನು ಬಳಸಲಾಯಿತು. ಈ ಮೂಲಕ ಅಸ್ತ್ರಗಳನ್ನು ಶತ್ರು ಪಡೆಯ ಮೇಲೆ ನಿಖರವಾಗಿ ಗುರಿ ಇಟ್ಟು ಹಾರಿಸಲು ಅನುಕೂಲವಾಯಿತು. ಎನಿಯಾಕ್ ಅನೇಕ ಕೋಣೆಗಳಲ್ಲಿ ಹರಡಿ ಹಿಡಿಯುವಷ್ಟು ದೊಡ್ಡದಿದ್ದು, ೧೫,೦೦೦ ಚದುರ ಅಡಿಗಳಷ್ಟು ಜಾಗವನ್ನು ಆಕ್ರಮಿಸಿತ್ತು. ೩೦ ಟನ್‌ಗಳಷ್ಟು ಭಾರದ ಈ ಕಂಪ್ಯೂಟರ್‌ನಲ್ಲಿ ೧೮,೦೦೦ ನಿರ್ವಾತದ ಕೊಳವೆಗಳು, ೧೭,೦೦೦ ರೆಸಿಸ್ಟರುಗಳು, ೧೦,೦೦೦ ಕೆಪಾಸಿಟರುಗಳು, ೬,೦೦೦ ಸ್ವಿಚ್‌ಗಳು ಇದ್ದವು. ಅಗಾಧ ಮೊತ್ತದಲ್ಲಿ ವಿದ್ಯುತ್ತಿನ ಅಗತ್ಯ ಇದಕ್ಕಿತ್ತು. ಹತ್ತು ಅಂಕಿಯ ಸಂಖ್ಯೆಯನ್ನು ಗುಣಿಸಲು ಈ ಕಂಪ್ಯೂಟರಿಗೆ ಮೂರು ನಿಮಿಷ ಹಿಡಿಸುತ್ತಿತ್ತು.

೧೯೬೦ರ ದಶಕದ ಆರಂಭದವರೆಗೂ ಕಂಪ್ಯೂಟರ್ ಬಹಳ ದುಬಾರಿಯಾಗಿದ್ದು, ವಿಶೇಷ ಕೆಲಸಗಳಿಗೆ ಮಾತ್ರ ಸೀಮಿತವಿತ್ತು. ಭಾರೀ ವಿಶ್ವವಿದ್ಯಾಲಯಗಳಲ್ಲಿ, ಸಂಶೋಧನಾ ಕೇಂದ್ರಗಳಲ್ಲಿ ಮಾತ್ರ ಕಾಣ ಸಿಗುತ್ತಿತ್ತು. ೧೯೬೦ರ ಮಧ್ಯಭಾಗದ ಹೊತ್ತಿಗೆ ವಿದೇಶಗಳಲ್ಲಿ ಕಂಪ್ಯೂಟರ್ ವಾಣಿಜ್ಯ ಜಗತ್ತಿನಲ್ಲಿ ದೊಡ್ಡ ಕ್ರಾಂತಿ ತಂದಿತು. ಐ.ಬಿ.ಎಂ. ಏಪ್ರಿಲ್ ೧೯೬೪ರಲ್ಲಿ ಮೇನ್ ಫ್ರೇಮ್ ಕಂಪ್ಯೂಟರ್‌ನ್ನು ಮಾರು

ಕಟ್ಟೆಗೆ ಪರಿಚಯಿಸಿದಾಗ ೩೩,೦೦೦ ಕಂಪ್ಯೂಟರ್‌ಗಳು ಮಾರಾಟವಾದವು. ೧೯೭೦ರ ದಶಕದಲ್ಲಿ ಡೆಕ್ ಕಂಪನಿ, ಪಿಡಿಪಿ ೧೧ ಮತ್ತು ವ್ಯಾಕ್ಸ್ ಕಂಪ್ಯೂಟರುಗಳನ್ನು ಹೊರತಂದಿತು. ಇವು ಅನೇಕ ಅಳತೆಯಲ್ಲಿ, ಬೆಲೆಯಲ್ಲಿ ಒದಗಿ ಬಂದು, ವಿವಿಧ ಉಪಯೋಗಕ್ಕೆ ಸೂಕ್ತವಾಗಿದ್ದವು. ಅಂದಿನಿಂದ ಕಂಪ್ಯೂಟರ್ ಗಾತ್ರ ದಲ್ಲಿ ಕಿರಿದಾಗುತ್ತ, ಸಾಮರ್ಥ್ಯದಲ್ಲಿ ಹಿಗ್ಗುತ್ತಾ, ಬೆಲೆಯಲ್ಲಿ ಅಗ್ಗವಾಗುತ್ತ ಸತತವಾಗಿ ವಿಕಾಸಗೊಳ್ಳುತ್ತಿದೆ. ಭಾರೀ ಗಾತ್ರದ ನಿರ್ವಾತದ ಕೊಳವೆಗಳು ಎಂದೋ ಮರೆಯಾಗಿ ಬಿಡಿ ಬಿಡಿ ಟ್ರಾನ್ಸಿಸ್ಟರ್‌ಗಳ ಬಳಕೆ ಯೂ ಮುಗಿದು ಹೋಗಿ, ಪುಟ್ಟ ಐ.ಸಿ. ಚಿಪ್ ತಾಂತ್ರಿಕತೆ ಮುಂದುವರೆದಿದೆ. ಈ ಚಿಪ್‌ಗಳು ಎಷ್ಟು ಸಣ್ಣದಿವೆ ಎಂದರೆ ಈ ಚಿಪ್‌ಗಳಲ್ಲಿ ಮುದ್ರಿತ ವಿದ್ಯುತ್ಮಂಡಲಗಳ ವಿವರಗಳನ್ನು ನೋಡಲು ಅತಿ ಶಕ್ತಿ ಶಾಲಿ ಸೂಕ್ಷ್ಮದರ್ಶಕಗಳು ಬೇಕು.

ಕಂಪ್ಯೂಟರ್ ಅಳತೆಯಲ್ಲಿ ಕುಗ್ಗಿ, ಅದರ ಅನುಕೂಲವಾಗಿ, ಇಂದು ಮೇಜಿನ ಮೇಲೆ ಕೂಡುವ ಕಂಪ್ಯೂಟರುಗಳು, ತೊಡೆಯ ಮೇಲೆ ಕೂಡುವ ಕಂಪ್ಯೂಟರುಗಳಲ್ಲದೆ ನೋಟು ಬುಕ್ ಅಳತೆಯ ಕಂಪ್ಯೂಟರುಗಳು, ಅಂಗೈಯಲ್ಲಿ ಹಿಡಿಸುವ ಕಂಪ್ಯೂಟರುಗಳು ಹೊರಬಂದು, ಅತಿ ಸಣ್ಣ ಅವಧಿಯಲ್ಲಿ ಅಗಾಧವಾಗಿ ವಿಕಾಸಗೊಂಡಿವೆ. ಕೇವಲ ೨ ದಶಕಗಳ ಅಂತರದಲ್ಲಿ ಈ ಪವಾಡ ಸಾಧ್ಯವಾಗಿದೆ. ಸಣ್ಣ ಗಾತ್ರದ, ಅಧಿಕ ಶಕ್ತಿಯ, ಕಡಿಮೆ ಬೆಲೆಯ ಕಂಪ್ಯೂಟರಿನ ವಿಕಾಸ ಮತ್ತೂ ಮುಂದುವರೆದಿದೆ.

ಕಂಪ್ಯೂಟರ್ ಭಾಷೆಯೇ ಮೋಜಿನದು. ಕಂಪ್ಯೂಟರ್ ಬೂಟ್ ಮಾಡಿ ಎನ್ನುತ್ತಾರೆ. ಅಂದರೆ ಕಾಲೆತ್ತಿ ಒದೆಯಿರಿ ಎಂದಲ್ಲ. ಇದರ ಅರ್ಥ ಕಂಪ್ಯೂಟರಿಗೆ ವಿದ್ಯುತ್ ಸರಬರಾಜು ಬರುವ ಸ್ವಿಚನ್ನು ಒತ್ತುವುದು. ಇಲ್ಲ ರೀಸೆಟ್ ಗುಂಡಿಯನ್ನು ಅಮುಕಿದರೂ ಆಯಿತು. ಸುಮ್ಮನೆ ಕಂಪ್ಯೂಟರ್ ಆನ್ ಮಾಡಿ ಎಂದಿದ್ದರಾಗಿತ್ತು. ನಿಮ್ಮ ಕಂಪ್ಯೂಟರಿನಲ್ಲಿ ಎಷ್ಟು ಪೋರ್ಟ್ ಇದೆ? ಕಂಪ್ಯೂಟರ್ ಜಾಣರು ಕೇಳುತ್ತಾರೆ. ನೀವು ಇಂಗ್ಲೀಷ್ ನಿಘಂಟು ತೆಗೆದು ಪೋರ್ಟ್ ಎಂಬ ಪದ ಹುಡುಕಿದರೆ, ಏನು ಕಾಣುವಿರಿ? ಬಂದರು, ಹಡಗಿನ ಪಕ್ಕ ಹೀಗೆ ಹತ್ತು ಹಲವು ಅರ್ಥಗಳು ಸಿಗುತ್ತವೆ. ಅದರಲ್ಲೆಲ್ಲೂ ಪೋರ್ಟ್ ಎಂದರೆ ಕಂಪ್ಯೂಟರಿನ ಬೆನ್ನಿನಲ್ಲಿ ಕೇಬಲ್ ತುರುಕಲು ಇರುವ ಒಂದು ತೂತು ಎಂದು ನಿಮಗೆ ತಿಳಿಸುವುದಿಲ್ಲ. ಹೆಚ್ಚೆಂದರೆ ಅದನ್ನು ಸಾಕೆಟ್ ಎನ್ನಬಹುದಿತ್ತು. ನಿಮಗೆ ಈ ಮೌಸ್, ವಿಂಡೋಸ್, ಪೋರ್ಟ್ ಅರ್ಥ ಯಾವ ಇಂಗ್ಲೀಷ್ ನಿಘಂಟುವಿನಲ್ಲೂ ಸಿಗುವುದಿಲ್ಲ. ಇವು ಕಂಪ್ಯೂಟರದೇ ಆದ ವಿಶೇಷ ಭಾಷೆ. ಹೊಸ ಕಂಪ್ಯೂಟರ್ ನಿಘಂಟುಗಳು ಈ ಹೊಸ ಭಾಷೆಗೆಂದೇ ಸೃಷ್ಟಿಯಾಗಿವೆ.

'ಗಣಕಯಂತ್ರಕ್ಕೆ ಅಂತರ್ಜಾಲದ ಜೋಡಣೆ ಬೇಕು. ಜೊತೆಗೊಂದು ಇಲಿ'ಯನ್ನು ಕೊಡಿ ಎಂದು ನೀವು ಯಾವುದಾದರೂ ಸೈಬರ್‌ಗಳಲ್ಲಿ, ಅಂಗಡಿಯಲ್ಲಿ ಕೇಳಿದರೆ, ಯಾರಿಗೂ ನಾವು ಹೇಳುವ

ಭಾಷೆ ಅರ್ಥವಾಗೋಲ್ಲ. ಅದರಲ್ಲೂ ಕಂಪ್ಯೂಟರ್ ಉದ್ಯಮದಲ್ಲಿರುವ ಈ ನವಪೀಳಿಗೆಗಂತೂ ಖಂಡಿತ ತಿಳಿಯುವುದಿಲ್ಲ. ಒಂದು ಕಾಲಕ್ಕೆ. ಬರೀ ಗುಣಿಸುವ ಯಂತ್ರವಾಗಿ ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ಅಡಗಿದ್ದ ಕಂಪ್ಯೂಟರ್, ಇಂದು ದೂರದರ್ಶನ, ವೀಡಿಯೋ, ರೇಡಿಯೋ, ದೂರವಾಣಿ ಏನೆಲ್ಲದರೊಡನೆ ಜೊತೆಯಾಗಿ ನಮ್ಮ ನಿಮ್ಮ ಮನೆ ಕಛೇರಿಗಳ ಮೇಜಿಗೆ ಬಂದು ಕುಳಿತಿದೆ. ಬಹು ಮಾಧ್ಯಮಗಳ ಸಂಪರ್ಕ ಸೇತುವೆಯಾದ ಕಂಪ್ಯೂಟರ್ ಬಳಕೆ ಅನಿವಾರ್ಯವಾಗಿರುವ ಈ ದಿನಗಳಲ್ಲಿ ಕಂಪ್ಯೂಟರ್ ಭಾಷೆ ಕಲಿಯುವುದೂ ಸಹ ಅನಿವಾರ್ಯವಾಗಿದೆ. ಅದರಲ್ಲೂ ಕನ್ನಡದಲ್ಲಿ ಏಕರೂಪದ ಪರ್ಯಾಯ ಪದಗಳು ನಿರ್ಮಾಣವಾಗದೆ, ಅತಿ ವೇಗವಾಗಿ ಬೆಳೆಯುತ್ತಿರುವ ಕಂಪ್ಯೂಟರ್ ತಂತ್ರಜ್ಞಾನಕ್ಕೆ ಅಷ್ಟೇ ವೇಗವಾಗಿ ಕನ್ನಡ ಭಾಷೆಯಲ್ಲಿನ್ನೂ ಪದಗಳು ದೊರೆಯದ ಕಾರಣಕ್ಕೆ ಈ ಅನಿವಾರ್ಯತೆ ಹೆಚ್ಚಿದೆ. ಅದರೆ ೧೯೯೭ರಲ್ಲಿ ಸ್ಥಾಪಿತವಾದ ಕನ್ನಡ ಗಣಕ ಪರಿಷತ್ತು, ಕಂಪ್ಯೂಟರ್ ಕುರಿತು ಕನ್ನಡಿಗರಲ್ಲಿ ಜಾಗೃತಿ ಮೂಡಿಸುವತ್ತ ಮತ್ತು ಕಂಪ್ಯೂಟರ್ ಕನ್ನಡ ಪದಕೋಶ ನಿರ್ಮಿಸುವತ್ತ ಹೆಜ್ಜೆ ಹಾಕಿದೆ. ಕನ್ನಡ ಗಣಕ ಪರಿಷತ್ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಶಿಷ್ಟತೆ ಮತ್ತು ವ್ಯಾಪಕ ಬಳಕೆಗಿರುವ ಸ್ವಯಂ ಸೇವಾ ಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ಕನ್ನಡ ಗಣಕ ಪರಿಷತ್, ಕನ್ನಡ ಸಾಫ್ಟ್‌ವೇರ್ ನುಡಿಯನ್ನು ಹೊರತಂದಿದೆ. ನುಡಿ ಕನ್ನಡ ಲಿಪಿ ತಂತ್ರಾಂಶವು ಕರ್ನಾಟಕ ಸರ್ಕಾರ ನಿಗದಿಪಡಿಸಿರುವ ಸ್ಟಾಂಡರ್ಡ್‌ನಲ್ಲಿ ತಯಾರಾಗಿದೆ. ನುಡಿಯನ್ನು ಪದ ಸಂಸ್ಕರಣೆ, ದತ್ತ ಸಂಸ್ಕರಣೆ, ಇಂಟರ್ ನೆಟ್ ಮೊದಲಾದ ಎಲ್ಲಾ ಕೆಲಸಗಳಿಗೂ ಬಳಸಿಕೊಳ್ಳಬಹುದು. ಉಚಿತವಾಗಿ ದೊರೆಯುವ ನುಡಿ ಸಾಫ್ಟ್‌ವೇರನ್ನು ಯಾರು ಬೇಕಾದರೂ ಬಳಸಬಹುದು. "ಕಂಪ್ಯೂಟರ್‌ನಲ್ಲಿ ಎಲ್ಲಾ ಕೆಲಸಗಳಿಗೂ ಬೇರೆ ಬೇರೆ ಆಯಾಮಗಳಿರುತ್ತವೆ. ಕೇವಲ ಕಂಪ್ಯೂಟರ್ ಎಲ್ಲವನ್ನು ಮಾಡಲು ಸಾಧ್ಯವಿಲ್ಲ. ನಾವು ಏನು ಹೇಳಿದರೂ ಮಾಡುವ ಕ್ರಿಯೆ ಇದರಲ್ಲಿರುವುದಿಲ್ಲ. ನಾವು ಬೇಕೆಂದು ಅದನ್ನು ಬೆರಳಚ್ಚಿನಿಂದ ನಮೂದಿಸಿದರೆ ಅದು ನಮಗೆ ತೋರ್ಪಡಿಸುತ್ತದೆ."[೩]

ನೂರಾರು ಜನ ಮಾಡುವ ಕೆಲಸಗಳು ಕೇವಲ ಒಂದು ಕಂಪ್ಯೂಟರ್ ಮತ್ತು ಒಬ್ಬ ವ್ಯಕ್ತಿಯಿಂದ ಸಾಧ್ಯವಾಗುತ್ತದೆ. ಇದರಿಂದ ಕಾಲ ವಿಳಂಬದ ಸ್ಥಿತಿ ಉಂಟಾಗುವುದಿಲ್ಲ. ಕಂಪ್ಯೂಟರ್ ಬಂದಾಗಿನಿಂದ ಜನ ತಾವು ಮಾಡಬೇಕೆಂದಿದ್ದನ್ನು ತಕ್ಷಣ ಮಾಡಲು ಸಜ್ಜಾಗುತ್ತಿದ್ದಾರೆ. ಇದರಿಂದ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯು ಸಹ ಅಭಿವೃದ್ಧಿ ಹೊಂದುತ್ತದೆ. ನೂರಾರು ಜನ ಕೂತು ತಿಂಗಳು ಗಟ್ಟಲೆ ಮಾಡಬೇಕಾದ ಕಾರ್ಯವನ್ನು ಕಂಪ್ಯೂಟರ್ ಕೇವಲ ಗಂಟೆಗಳ, ದಿನಗಳ ಅವಧಿಯಲ್ಲಿ ಮುಗಿಸುತ್ತದೆ. ಆ ಜನರ ಪಾಲಿಗೆ ಇದು ಸಮೀಪ ಸಂಬಂಧಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಪ್ರಸ್ತುತ ಸಮಾಜದಲ್ಲಿ ಕಾಣುತ್ತಿದ್ದೇವೆ. ಕಛೇರಿಯ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಲು, ಕಡತಗಳನ್ನು ಸಂಗ್ರ

ಹಿಸಲು ಇಂದು ಗಣಕಯಂತ್ರದ ಸಹಾಯ ಬೇಕು. ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಯನ್ನು ಅಳವಡಿಸಿರುವುದರಿಂದ ಸರ್ಕಾರಿ ಕಛೇರಿಗಳಲ್ಲೂ ಇದರ ಪ್ರಾಮುಖ್ಯತೆ ಹೆಚ್ಚುತ್ತಿದೆ.

ಗಣಕಯಂತ್ರದಲ್ಲಿ ಕೆಲಸವನ್ನು ಮಾಡಲು ಅನೇಕ ವಿಭಾಗಗಳಿವೆ. ಸಂಖ್ಯೆಗಳನ್ನು, ನಿರ್ದೇಶನಗಳನ್ನು ಓದುವ ಭಾಗ, ಅವನ್ನು ನೆನಪಿನಲ್ಲಿಟ್ಟುಕೊಳ್ಳಲು ಒಂದು ಸ್ಮರಣ ವಿಭಾಗ, ಕಂಪ್ಯೂಟರಿಗೆ ಮುಂದಿನ ಹೆಜ್ಜೆ ಯಾವುದು? ಏನು ಮಾಡಬೇಕು? ಎಂದು ಹೇಳಿ ಮಾಡಿಸುವ ನಿಯಂತ್ರಣ ವಿಭಾಗ, ಸಮಸ್ಯೆಯನ್ನು ಸಂಸ್ಕರಿಸುವ ಒಂದು ಕೇಂದ್ರ ಸಂಸ್ಕರಣ ವಿಭಾಗ, ಉತ್ತರವನ್ನು ಹೊರ ಹಾಕುವ ವಿಭಾಗ ಹೀಗೆ ಕಂಪ್ಯೂಟರಿನಲ್ಲಿ ಮುಖ್ಯವಾಗಿ ಐದು ಭಾಗಗಳಿವೆ. ಅವುಗಳನ್ನು ಇನ್‌ಪುಟ್ ವಿಭಾಗ, ಹೊರಹಾಕುವ ಔಟ್‌ಪುಟ್ ವಿಭಾಗ, ಸ್ಮರಣ (ಮೆಮೋರಿ) ವಿಭಾಗ, ನಿಯಂತ್ರಣ (ಕಂಟ್ರೋಲ್) ವಿಭಾಗ, ಗಣಿತ ಮತ್ತು ತರ್ಕದ (ಅರ್ತಮೆಟಿಕ್ ಅಂಡ್ ಲಾಜಿಕ್) ವಿಭಾಗ ಎಂದು ಹೆಸರಿಸಲಾಗುತ್ತದೆ.

ಈ ರೀತಿಯಾಗಿ ನಮಗೆ ಉಪಯುಕ್ತವಾದ ಕೆಲಸ ಕಾರ್ಯಗಳಿಗೆ ನೆರವಾಗುತ್ತಿರುವ ಗಣಕಯಂತ್ರ ಇಂದು ಪ್ರಪಂಚದಲ್ಲೆ ಜನಮನ್ನಣೆ ಪಡೆದ ಯಂತ್ರವಾಗಿ ಬೆಳೆಯುತ್ತಿದೆ. ದೊಡ್ಡ ಗಾತ್ರದಲ್ಲಿ ಪ್ರಾರಂಭವಾದ ಈ ಯಂತ್ರವು ಇಂದು ಅಂಗೈಯಷ್ಟು ಗಾತ್ರಕ್ಕೆ ಬಂದಿದ್ದು, ಇಡೀ ವಿಶ್ವದಲ್ಲಿನ ಮಾಹಿತಿಯನ್ನು ನಮ್ಮ ಕಣ್ಣ ಮುಂದೆ ಇಡುತ್ತಿರುವ ಮಹೋನ್ನತ ಯಂತ್ರವಾಗಿದೆ. ನಾವು ಪ್ರಾಚೀನ ಕಾಲಕ್ಕೆ ಒಮ್ಮೆ ಕಣ್ಣಾಡಿಸಿದರೆ ಅಲ್ಲಿ ಸಿಗುವುದು ಪುಸ್ತಕಗಳು, ಅವುಗಳನ್ನು ನಾವು ಎಷ್ಟು ಕಷ್ಟಪಟ್ಟು ಅಂಗಡಿಯಿಂದ ಅಂಗಡಿಗೆ ಅಲೆದು ಖರೀದಿ ಮಾಡಬೇಕಾಗಿತ್ತು. ಆದರೆ ಇಂದು ಬೇಕೆನಿಸಿದ ಮಾಹಿತಿಯನ್ನು ತಟ್ಟನೆ ಒದಗಿಸುವ ಜಾಲ ತಾಣಗಳಿವೆ.

ಇಂದಿನ ಪರಿಸ್ಥಿತಿಯಲ್ಲಿ ಮನೆಗೊಂದು ದೂರದರ್ಶನದಂತೆ ಮನೆಗೊಂದು ಗಣಕಯಂತ್ರವನ್ನೂ ನೋಡುತ್ತೇವೆ. ಹಿಂದೆ ಕೇವಲ ನಗರಕ್ಕೆ ಸೀಮಿತವಾಗಿದ್ದ ಗಣಕಯಂತ್ರ ಇಂದು ಹಳ್ಳಿಗಳನ್ನೂ ಪ್ರವೇಶಿಸಿದೆ. ನಗರದಲ್ಲಿ ರಸ್ತೆಗೊಂದು ಅಂತರ್ಜಾಲದ ಅಂಗಡಿಗಳು ಹುಟ್ಟಿಕೊಂಡಿವೆ. ಅದೇ ರೀತಿ ಹಳ್ಳಿಗಳಲ್ಲಿಯೂ ಗಣಕಯಂತ್ರದ ಜೊತೆಗೆ ಅಂತರ್ಜಾಲ ವ್ಯವಸ್ಥೆಯನ್ನು ಮಾಡಿಕೊಂಡಿರುವ ಜನ ಬಹಳವಾಗಿದ್ದಾರೆ.

ಹಿಂದೆ ವಿದ್ಯಾರ್ಥಿಗಳನ್ನು ಗಣಕಯಂತ್ರದ ಬಗ್ಗೆ ಕೇಳಿದರೆ ಆಗ ಅವರ ಉತ್ತರ ಪುಸ್ತಕದಲ್ಲಿ ನೋಡಿದ್ದೇವೆ ಎಂಬುದಾಗಿರುತ್ತಿತ್ತು. ಆದರೆ ವಿಜ್ಞಾನ, ತಂತ್ರಜ್ಞಾನ ಬೆಳೆದಂತೆ ವಿದ್ಯಾರ್ಥಿಗಳಲ್ಲಿ ಕಂಪ್ಯೂಟರ್ ಗೊತ್ತೇ ಎಂದರೆ ಸಾಕು. ಅವರು ಅದರ ಇತಿಹಾಸವನ್ನೇ ಹೇಳುವ ಸಾಮರ್ಥ್ಯ ಹೊಂದಿದ್ದಾರೆ. ಇಂದು ಶಾಲೆಗಳಲ್ಲಿ ಗಣಕಯಂತ್ರಕ್ಕೆ ಪ್ರತ್ಯೇಕ ತರಗತಿಗಳನ್ನು ಏರ್ಪಡಿಸುತ್ತಿದ್ದಾರೆ. ಸರ್ಕಾರವು ಸಹ

ಸರ್ಕಾರಿ ಶಾಲೆಗಳಿಗೆ ಗಣಕಯಂತ್ರಗಳ ವ್ಯವಸ್ಥೆಯನ್ನು ಕಲ್ಪಿಸಿದೆ. ವಾರಕ್ಕೆ ೨-೩ ತರಗತಿಗಳನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳಿಗೆ ನೀಡಲಾಗಿದ್ದು, ಇದರಿಂದ ಮಾಡಿ-ಕಲಿ ಕಾರ್ಯವು ಅಭಿವೃದ್ಧಿಯಲ್ಲಿ ಸಾಗುತ್ತಿದೆ. ೧೦ ವರ್ಷಗಳ ಹಿಂದೆ ನಗರದ ಒಂದೊಂದು ವಿಭಾಗದಲ್ಲಿ ೫-೬ ಅಂತರ್ಜಾಲ ಅಂಗಡಿಗಳನ್ನು ಕಾಣಬಹುದಾಗಿತ್ತು. ಈಗ ಒಂದು ವಿಭಾಗದಲ್ಲಿ ೧೦-೧೫ ಅಂಗಡಿಗಳನ್ನು ಕಾಣಬಹುದು. ಇದರಿಂದ ಗಣಕ ಪ್ರಿಯರ ಸಂಖ್ಯೆ ಹೆಚ್ಚಾಗುತ್ತಿರುವುದು ತಿಳಿಯುತ್ತದೆ.

ಪ್ರಾರಂಭದಲ್ಲಿ ಕೇವಲ ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಅಂತರ್ಜಾಲ ಪದ್ಧತಿ ಈಗ ವಿಶ್ವವ್ಯಾಪಿಯಾಗಿ ಲೆಕ್ಕವಿಲ್ಲದಷ್ಟು ಜನರು ಇದರ ಸದುಪಯೋಗವನ್ನು ಪಡೆಯುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಭಾಷೆಯು ಸಹ ಅಭಿವೃದ್ಧಿ ಹೊಂದುತ್ತಿರುವುದು ಸಹಕಾರಿಯಾಗಿದೆ. ಎಲ್ಲ ವಲಯಗಳು ತಂತ್ರಜ್ಞಾನದ ಸಹಾಯದಿಂದ ಅಭಿವೃದ್ಧಿಯನ್ನು ಸಾಧಿಸುತ್ತಿದ್ದರೆ, ವಾಣಿಜ್ಯ ವಲಯದಂತಹ ಕೆಲವು ವಲಯಗಳು ಭಾಷಾ ತಂತ್ರಜ್ಞಾನವನ್ನು ಅವಲಂಬಿಸಿವೆ. ಇಂದು ಭಾಷಾ ತಂತ್ರಜ್ಞಾನದ ಮಾರುಕಟ್ಟೆ ಅತಿ ವೇಗವಾಗಿ ಬೆಳೆಯುತ್ತಿದೆ. ಭಾಷಾ ತಂತ್ರಜ್ಞಾನಕ್ಕೆ ಅಗತ್ಯವಾದ ಅನೇಕ ಸಹಾಯಕ ತಂತ್ರಜ್ಞಾನಗಳನ್ನು ಸಹ ಅಭಿವೃದ್ಧಿಪಡಿಸಲಾಗುತ್ತಿದೆ. ಉದಾಹರಣೆಗೆ – ಕಾಗುಣಿತ, ವ್ಯಾಕರಣ, ಅನುವಾದ ಸಂಬಂಧಿ ತಂತ್ರಜ್ಞಾನ ಹೀಗೆ ಒಂದೊಂದಾಗಿ ಸೇರಿ ಇಂದು ಭಾಷಾ ತಂತ್ರಜ್ಞಾನ ಕ್ಷೇತ್ರ ಸಾಕಷ್ಟು ಬೆಳೆದಿದೆ.

ಕನ್ನಡ ಭಾಷೆಯು ಆಧುನಿಕ ಪ್ರಗತಿಯಿಂದ ಹಿಂದೆ ಉಳಿಯಲು ಅಸಾಧ್ಯವಾಗಿದೆ. ಏಕೆಂದರೆ ಇದರ ಮಹತ್ವ ಹೆಚ್ಚುತ್ತಿದೆ. ದಿನೇ ದಿನೇ ಕನ್ನಡಿಗರು ಹೆಚ್ಚುತ್ತಿರುವ ವಿಶ್ವದಲ್ಲಿ ಈಗಾಗಲೇ ಕನ್ನಡಕ್ಕೆ ಸಂಬಂಧಿಸಿದ ಅನೇಕ ಅಂತರ್ಜಾಲ ತಾಣಗಳನ್ನು ಅಮೇರಿಕದಲ್ಲೂ ಉಪಯೋಗಿಸುತ್ತಿರುವುದು ಕನ್ನಡ ಭಾಷಾ ಬೆಳವಣಿಗೆಗೆ ಸಾಕ್ಷಿಯಾಗಿದೆ. ಭಾಷಾ ಕ್ಷೇತ್ರವು ಈ ಆಧುನಿಕ ಯುಗದಲ್ಲಿ ಆಧುನಿಕ ಪ್ರಜ್ಞೆಯಿಂದ ದೂರವಾಗಲು ಸಾಧ್ಯವಾಗುವುದಿಲ್ಲ. ಹಾಗಾಗಿಯೇ ಇದು ಭಾಷಿಕ ಜಗತ್ತಿಗೆ, ಕಂಪ್ಯೂಟರ್ ಮತ್ತು ಅಂತರ್ಜಾಲ ಪದ್ಧತಿಗಳು ಸೇರಿಕೊಂಡು ಬೆಳವಣಿಗೆಯ ವೇಗ ದ್ವಿಗುಣಗೊಳ್ಳುತ್ತಿದೆ.

ಭಾಷಾ ವಿಶ್ಲೇಷಣೆಯಲ್ಲಿ, ಅನುವಾದದ ಕ್ಷೇತ್ರದಲ್ಲಿ, ಭಾಷಾಧ್ಯಯನದಲ್ಲಿ ಇಂದು ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳದೆ ಇರುವುದರಿಂದ ತಂತ್ರಜ್ಞಾನದ ಮೂಲಕ ಭಾಷೆ ಮತ್ತು ಅದರ ಸಂಶೋಧನೆಯ ಉಪಯೋಗವನ್ನು ಪಡೆಯಬೇಕಾಗಿದೆ. ಮೊದ ಮೊದಲು ಸೀಮಿತ ವಲಯದಲ್ಲಿ ನಡೆಯುತ್ತಿದ್ದ ಭಾಷಿಕ ಚಟುವಟಿಕೆಗಳು ಈಗ ದೇಶವ್ಯಾಪಿಯಾಗಿದೆ. ಬರಹದ ಕ್ರಿಯೆಯಿಂದ ಮೂಡಿಸುವ ಕ್ರಿಯೆಗೆ ಜಿಗಿದು, ಇಂದು ಮಾತಿನಿಂದ ಬರಹಕ್ಕೆ, ಬರಹದಿಂದ ಮಾತಿಗೆ ಎನ್ನುವ ಮಟ್ಟಕ್ಕೆ ನಾವು ತಲುಪಿದ್ದೇವೆ. ಅದಕ್ಕೆ ಮುಖ್ಯ ರೂವಾರಿಗಳು ತಂತ್ರಜ್ಞರು ಮತ್ತು ಸಂಶೋಧಕರು ಎಂಬುದನ್ನು ಮರೆಯಲಾಗದು.

ವಿಶ್ವದಲ್ಲಿ ಇಂದು ಮಾಹಿತಿ ತಂತ್ರಜ್ಞಾನದ ಮಹಾಕ್ರಾಂತಿಯಿಂದ ಅಗಾಧವಾದ ತಂತ್ರಜ್ಞಾನ ಪ್ರಗತಿಯಾಗಿ ಎಲ್ಲ ಕ್ಷೇತ್ರಗಳು ವೇಗವಾಗಿ ಬೆಳೆಯುತ್ತಿವೆ. ಮಾನವನು ತನ್ನ ಆಲೋಚನಾ ಶಕ್ತಿಯನ್ನು ಮತ್ತಷ್ಟು ಅಭಿವೃದ್ಧಿಪಡಿಸುವತ್ತ ಮುಂಬರಿಯುತ್ತಿದ್ದಾನೆ. ಹಳೆಯದರಿಂದ ಹೊಸದದ್ದರೆಡೆಗೆ ಸಾಗುವುದು ಮನುಷ್ಯನ ಸಹಜ ಕ್ರಿಯೆ. ಆದ್ದರಿಂದಲೆ ಇಂದು ಕೈಯಿಂದ ಕೂಡುವ, ಕಳೆಯುವ, ಬರೆಯುವ ಕಾರ್ಯಗಳನ್ನು ಯಂತ್ರಗಳಿಂದ ಮಾಡಿಸುವ ಸಾಹಸಕ್ಕೆ ಹೋಗುತ್ತಿರುವುದು ಸಹಜ ಪ್ರಕ್ರಿಯೆ. ಆದ್ದರಿಂದ ಇಂದು ಬಳಸಲಾಗುತ್ತಿರುವ ಅಂತರ್ಜಾಲವು ವಿಶ್ವದ ಏಕೈಕ ಮಾಹಿತಿ ಕೇಂದ್ರವೆಂತಲೂ ತಿಳಿಯಬಹು ದಾಗಿದೆ. ಏಕೆಂದರೆ ಮನೆಯಿಂದ ಪ್ರಾರಂಭವಾಗಿ ಕಛೇರಿ ಖಾಸಗಿ ಕಂಪನಿ, ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು, ಅಧ್ಯಯನ ಕೇಂದ್ರಗಳು, ವಿವಿಧ ಸರ್ಕಾರಿ ಕಛೇರಿಗಳು, ಆಸ್ಪತ್ರೆಗಳು, ಸಾರಿಗೆ, ಅಂಚೆ, ರೈಲ್ವೆ ಇನ್ನೂ ಮುಂತಾದ ವಿಭಾಗಗಳಲ್ಲಿ ಈ ಕಂಪ್ಯೂಟರ್ ಹಾಗೂ ಅಂತರ್ಜಾಲದ ಉಪಯೋಗ ಸಾಧ್ಯವಾಗಿದೆ. ಏಕೆಂದರೆ ಇಂದು ನಾವು ಬೇಕಾದ ಮಾಹಿತಿಯನ್ನು ತಕ್ಷಣ ಪಡೆಯಲು ಈ ಅಂತರ್ಜಾಲವೇ ಸಹಾಯಕವಾಗಿದೆ. ಕಂಪ್ಯೂಟರ್ ಮತ್ತು ಅಂತರ್ಜಾಲ ಒಂದು ದಿನ ಇಲ್ಲವಾದರೆ ಆ ದಿನ ಸೂರ್ಯನಿಲ್ಲದ ಜಗತ್ತಿನಂತೆ ಭಾಸವಾಗುತ್ತದೆ. ಅಷ್ಟರ ಮಟ್ಟಿಗೆ ಇದು ಜನಮತ ಸ್ಥಾನ ಪಡೆದಿದೆ. ಹಳ್ಳಿಯಿಂದ ದಿಲ್ಲಿಯವರೆಗೂ ದೇಶದೆಲ್ಲೆಡೆ ಇದರ ಅಗತ್ಯತೆ ಬಹಳವಾಗಿ ಬೇಕಾಗಿದೆ.

ನಾವು ಯಾವುದೇ ಪುಸ್ತಕವನ್ನು ಕೊಂಡುಕೊಳ್ಳಬೇಕಾದರೆ ಪುಸ್ತಕದ ಅಂಗಡಿಗೆ ತೆರಳಿ ಹುಡುಕುತ್ತೇವೆ. ಅದು ಮುಗಿದು ಹೋಗಿರುತ್ತದೆ. ಇಲ್ಲವಾದರೆ ಮುದ್ರಣಗಳೇ ಖಾಲಿಯಾಗಿರುತ್ತವೆ. ಇಂತಹ ಪರಿಸ್ಥಿತಿಗಳನ್ನು ನಾವು ಎದುರಿಸುತ್ತೇವೆ. ಆದರೆ ಇಂದು ಪುಸ್ತಕದ ಅಂಗಡಿಗೆ ಹೋಗಿ ಯಾವ ಯಾವ ಹೊಸ ಪುಸ್ತಕಗಳು ಬಂದಿವೆ ಎಂಬುದನ್ನು ಕೇಳುವ ಅಗತ್ಯವಿಲ್ಲ. "ಅಂತರ್ಜಾಲದಲ್ಲಿ ನಮಗಾಗಿ ಆನ್‌ಲೈನ್ ಪುಸ್ತಕದಂಗಡಿಯನ್ನು ತೆರೆಯಲಾಗಿದೆ. ಇದರಲ್ಲಿ ನಾವು ವಿಧ ವಿಧದ ಪುಸ್ತಕಗಳನ್ನು ಆಯ್ದುಕೊಳ್ಳುವ ಅವಕಾಶವಿದೆ. ಈ ತಾಣದಲ್ಲಿ ನಮಗೆ ಯಾವ ಪುಸ್ತಕ ಬೇಕೋ ಅದನ್ನು ಪಡೆಯಬಹುದು. ಇದರಲ್ಲೇ ನಾವು ಆಯ್ದುಕೊಂಡ ಪುಸ್ತಕಗಳನ್ನು ಆರ್ಡರ್ ಕೂಡ ಮಾಡುವ ಸೌಲಭ್ಯವನ್ನು ನೀಡಲಾಗಿದೆ. ಆ ತಾಣ ಯಾವುದೆಂದರೆ ಅಮೆಜಾನ್ ಡಾಟ್ ಕಾಮ್ (amazon.com) ಈ ತಾಣದಲ್ಲಿ ನಮಗೆ ಬೇಕೆಂದ ಪುಸ್ತಕ ಆಯ್ದುಕೊಂಡ ಮೇಲೆ ನಮಗೆ ಬೇಕಾದ ಪುಟಗಳನ್ನು ಸಹ ನಾವು ಅಂತರ್ಜಾಲದಲ್ಲೇ ಅಧ್ಯಯನ ಮಾಡಬಹುದು."[೪]

ಕೇವಲ ಪುಸ್ತಕಗಳಲ್ಲದೆ ಇನ್ಯಾವುದೇ ಮಾಹಿತಿಯನ್ನೂ ಅಂತರ್ಜಾಲದಲ್ಲಿ ಪಡೆಯಬಹುದು. ಸ್ಥಳಗಳ ಮಹಿಮೆ, ಗುಡಿಗಳು, ದೇವಾಲಯಗಳು, ಗುಹಾಂತರ ದೇವಾಲಯಗಳು, ನಕ್ಷೆಗಳು, ನದಿಗಳು,

ಸರೋವರಗಳು, ಸಮುದ್ರಗಳು, ಇನ್ಯಾವುದೇ ಮಾಹಿತಿ ನಮಗೆ ಬೇಕೆನಿಸಿದಾಗ ನಾವು ಅಂತರ್ಜಾಲದ ಸಹಾಯದಿಂದ ನಮ್ಮ ಕಣ್ಣ ಮುಂದೇನೆ ನೋಡುವ ಸುವರ್ಣವಕಾಶ ಜಾರಿಯಲ್ಲಿದೆ.

ಕನ್ನಡ ಭಾಷೆಗೆ ಸಂಬಂಧಿಸಿದ ಹಲವಾರು ಪುಸ್ತಕಗಳು, ಲೇಖನಗಳು, ಅಂಕಣಗಳು, ಕಾದಂಬರಿಯ ವಿಮರ್ಶೆಗಳನ್ನು ನಾವು ಅಂತರ್ಜಾಲದಲ್ಲಿ ನೋಡುತ್ತೇವೆ. ಕನ್ನಡದ ಯಾವೊಬ್ಬ ಕವಿಯ ನಾಮಧೇಯ ನಮೂದಿಸಿದರೆ ಸಾಕು ಅವರ ಇತಿಹಾಸ, ಅವರ ಕೃತಿಗಳು, ಎಷ್ಟು ಪುಸ್ತಕಗಳು ಲಭ್ಯವಿರುವುವು, ಅವರ ಇತ್ತೀಚಿನ ಕೃತಿ ಯಾವುದಿದೆ? ಎಲ್ಲವನ್ನು ತಿಳಿಯಬಹುದು. ಪ್ರಪಂಚದಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಬೇಕಾಗಿರುವ ಮಾಹಿತಿ ನಮೂದಿಸಿದರೆ ಸಾಕಷ್ಟು ಮಾಹಿತಿಯನ್ನು ಪಡೆದುಕೊಳ್ಳಬಹುದು.

ಅಂತರ್ಜಾಲದಲ್ಲಿ ಒಂದು ಪುಸ್ತಕದ ನಾಮಧೇಯ ನಮೂದಿಸಿದರೆ ಅದೇ ಹೆಸರಿನಲ್ಲಿ ಎಷ್ಟು ಬೇರೆ ಬೇರೆ ಪುಸ್ತಕಗಳು ಬಂದಿವೆ ಎಂಬುದನ್ನು ತಿಳಿಯಬಹುದು. ಅನೇಕ ಲೇಖನ, ಕಾದಂಬರಿ, ವಿಮರ್ಶೆಗಳನ್ನು ಸಹ ಓದಬಹುದು. ಬರವಣಿಗೆ ರೂಪದಲ್ಲಿ ಪುಸ್ತಕಗಳಲ್ಲಿ ಓದಿದರೆ ಕೆಲವೊಂದು ಮಾಹಿತಿ ಅಥವಾ ವಿಷಯಗಳು ಮರೆತು ಹೋಗುವ ಸಾಧ್ಯತೆಗಳು ಹೆಚ್ಚು. ಆದರೆ ಅಂತರ್ಜಾಲದಲ್ಲಿ ದೃಶ್ಯ ಮಾಧ್ಯಮದಲ್ಲಿ ಓದಿದರೆ, ನೋಡಿದರೆ ಅದು ದೀರ್ಘ ಕಾಲ ನೆನಪಿನಲ್ಲಿರುತ್ತದೆ.

ಅಂತರ್ಜಾಲದಲ್ಲಿ ನಾವು ಯಾವ ಭಾಷೆಯನ್ನಾದರೂ ಆಯ್ಕೆ ಮಾಡಿಕೊಳ್ಳಬಹುದು. ಮೊದಮೊದಲು ಆಂಗ್ಲ ಪ್ರಿಯರು ಹೆಚ್ಚಾಗಿದ್ದರು. ಆದರೆ ಈಗ ಕನ್ನಡ ಪ್ರಿಯರು ನಮ್ಮ ಅಂತರ್ಜಾಲಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು ಕನ್ನಡ ಭಾಷೆಯ ಅಭಿಮಾನ ಮತ್ತು ಬೆಳವಣಿಗೆಗೆ ಸಾಕ್ಷಿಯಾಗಿದೆ. ಇಂದು ನಾವು ಒಂದು ದಿನಪತ್ರಿಕೆ ಓದಬೇಕಾದರೂ ಕೊಂಡುಕೊಳ್ಳುವ ಅಗತ್ಯವಿಲ್ಲ. ಈ ತಾಣಕ್ಕೆ ಚಲಿಸಿ ಯಾವ ದಿನ ಪತ್ರಿಕೆಯನ್ನಾದರೂ ನಾವು ಓದುವ ವ್ಯವಸ್ಥೆ ಅಂತರ್ಜಾಲದಲ್ಲಿದೆ.

ಇತ್ತೀಚಿನ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನ ಬೆಳೆದಂತೆ ಕಂಪ್ಯೂಟರ್ ಓದು, ಬರಹವನ್ನು ಎಲ್ಲರಿಗೂ ತಲುಪಿಸಬೇಕು ಎಂಬುದು ಸರ್ಕಾರದ ನಿಲುವಾಗಿದೆ. ಆದ್ದರಿಂದಲೆ ಇಂದಿನ ಆಧುನಿಕ ಯುಗಕ್ಕೆ ಗ್ರಾಮೀಣ ಪ್ರದೇಶದಲ್ಲಿನ ವಿದ್ಯಾರ್ಥಿಗಳು ಹೊಂದಿಕೊಳ್ಳುವಂತಾಗಲು ಇಂದು ಗಣಕಯಂತ್ರದ ತರಬೇತಿ ಅತ್ಯಗತ್ಯ. ಅದಕ್ಕಾಗಿ ಸರ್ಕಾರವು ಹಳ್ಳಿಗಳ ಶಾಲೆಗಳಿಗೆ ಗಣಕಯಂತ್ರಗಳನ್ನು ಒದಗಿಸಿ, ಅದಕ್ಕೆ ಶಿಕ್ಷಕರನ್ನು ನೇಮಿಸಿದೆ.

ಇವುಗಳಿಂದ ವಿದ್ಯಾರ್ಥಿಗಳ ಜ್ಞಾನ ಪ್ರಸಾರ ವೃದ್ಧಿಯಾಗುತ್ತದೆ. ಆಧುನಿಕ ಯುಗದಲ್ಲಿನ ಹೊಸ ಆವಿಷ್ಕಾರಗಳು, ಸುಧಾರಣೆಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಬದಲಾವಣೆಗಳನ್ನು ತರಲು ಈ

ಕಂಪ್ಯೂಟರ್ ಶಿಕ್ಷಣ ನೆರವಾಗಿದೆ. ವಿದ್ಯಾರ್ಥಿಗಳಿಗೆ ಕೇವಲ ಅದರ ಬಗ್ಗೆ ಮಾಹಿತಿ ನೀಡಿ ಬೋಧಿಸಿದರೆ ಅದು ಕಲಿಕೆಯಾಗುವುದಿಲ್ಲ. ಪ್ರಾಯೋಗಿಕವಾಗಿ ಕಲಿತಾಗಲೆ ಅದಕ್ಕೆ ಮನ್ನಣೆ. ಆದ್ದರಿಂದ "ಈಗ ಸರ್ಕಾರಿ ಶಾಲೆ, ಖಾಸಗಿ ಶಾಲೆಗಳಲ್ಲಿ ಈ ರೀತಿಯ ಪ್ರಾಯೋಗಿಕ ತರಬೇತಿಗಳು ಆರಂಭವಾಗಿವೆ. ಪ್ರತಿಯೊಂದು ವಿಷಯವನ್ನು ವಿದ್ಯಾರ್ಥಿಗಳ ಮಿದುಳಿಗೆ ತುರುಕುವ ಶ್ರಮಕ್ಕೆ ವಿದಾಯ ಹೇಳಿ, ನೋಟ್ಸ್ ನೀಡುವ ಪದ್ಧತಿಗೆ ಇತಿಶ್ರೀ ಹಾಡಿ, ದೃಶ್ಯ ಮತ್ತು ಶ್ರವ್ಯ ಸಾಧನಗಳುಳ್ಳ ಬಹುಮಾಧ್ಯಮದ ಸ್ಮಾರ್ಟ್ ಕ್ಲಾಸ್ ವಿದ್ಯಾರ್ಥಿಗಳಿಗೆ ಸಂತೋಷ ನೀಡುತ್ತದೆ. ಜೊತೆಗೆ ಈ ಗಣಕಯಂತ್ರ ಪಾಠವನ್ನು ಶ್ರವ್ಯದ ಮೂಲಕ ಸುಲಭವಾಗಿ ಬೋಧಿಸಲು ಶಿಕ್ಷಕರಿಗೆ ನೆರವಾಗುತ್ತದೆ. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದ ವೃದ್ಧಿಯಾಗುತ್ತದೆ."[3] ಹಾಗಾಗಿ ಅದರ ಮಹತ್ವ ಹಿಂದೆಂದಿಗಿಂತಲೂ ಇಂದು ವ್ಯಾಪಕ ಗೊಂಡಿದೆ.

ವಿದ್ಯಾರ್ಥಿಗಳಿಗೆ ಅಂತರ್ಜಾಲದ ಮಾಹಿತಿ ತಿಳಿಸಿದರೆ ಅವರೇ ಸ್ವತಃ ಇತರ ಮಾಹಿತಿಗಳನ್ನು ತಿಳಿಯಲು ಮುಂದಾಗುತ್ತಾರೆ. ಗ್ರಾಮೀಣ ವಿದ್ಯಾರ್ಥಿಗಳ ಹಿಂಜರಿಕೆಗೆ ಕಾರಣವಾಗಿರುವ ಭಯವನ್ನು ತೊಡೆದು ಕಂಪ್ಯೂಟರ್ ಅವರಲ್ಲಿ ತಾಂತ್ರಿಕ ಕೌಶಲ್ಯವನ್ನು ಅಭಿವೃದ್ಧಿಗೊಳಿಸುತ್ತದೆ. ಸೀಮೆ ಸುಣ್ಣ, ಡಸ್ಟರ್, ಕಪ್ಪು ಹಲಗೆಗಳನ್ನು ಬಿಟ್ಟು ಈಗ ಶಿಕ್ಷಕರು ಮೌಸ್ ಹಿಡಿದು ಬೋಧಿಸುವ ಪದ್ಧತಿ ಜಾರಿಗೆ ಬಂದಿದೆ. ಇದು ಬಂದಾಗಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಆಧುನಿಕ ಬದಲಾವಣೆಗಳಾ ಗುತ್ತಿರುವುದನ್ನು ಕಾಣುತ್ತೇವೆ. ಅಂತರ್ಜಾಲದ ಅವಕಾಶ ಕಲ್ಪಿಸಿಕೊಂಡರೆ ಅವರಿಗೆ ವಿವಿಧ ಕವಿಗಳ ಬಗ್ಗೆಯೂ ಮಾಹಿತಿಯನ್ನು ನೀಡಬಹುದು. ಸಣ್ಣ ಕಥೆಗಳನ್ನು ಸಹ ಅಂತರ್ಜಾಲದ ಸಹಾಯದಿಂದ ಓದಿ ಅವರಿಗೆ ಅರಿವು ಮೂಡಿಸಬಹುದು. ಪಂಚತಂತ್ರದ ಕಥೆಗಳು, ನೀತಿಕಥೆಗಳನ್ನು ಚಿತ್ರಗಳ ಸಹಾಯ ದಿಂದ ವಿದ್ಯಾರ್ಥಿಗಳಿಗೆ ಬೋಧಿಸಬಹುದು. ಇದರಿಂದ ವಿದ್ಯಾರ್ಥಿಗಳಿಗೆ ಆಡುತ್ತಾ ಕಲಿ ಮಾದರಿ ಕೌಶಲ್ಯಗಳು ಅಭಿವೃದ್ಧಿಯಾಗುತ್ತವೆ. ಅವರಿಗೆ ಎಲ್ಲಿಯೂ ಬೇಸರವೆನಿಸುವುದಿಲ್ಲ. ವಿದ್ಯಾರ್ಥಿಗಳು ಉತ್ಸಾ ಹದಿಂದ ಕಲಿಕೆಯಲ್ಲಿ ತೊಡಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಇದನ್ನು ಬಹುತೇಕ ಶಾಲೆಗಳಲ್ಲಿ ಬಳಸ ಲಾಗುತ್ತಿದೆ. ಇದಕ್ಕೆ ಪೂರಕವಾಗಿ ಇಂದಿನ 'ಎಜು ಸ್ಮಾರ್ಟ್ ಕ್ಲಾಸ್'ನ್ನು ಗಮನಿಸಬಹುದು.

ಇಂಗ್ಲೀಷ್ ಗ್ರಾಮರ್ ಸ್ಪೆಲ್ಲಿಂಗ್, ಲೆಕ್ಕ ಬಿಡಿಸುವ ಸರಳ ವಿಧಾನ, ವಿಜ್ಞಾನದ ಸೈದ್ಧಾಂತಿಕ ವಿವ ರಣೆಯನ್ನು ಕಂಪ್ಯೂಟರ್ ಪರದೆಯಲ್ಲಿ ಸಚಿತ್ರವಾಗಿ, ಪ್ರಾಯೋಗಿಕವಾಗಿ ತಿಳಿಯಬಹುದು. ಸಮಾಜ ವಿಜ್ಞಾನದಲ್ಲಿ ರಾಜ ಮಹಾರಾಜರ ಆಳ್ವಿಕೆಯನ್ನು, ಸ್ಥಳಗಳ ಸಚಿತ್ರ ಪರಿಚಯ, ನಕ್ಷೆಗಳು, ಪಠ್ಯಕ್ಕೆ ತಕ್ಕ ಸಂಗೀತ ಇತ್ಯಾದಿಗಳು ವಿದ್ಯಾರ್ಥಿಗಳು ಅಭ್ಯಸಿಸಿದ್ದನ್ನು ನೆನಪಿನಲ್ಲಿಟ್ಟುಕೊಳ್ಳಲೂ ಸಹಕಾರಿಯಾಗಿದೆ.

ನೂತನ ಕಂಪ್ಯೂಟರ್ ಆಧಾರಿತ ಬೋಧನೆಯಿಂದ ಶಾಲೆಗಳಲ್ಲಿ ಹಾಜರಾತಿ ಹೆಚ್ಚುತ್ತಿದೆ. ನೂತನ ತಂತ್ರಜ್ಞಾನ ಮತ್ತು ರಚನಾತ್ಮಕ ಶಿಕ್ಷಣ ವಿದ್ಯಾರ್ಥಿಗಳ ಜೀವನಕ್ಕೆ ವಿಭಿನ್ನ ಆಯಾಮ ನೀಡಿದೆ. ವಿದ್ಯಾರ್ಥಿಗಳಲ್ಲಿ ತಾರ್ಕಿಕ ಆಲೋಚನೆ, ಪ್ರಶ್ನಿಸುವ ಸ್ವಭಾವ, ಸ್ಪರ್ಧಾತ್ಮಕ ಗುಣ, ಸಾಮಾನ್ಯ ಜ್ಞಾನ, ಪ್ರಾಮಾಣಿಕ ಚಿಂತನೆ, ಸಂಶೋಧನಾಸಕ್ತಿ, ತಾಂತ್ರಿಕ ಕೌಶಲ್ಯಗಳನ್ನು ಗಣಕಯಂತ್ರ ಶಿಕ್ಷಣ ಬೋಧನೆ ಹುಟ್ಟುಹಾಕುತ್ತದೆ.

ಈ ಗಣಕಯಂತ್ರ ವಿವಿಧ ಖಾಸಗಿ ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಸಾಕಷ್ಟು ಮಟ್ಟದಲ್ಲಿ ನೆರವಾಗುತ್ತಾ ಬಂದಿದೆ. ಕಂಪನಿಗಳಲ್ಲಿ ಬೇಕಾದ ಪ್ರಾಯೋಗಿಕ ಕಾರ್ಯಗಳನ್ನು ಮಾಡಲು, ನಕ್ಷೆಗಳನ್ನು ರಚಿಸಲು, ಕೆಲವು ಯೋಜನೆಗಳನ್ನು ರೂಪಿಸಲು, ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಗಳಲ್ಲೂ ಬಳಸುತ್ತಾರೆ. ಬೇಕಾದ ಮಾಹಿತಿ ಸಂಗ್ರಹಿಸಿ ಅದನ್ನು ಕಂಪನಿಗಳಿಗೆ ಬಳಸುವಿಕೆಯಲ್ಲಿ ಅಂತರ್ಜಾಲದ ಕಾರ್ಯ ಮಹತ್ವ ಪೂರ್ಣವಾಗಿದೆ.

ಕಂಪ್ಯೂಟರ್ ಮತ್ತು ಅಂತರ್ಜಾಲ : ಅಂತರ್ಜಾಲದ ಸಹಾಯದಿಂದ ವಿವಿಧ ವಾಣಿಜ್ಯ ವಹಿವಾಟುಗಳನ್ನು ನಡೆಸಬಹುದು. ಕಂಪನಿಗಳ ಷೇರುಗಳಲ್ಲಿ ಉಂಟಾಗುವ ಏರುಪೇರುಗಳನ್ನು ಸಹ ಆಯಾಯ ಜಾಲತಾಣಗಳಲ್ಲಿ ವೀಕ್ಷಿಸಬಹುದು. ಅಂತರ್ಜಾಲವು ಇಂದು ವಿವಿಧ ಕ್ಷೇತ್ರಗಳಲ್ಲಿ ಬಳಸುವುದನ್ನು ಕಾಣುತ್ತೇವೆ. ಹಲವು ವಿಷಯಗಳ ಬಗ್ಗೆ ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಂತರ್ಜಾಲ ತಾಣಗಳಲ್ಲಿ ಅವಕಾಶವಿದೆ. ಅದನ್ನು ಸದುಪಯೋಗಪಡಿಸಿಕೊಂಡು ತಮ್ಮ ಬರವಣಿಗೆಗಳನ್ನು ಅಲ್ಲಿ ಪ್ರಕಟಿಸುತ್ತಿದ್ದಾರೆ. ಕಂಪ್ಯೂಟರ್ ಮತ್ತು ಅಂತರ್ಜಾಲ ಪ್ರಾರಂಭದಲ್ಲಿ ಕೇವಲ ವ್ಯಾಪಾರದ ದೃಷ್ಠಿಯನ್ನು ಹೊಂದಿತ್ತು. ಅದರ ಬೇಡಿಕೆ, ಬಳಕೆಯ ಜ್ಞಾನ ಹೆಚ್ಚಿದಂತೆ ಅದು ಭಾಷೆ ಮತ್ತು ಸಾಹಿತ್ಯಕ್ಕೂ ವ್ಯಾಪಿಸಿತು.

“ಅಂತರ್ಜಾಲದಲ್ಲಿ ಹಳೆಗನ್ನಡದ ಗದ್ಯಗಳಿಂದ ಹಿಡಿದು ಹೊಸಗನ್ನಡದ ಪದ್ಯಗಳವರೆಗೂ ತಿಳಿಯಬಹುದು. ಕನ್ನಡ ಸಾಹಿತ್ಯ, ಸುದ್ದಿ, ಮನರಂಜನೆಯ ಏಕೈಕ ತಾಣ http://chilume.com ಇದಾಗಿದೆ. http://chilume.com ನಮೂದಿಸಿದರೆ ನಮಗೆ ಅದರಲ್ಲಿನ ಮಾಹಿತಿ ಲಭ್ಯವಾಗುತ್ತದೆ. **http://www.kamat.com/kalaranga/kar/literature/history.html** ಈ ಜಾಲತಾಣದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಕೆಲವು ಪುಟಗಳನ್ನು ಅಧ್ಯಯನ ಮಾಡಲು ಮೇಲಿನ ತಾಣವನ್ನು ಬಳಸಬಹುದು.”[೬] ಅಂತರ್ಜಾಲ ಒಟ್ಟಾರೆಯಾಗಿ ಹಲವು ವಿಷಯಗಳನ್ನು ತಿಳಿಸುವ ಸಮಗ್ರ ಜಾಲತಾಣವಾಗಿದೆ. ಇದರಿಂದ ನಮ್ಮ ಕನ್ನಡ ಭಾಷೆ, ಸಾಹಿತ್ಯಗಳು ಹೆಚ್ಚು ವ್ಯಾಪಕವಾಗಿ ಬೆಳೆಯಲು ಸಾಧ್ಯವಾಗಿದೆ.

ಕಂಪ್ಯೂಟರ್ ಒಳಗೊಂಡಂತೆ ಅಂತರ್ಜಾಲ ಇಂದು ವಿಸ್ತಾರವಾದ ಕ್ಷೇತ್ರವಾಗಿದೆ. ಹೀಗಾಗಿ ಅದು ಒಳಗೊಂಡಿರುವ ವ್ಯಾಪ್ತಿಯನ್ನು ಪರಿಚಯಿಸುವ ಉದ್ದೇಶ ಈ ಸಂಶೋಧನಾ ಪ್ರಬಂಧದ್ದಾಗಿದೆ. ಕಂಪ್ಯೂಟರ್ ಅಂದರೇನು? ಕನ್ನಡ ಭಾಷೆ ಅದನ್ನು ಹೇಗೆ ಸ್ವೀಕರಿಸಿದೆ? ಅದರ ಸಾಧಕ ಬಾಧಕ ಗಳೇನು? ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಈ ವಿಶಾಲವಾದ ಕ್ಷೇತ್ರದ ಅಧ್ಯಯನಕ್ಕೆ ತೊಡಗುವವರಿಗೆ ಈ ಪ್ರಬಂಧವು ಪ್ರವೇಶಿಕೆಯನ್ನು ನೀಡುತ್ತದೆ.

ಈ ಅಧ್ಯಯನ ಕ್ರಮವು ಪರಿಚಯಾತ್ಮಕ ವಿಧಾನವನ್ನು ಅನುಸರಿಸಿದೆ. ಕನ್ನಡ ಸಾಹಿತ್ಯ ಮತ್ತು ಭಾಷೆಯ ಸಂದರ್ಭದಲ್ಲಿ ಈ ಅಧ್ಯಯನವು ನವೀನವಾಗಿರುವುದರಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಿ, ವಿವರಣಾತ್ಮಕವಾಗಿ ನಿಬಂಧವನ್ನು ರೂಪಿಸಲಾಗಿದೆ.

ಅಡಿಟಿಪ್ಪಣಿಗಳು

೧. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್ – ಶ್ರೀಮತಿ ನೇಮಿಚಂದ್ರ, ಪ್ರಧಾನ ಸಂಪಾದಕರು – ಪ್ರೊ. ಎಲ್.ಎಸ್. ಶೇಷಗಿರಿರಾವ್, ಸಪ್ನ ಬುಕ್ ಹೌಸ್, ೨೦೦೩, ಪುಟ ೧೪೬

೨. ಅದೇ; ಪುಟ ೧೪೭

೩. ಹಸ್ತಪ್ರತಿ ವ್ಯಾಸಂಗ, ಕಂಪ್ಯೂಟರ್ ಮತ್ತು ಕನ್ನಡಾಭಿವೃದ್ಧಿ ಪ್ರೊ. ಎಂ.ಎ. ಲಕ್ಷ್ಮಿತಾತಾಚಾರ್ಯ, ಪ್ರಸಾರಾಂಗ ಕನ್ನಡ ವಿವಿ, ಹಂಪಿ, ೨೦೦೨, ಪುಟ ೨

೪. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್ – ಶ್ರೀಮತಿ ನೇಮಿಚಂದ್ರ, ಪ್ರಧಾನ ಸಂಪಾದಕರು – ಪ್ರೊ. ಎಲ್.ಎಸ್. ಶೇಷಗಿರಿರಾವ್, ಸಪ್ನ ಬುಕ್ ಹೌಸ್, ೨೦೦೩, ಪುಟ ೨೧೮

೫. ಗ್ರಾಮೀಣ ಶಾಲೆಯಲ್ಲಿ 'ಕಂಪ್ಯೂಟರ್ ಕ್ಲಾಸ್', ಬಿ.ಜೆ.ಧನ್ಯಪ್ರಸಾದ್, ಪ್ರಜಾವಾಣಿ, ೨೦/೨/೧೨

೬. www.kannadaliterature.com – ಅಂತರ್ಜಾಲ ತಾಣ

ಅಧ್ಯಾಯ – ೨
ಕನ್ನಡ ಭಾಷೆ ಮತ್ತು ಕಂಪ್ಯೂಟರ್

ಅಧ್ಯಾಯ – ೨
ಕನ್ನಡ ಭಾಷೆ ಮತ್ತು ಕಂಪ್ಯೂಟರ್

ಆಧುನಿಕ ಯುಗದಲ್ಲಿ ಭಾಷೆಯು ತಂತ್ರಜ್ಞಾನದ ಜೊತೆ ಹೊಂದಿಕೊಂಡು ಮುಂದುವರೆಯುತ್ತಿದೆ. ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಇಂದು ಭಾಷೆಯ ಬಳಕೆಯ ಹಲವಾರು ವಲಯಗಳನ್ನು ತಂತ್ರಜ್ಞಾನ ಪ್ರಭಾವಿಸುತ್ತಿದೆ. ಒಂದು ದೃಷ್ಟಿಯಲ್ಲಿ ನಾವು ಗಣಕಯಂತ್ರಕ್ಕೆ ದಾಸರಾಗುತ್ತಿದ್ದೇವೆ. ಪ್ರಗತಿಪಥದಲ್ಲಿ ಸಾಗಿದಾಗ ವೈಜ್ಞಾನಿಕ ಆವಿಷ್ಕಾರಗಳನ್ನು ಉಪಯೋಗಿಸಿಕೊಂಡವರು ಮುನ್ನಡೆಯುತ್ತಾರೆ. ಕನ್ನಡ ಭಾಷೆ ಕೇವಲ ಮಾತಿಗಿರುವ ಭಾಷೆಯಲ್ಲದೆ ಇಂದು ಗಣಕಯಂತ್ರದಲ್ಲಿಯೂ ಚಾಲ್ತಿಯಲ್ಲಿರುವ ಭಾಷೆಯಾಗಿದೆ. ಇದರಿಂದ ಕನ್ನಡ ಭಾಷೆಗೆ ಮತ್ತಷ್ಟು ಪ್ರಗತಿ ಸಾಧ್ಯವಾಗಿದೆ. ಕನ್ನಡ ಭಾಷೆಯನ್ನು ತಾಂತ್ರಿಕವಾಗಿ ಬಳಸುವಾಗ ಕೆಲವು ದೋಷಗಳಿವೆ. ಕಂಪ್ಯೂಟರ್ ಮತ್ತು ಕನ್ನಡ ಅಭಿವೃದ್ಧಿ ಈ ವಿಷಯದಲ್ಲಿ ಕನ್ನಡಿಗರು ಸರಿಯಾದ ನಿಲುವನ್ನು ತೆಗೆದುಕೊಂಡಾಗ ಮಾತ್ರ ಕನ್ನಡ ಭಾಷೆಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಪ್ರಬಲವಾದ ಮತ್ತು ಸಮರ್ಥವಾದ ಮಾಧ್ಯಮಗಳು ಒದಗಿ ಬಂದಾಗ ಅದನ್ನು ಬಳಸಿಕೊಳ್ಳದೆ ಇದ್ದ ಪಕ್ಷದಲ್ಲಿ ಯಾವುದೇ ಕ್ಷೇತ್ರದ ಅಭಿವೃದ್ಧಿಯು ಅಸಾಧ್ಯವಾಗುತ್ತದೆ. ಕನ್ನಡ ಭಾಷೆಯು ಕಂಪ್ಯೂಟರಿನಲ್ಲಿ ಈಗಾಗಲೇ ಅಳವಟ್ಟಿರುವುದರಿಂದ ಅದರ ಉಪಯೋಗ ಪಡೆದುಕೊಂಡು, ಅದನ್ನು ಮತ್ತಷ್ಟು ಉತ್ತಮಗೊಳಿಸುವುದು ನಮ್ಮೆಲ್ಲರ ಕಾಯಕವಾಗಿದೆ. "ಕನ್ನಡ ಭಾಷೆ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಭಾಷೆಯಾಗಿರುವುದರಿಂದ ಸಮಾಜದಲ್ಲಿ, ಕರ್ನಾಟಕ ಪರಂಪರೆಯಲ್ಲಿ ಇದಕ್ಕಿರುವ ಬೆಲೆ ಅಗಾಧ. ಭಾಷೆಯನ್ನು ಸುಲಭ ರೀತಿಯಲ್ಲಿ ಜನಸಾಮಾನ್ಯರಿಗೆ ದೊರೆಯುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ."[೧]

ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಕನ್ನಡ ಭಾಷೆಯೂ ಕೂಡ ಮಾಹಿತಿ ತಂತ್ರಜ್ಞಾನದ ಚೌಕಟ್ಟಿನಲ್ಲಿ ತನ್ನನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ಗಣಕ ಮಾಧ್ಯಮದಲ್ಲಿ ಈಗಾಗಲೇ ಕನ್ನಡ ಭಾಷೆಯ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನಗಳು ನಡೆದು ಈಗ ಪ್ರಮುಖವಾಗಿ ನುಡಿ, ಬರಹ ಎಂಬ ಕನ್ನಡ ತಂತ್ರಾಂಶಗಳನ್ನು ಕಾಣುತ್ತೇವೆ. ಇದರಿಂದಾಗಿ ನಮ್ಮ ಕನ್ನಡದ ಸಾಕಷ್ಟು ಕೃತಿಗಳು ಅಂತರ್ಜಾಲದಲ್ಲಿ ದೊರಕಲು ಸಾಧ್ಯವಾಗಿದೆ. ಕನ್ನಡ ಭಾಷೆಯ ಅಭಿವೃದ್ಧಿಗೆ ಅನೇಕ ಪ್ರಯತ್ನಗಳು ನಡೆದು ಮುಖ್ಯವಾಗಿ ಕನ್ನಡ ಲಿಪಿ ಸಂಸ್ಕರಣ, ಸಾಧಾರಣ ಕೀಲಿಮಣೆ ವಿನ್ಯಾಸ, ಸಾಧಾರಣೀಕರಣ ಮತ್ತು ಬ್ಯಾಂಕಿಂಗ್ ತಂತ್ರಾಂಶಗಳು ಹುಟ್ಟಿಕೊಂಡಿವೆ. ಕನ್ನಡವನ್ನು ಗಣಕಯಂತ್ರದಲ್ಲಿ ಅಳವಡಿಸಿದರೆ ಕನ್ನಡಿಗರಿಗೆ ಅನುಕೂಲವಾಗುತ್ತದೆ ಎಂಬ ದೃಷ್ಟಿಕೋನವನ್ನು ಆಧರಿಸಿ, ಇಂದು ಕನ್ನಡ ಭಾಷೆ ಅಂತರ್ಜಾಲದಲ್ಲಿ ಕಾಣಿಸಿಕೊಂಡಿದೆ.

ಬಹುತೇಕ ಮಂದಿ ಕನ್ನಡ ಭಾಷೆಯನ್ನು ಮಾತೃಭಾಷೆಯನ್ನಾಗಿ ಹೊಂದಿದ್ದರೂ ಸರಳವಾಗಿ ಓದಲು ಬರೆಯಲು ಕಷ್ಟವಾಗುತ್ತಿದೆ. ಕಾರಣ ಆಂಗ್ಲ ಭಾಷೆಯ ಆವಳಿ. ಕಾನ್ವೆಂಟ್ ಶಾಲೆಗಳಲ್ಲಿ ಹೆಚ್ಚು ಮಂದಿ ವಿದ್ಯಾಭ್ಯಾಸ ಮಾಡುವುದರಿಂದ ಹೀಗಾಗುತ್ತದೆ. ಇದಲ್ಲದೆ ಪಾಶ್ಚಾತ್ಯ ದೇಶದಲ್ಲಿರುವ ಕನ್ನಡಿಗರು ಹಾಗೂ ಕನ್ನಡಾಭಿಮಾನಿಗಳು ತಮ್ಮ ಮಕ್ಕಳಿಗೆ ಕನ್ನಡವನ್ನು ಕಲಿಸಲು ಮುಂದಾಗುತ್ತಿದ್ದಾರೆ. ಬೇರೆ ದೇಶ ಗಳಲ್ಲಿ ಕನ್ನಡ ಕಲಿಕೆಯ ಶಿಕ್ಷಕರ ಅಭಾವವಿದ್ದರೆ ಅವರು ಅಂತರ್ಜಾಲದ ಮುಖಾಂತರ ಕನ್ನಡ ಭಾಷೆ ಯನ್ನು ಕಲಿಯುತ್ತಾರೆ. ಕನ್ನಡ ಭಾಷೆ ಎಲ್ಲರನ್ನು ತಲುಪಬೇಕಾದರೆ ಶಾಲೆಗಳಲ್ಲೂ ಸಹ ಅಂತರ್ಜಾಲ ಕನ್ನಡವನ್ನು ವಿದ್ಯಾರ್ಥಿಗಳಿಗೆ ಬೋಧಿಸಬೇಕು. ಇದರಿಂದ ಅವರಿಗೆ ಕನ್ನಡ ಭಾಷೆಯ ಅಭಿಮಾನದ ಜೊತೆಗೆ ನೋಡಿ ಕಲಿ ಮಾದರಿಯಲ್ಲಿ ಕಲಿಯುವ ಅವಕಾಶ ದೊರಕುತ್ತದೆ.

ಯಾವುದೇ ಭಾಷೆಯ ಅಭಿವೃದ್ಧಿ ಸುಗಮವಾಗಿ ಗಣಕ ಕ್ಷೇತ್ರದಲ್ಲಿ ಆಗಬೇಕಾದರೆ ಅದಕ್ಕೆ ಮೂಲವಾಗಿ ಕೋಶಗಳ, ನಿಘಂಟುಗಳ, ದತ್ತಾಂಶಗಳ ಅಭಿವೃದ್ಧಿಯಾಗಬೇಕು. ನಿಘಂಟು, ಕೋಶಗ ಳನ್ನು ಗಣಕ ಮಾಧ್ಯಮದಲ್ಲಿ ಅಳವಡಿಸಬೇಕಾದರೆ ಅತಿ ಜಾಗರೂಕತೆಯಿಂದ ಎಚ್ಚರ ವಹಿಸಿ ಅಳವಡಿಸ ಬೇಕು. ಇಲ್ಲವಾದರೆ ಹೆಚ್ಚಿನ ಪ್ರಮಾದವಾಗುತ್ತದೆ.

ಪ್ರಾದೇಶಿಕವಾಗಿ ಕನ್ನಡ ಭಾಷೆಯನ್ನು ಬಲ್ಲ ಜನ ನಿರರ್ಗಳವಾಗಿ ಅದನ್ನು ಮಾತನಾಡುತ್ತಾರೆ. ಆದರೆ ಮಾತನಾಡಿದಷ್ಟು ಸುಲಭವಾಗಿ ಗಣಕಯಂತ್ರದಲ್ಲಿ ಕನ್ನಡ ಭಾಷೆಯನ್ನು ಬಳಸುವುದು ಅಸಾಧ್ಯ. ಏಕೆಂದರೆ ಭಾಷೆಗಳ ಆಯ್ಕೆ ಮಾಡಿಕೊಂಡು, ನಂತರದಲ್ಲಿ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಬೇಕಾದ ಮಾಹಿತಿಗಳನ್ನು ನಮೂದಿಸಬೇಕಾಗುತ್ತದೆ. ಗಣಕಯಂತ್ರ ಬಂದಾಗಿನಿಂದಲೂ ಕನ್ನಡ ಭಾಷೆ ಇದರಲ್ಲಿ ಚಾಲ್ತಿಯಲ್ಲಿರಲಿಲ್ಲ. ನಂತರ ಕೆಲವು ವರ್ಷಗಳಲ್ಲಿ ಕನ್ನಡ ಭಾಷೆಯನ್ನು ಅಳವಡಿಸಲಾಯಿತು. ಇದರಿಂದ ಈಗ ಲೆಕ್ಕವಿಲ್ಲದಷ್ಟು ಜಾಲ ತಾಣಗಳು ಬೆಳಕಿಗೆ ಬಂದಿವೆ. ಅವುಗಳಿಂದ ಇಂದು ನಮ್ಮ ಕನ್ನಡ ಭಾಷೆಗೆ ಬೇಕಾದ ಬರವಣಿಗೆ ಪ್ರಕಟಗೊಳ್ಳುತ್ತಿರುವುದನ್ನು ಗಮನಿಸಬಹುದು. ಕೇವಲ ಆಂಗ್ಲ ಭಾಷೆ ಮನ್ನಣೆ ಪಡೆದಿದ್ದ ಗಣಕಲೋಕ ಈಗ ಕನ್ನಡಲೋಕವನ್ನೂ ಒಳಗೊಂಡಿದೆ. ಗಣಕಯಂತ್ರದಲ್ಲಿ ಆಂಗ್ಲ ಭಾಷೆಯಲ್ಲಿ ಮಾತನಾಡುವ, ವ್ಯವಹರಿಸುವ ತಂತ್ರಾಂಶಗಳು ಸಿದ್ಧವಾಗಿವೆ. ಕನ್ನಡ ಭಾಷೆಯ ಆಡು ಭಾಷೆಯನ್ನು ವ್ಯವಹರಿಸುವ ಮಾಧ್ಯಮವನ್ನು ಸಿದ್ಧಪಡಿಸಲು ಸಂಶೋಧಕರು ಮುಂದಾಗಿದ್ದಾರೆ.

ಯಾವುದೇ ಭಾಷೆಯ ಅರ್ಥ ವಿಶ್ಲೇಷಣೆ ಮಾಡಬೇಕಾದರೆ ಭಾಷೆಯಲ್ಲಿ ಉಪಯೋಗಿಸುವ ಪದಗಳು, ಅರ್ಥ, ಕಾರಕಗಳು, ವಿಶ್ಲೇಷಣೆಗಳು ಬಹಳ ಮುಖ್ಯವಾದವು. ಕನ್ನಡವೆಂದರೆ ಬರೀ ನುಡಿ ಯಲ್ಲ. ಅದು ವಿಶಾಲವಾಗಿ ಬೆಳೆದಿರುವ ಹೆಮ್ಮರ ಎಂಬುದನ್ನು ಇಂದಿನ ಅಂತರ್ಜಾಲ ಪದ್ಧತಿಯಲ್ಲಿ ನಡೆದಿರುವ ಅಗಾಧ ಕಾರ್ಯಗಳಿಂದ ತಿಳಿಯಬಹುದು. ಇತರ ಭಾಷೆಗಳಿಗೆ ಹೋಲಿಸಿದರೆ, ಅತಿ ಹೆಚ್ಚು

ಮನ್ನಣೆಯಲ್ಲಿರುವ ಭಾಷೆಗಳು ಕನ್ನಡ ಮತ್ತು ಆಂಗ್ಲ ಭಾಷೆ ಪ್ರಸ್ತುತ ಅಂತರ್ಜಾಲ ಪದ್ಧತಿಯಲ್ಲಿ ತಮ್ಮ ವ್ಯಾಪ್ತಿಯನ್ನು ಚಾಚಿಕೊಂಡಿವೆ. ಕನ್ನಡ ಭಾಷೆ ಆವಿಷ್ಕಾರವಾಗುವ ಮೊದಲು ಆಂಗ್ಲ ಭಾಷೆ ಮಾತ್ರವೆ ಚಾಲ್ತಿಯಲ್ಲಿತ್ತು. ಆದರೆ ಆಗ ಕನ್ನಡಿಗರು ಗಣಕಯಂತ್ರವನ್ನು ಅಷ್ಟಾಗಿ ಬಳಸುತ್ತಿರಲಿಲ್ಲ. ಆದರೆ ಕನ್ನಡ ಭಾಷೆ ಯಾವಾಗ ಚಾಲ್ತಿಗೆ ಬರುವುದೋ ಎಂದು ಕಾಯುತ್ತಿದ್ದ ಜನ ಈಗ ಸಾವಿರಾರು ಮಂದಿ ಗಣಕ ಪ್ರಿಯರಾಗಿದ್ದಾರೆ.

ಅಂತರ್ಜಾಲದಲ್ಲಿ ಕನ್ನಡದ ಕೃತಿಗಳನ್ನು, ಅದಕ್ಕೆ ಸಂಬಂಧಪಟ್ಟ ಕೆಲವು ವಿಮರ್ಶೆಗಳನ್ನು ಕಾಣ ಬಹುದು. ಕನ್ನಡ ಭಾಷೆಗೆ, ಕರ್ನಾಟಕಕ್ಕೆ, ಭಾರತಕ್ಕೆ, ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಕನ್ನಡ ಭಾಷೆಯಲ್ಲಿ ತಿಳಿಯಬಹುದು. ಕನ್ನಡದ ಕೆಲವು ಲೇಖಕರ ಛಾಯಾಚಿತ್ರಗಳನ್ನು, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರ, ಹಿರಿಯ ಸಾಹಿತಿಗಳ ಸ್ವವಿರಣೆಗಳನ್ನು ತಿಳಿಯಬಹುದು. ಕವಿಗಳು ತಮ್ಮ ಅಭಿಪ್ರಾಯಗಳನ್ನು ಸಹ ಅಂತರ್ಜಾಲದಲ್ಲಿ ಪ್ರಕಟಿಸುತ್ತಾರೆ.

ವ್ಯಾಪಾರಿ ಮನೋಭಾವನೆ ಇರುವ ಸ್ವಾಯತ್ತ ಸಂಸ್ಥೆಗಳು ಮತ್ತು ಕಂಪನಿಗಳು ಈ ವಿಷಯದಲ್ಲಿ ಆಸಕ್ತಿ ವಹಿಸುತ್ತಿರುವುದು ಕಡಿಮೆಯಾಗುತ್ತಿದೆ. ಕಾರಣ ಈ ತಂತ್ರಾಂಶಗಳನ್ನು ತಯಾರಿಸಿದ ನಂತರ ಅವುಗಳಿಂದ ಬರುವ ಲಾಭ ಗಣನೀಯವಾದುದಲ್ಲ ಎಂದು ತಿಳಿದ ಕಂಪನಿಗಳು ಹಿಂದೆ ಸರಿಯುತ್ತಿವೆ. ಆದರೆ ಕನ್ನಡ ಭಾಷೆಗೆ ಈಗಾಗಲೇ ಅಳವಡಿಸಿರುವ ಮಾಹಿತಿಗಳು ಸಾಕಷ್ಟಿವೆ. ಇನ್ನೂ ಪ್ರಗತಿ ಸಾಧಿಸಬೇಕಾದರೆ ಸಂಶೋಧನೆ ಅತ್ಯಗತ್ಯ. ಕನ್ನಡ ಭಾಷೆಯನ್ನು ಅಳವಡಿಸಲು ಸಂಶೋಧನೆ ಕೈಗೊಳ್ಳುವವರಿಗೆ ಹುರಿದುಂಬಿಸಿ ಅವರನ್ನು ಪ್ರೋತ್ಸಾಹಿಸಬೇಕಾಗಿದೆ.

ಗಣಕಯಂತ್ರದಲ್ಲಿ ಇಂದು ವಿಶ್ವವ್ಯಾಪಿ ಘಟನೆಗಳನ್ನು, ಪ್ರಚಲಿತ ಘಟನೆಗಳನ್ನು, ನಕಾಶೆಗಳನ್ನು ಸಹ ವೀಕ್ಷಿಸಬಹುದು. ಗಣಕಯಂತ್ರದಲ್ಲಿ ಈ ಕನ್ನಡ ಭಾಷೆಯ ಪ್ರಭಾವ ಅತಿ ಪ್ರಮುಖವಾಗಿದೆ. ಗ್ರಾಮೀಣ ಜನ ಹಾಗೂ ವಿದ್ಯಾರ್ಥಿಗಳು ಗಣಕಯಂತ್ರದ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಸುಮಾರು ವರ್ಷಗಳ ಹಿಂದೆ ಹಳ್ಳಿಗಾಡಿನ ಪ್ರದೇಶಗಳಿಗೆ ಹೋಗಿ ಗಣಕಯಂತ್ರದ ಬಗ್ಗೆ ಕೇಳಿದರೆ ಅಲ್ಲಿನ ಜನ ನಮ್ಮಂತವರಿಗೆ ಎಲ್ಲಿ ಬರಬೇಕು? ಅಂತಹ ಯಂತ್ರಗಳ ಬಳಕೆ ಎಂದು ಉತ್ತರ ನೀಡುತ್ತಿದ್ದರು. ಆದರೆ ತಂತ್ರಜ್ಞಾನ ಬೆಳೆದಂತೆ ಸಾಮಾನ್ಯ ಜನರು ಸಹ ಗಣಕಯಂತ್ರ ಕೊಂಡು ಕೊಳ್ಳುವಷ್ಟು ಕಡಿಮೆ ಬೆಲೆಯಲ್ಲಿ ಲಭ್ಯವಾಗುತ್ತಿವೆ.

"ಗಣಕಯಂತ್ರದಲ್ಲಿ ಭಾಷಾ ಸಂಸ್ಕರಣೆಯ ವಿವಿಧ ಪ್ರಕ್ರಿಯೆಗಳಲ್ಲಿ ಅಕ್ಷರಗಳ, ಮಾತ್ರೆಗಳ, ಪದಗಳ, ವಾಕ್ಯಗಳ ಹಂತದ ಅಂಕಿ ಸಂಖ್ಯಾ ವಿಶ್ಲೇಷಣೆ ಬಹಳ ಉಪಯುಕ್ತವಾದದ್ದು. ಯಾವುದು

ವಿರಳವಾದುದು. ವಿಶಿಷ್ಟ ಸಂದರ್ಭಕ್ಕೆ ಸೀಮಿತವಾದುದು ಅಥವಾ ಭಾಷೆಯ ನಿಜ ಪ್ರತಿನಿಧಿಯಲ್ಲ ಎಂದು ಗೊತ್ತಾಗುವುದು."[2] ಅಷ್ಟರ ಮಟ್ಟಿಗೆ ಭಾಷೆಯನ್ನು ಬಳಸುವುದು ಒಂದು ಜಾಣ್ಮೆಯೇ ಸರಿ.

ಭಾಷೆಯಲ್ಲಿ ಪದಗಳನ್ನು ಜೋಡಣೆ ಮಾಡಿ, ಅವುಗಳಿಗೆ ಸರಿ ಹೊಂದುವ ಅರ್ಥಗಳನ್ನು, ಅರ್ಥಗಳಿಗೆ ಅವಶ್ಯವಿರುವ ಕೋಶಗಳನ್ನು, ನಿಘಂಟುಗಳನ್ನು ಅಂತರ್ಜಾಲದಲ್ಲಿ ತುಂಬುವುದು ಅವಶ್ಯಕ. ಇಲ್ಲವಾದರೆ ಬೇಕಾದ ಮಾಹಿತಿ ದೊರೆಯುವುದಿಲ್ಲ. ಜನರು ಬಳಸುವ ನಿಘಂಟುವಿಗೂ ಗಣಕ ಯಂತ್ರ ದಲ್ಲಿನ ನಿಘಂಟುವಿಗೂ ವ್ಯತ್ಯಾಸವಿರುತ್ತದೆ. ಉತ್ತಮ ರೀತಿಯಲ್ಲಿ ಭಾಷೆಯನ್ನು ಅಳವಡಿಸಬೇಕು. ಇಲ್ಲ ವಾದರೆ ಕಳಪೆ ಮಟ್ಟದ ತಂತ್ರಾಂಶಗಳ ಅಳವಡಿಕೆಯಿಂದ ಭಾಷೆಯ ಪ್ರಗತಿ ಅಸಾಧ್ಯವಾಗುತ್ತದೆ. ಭಾಷೆ ಯನ್ನು ಸರಳ ರೀತಿಯಲ್ಲಿ ಅರ್ಥೈಸುವಂತೆ ಮುದ್ರಿತವಾಗಿರಬೇಕು. ಎಲ್ಲಾ ಸಾಮಾನ್ಯ ಜನರಿಗೂ ಅದು ಲಭ್ಯವಾಗುವಂತೆ, ಅವರೂ ಸಹ ಓದುವಂತೆ ಅದು ಮುದ್ರಿತವಾಗಿರಬೇಕು. ಆಗ ಗ್ರಾಮೀಣ ಜನತೆ ಅಂತರ್ಜಾಲವನ್ನು ಮತ್ತಷ್ಟು ಉಪಯೋಗಿಸುತ್ತಾರೆ. ಆಂಗ್ಲ ಭಾಷೆಯನ್ನು ಬಳಸುವ ಜನರು ಸಹ ಈ ಕನ್ನಡದಲ್ಲಿ ಲೇಖನಗಳನ್ನು ಓದಲು ಅನೇಕ ಜಾಲತಾಣಗಳನ್ನು ಉಪಯೋಗಿಸುತ್ತಾರೆ. ಬೇರೆ ಬೇರೆ ಭಾಷೆಗಳಿಗೆ ಅದರದೆ ತಾಣಗಳು ಅಂತರ್ಜಾಲದಲ್ಲಿವೆ. ಅದರಲ್ಲಿ ಅವರು ಬೇಕಾದ ಮಾಹಿತಿ ಪಡೆದು ಓದುತ್ತಾರೆ. ಕೆಲವರು ಓದಿದ ಕೆಲವು ಲೇಖನಗಳನ್ನು ಮುದ್ರಣ ರೂಪದಲ್ಲೂ ಪಡೆಯುತ್ತಾರೆ. ಅವು ಗಳಿಗೆ ಅನಿಸಿಕೆಗಳನ್ನು ಸಹ ಸಲ್ಲಿಸುತ್ತಾರೆ. ಈ ರೀತಿಯ ಕಾರ್ಯ ಅಂತರ್ಜಾಲದಲ್ಲಿ ಜರುಗುತ್ತದೆ.

ಕನ್ನಡ ಅಂತರ್ಜಾಲದಲ್ಲಿ ಚಾಲ್ತಿಗೆ ಬರುವ ಮುನ್ನ ಶಿಕ್ಷಣ ಸಂಸ್ಥೆ, ಸರ್ಕಾರಿ ಕಛೇರಿಗಳಲ್ಲಿ ಕೈ ಬರಹಗಳನ್ನು ಕಾಣಬಹುದಿತ್ತು. ಆದರೆ ಕಾಲ ಬದಲಾಗಿ ಕಂಪ್ಯೂಟರ್‌ನಲ್ಲಿ ಅದೇ ನಮೂನೆಗಳನ್ನು ಕನ್ನಡ ಭಾಷೆಯಲ್ಲಿ ಮುದ್ರಿಸುತ್ತಿದ್ದಾರೆ. ಕಛೇರಿಗೆ ಬೇಕಾದ ಕಡತಗಳನ್ನು ಸಹ ಅದರಲ್ಲಿ ಮುದ್ರಿಸಿ ಕೊಂಡು, ಉಳಿಸಿಕೊಳ್ಳಲು ಸಾಧ್ಯವಾಗಿದೆ. ಇವುಗಳಲ್ಲಿನ ಪ್ರತಿಯೊಂದು ಅಂಶವೂ ತನ್ನ ಬೆಳವಣಿಗೆಗೆ ಮತ್ತು ಉಪಯೋಗಕ್ಕೆ ಮತ್ತೊಂದನ್ನು ಅವಲಂಭಿಸಿದೆಯೆಂಬ ಅಂಶವೂ ಮನದಟ್ಟಾಗುತ್ತದೆ. ಅದೇ ಸಮಯದಲ್ಲಿ ಅದು ಮತ್ತೊಂದರ ಬೆಳವಣಿಗೆ ಮತ್ತು ಬಳಕೆಗೂ ತನ್ನ ಕಾಣಿಕೆ ಸಲ್ಲಿಸುತ್ತದೆ.

"ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರಿಯ ಸಂಸ್ಥೆ ಮೂರು ಮಿಲಿಯನ್ ಪದಗಳ ಕಾರ್ಪಸ್ ತಯಾರಿಸಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಸಚಿವಾಲಯ ಪ್ರಾಯೋಜಿಸಿತ್ತು. ಇದು ಬಹಳ ಹಿಂದೆಯೇ ನಡೆದಿದ್ದರೂ ಈ ಕಾರ್ಪಸ್ ಇತ್ತೀಚೆಗಷ್ಟೆ ಆಯ್ದ ಕೆಲವು ಸಂಸ್ಥೆಗಳನ್ನು ತಲುಪಿವೆ. ಈ ಕಾರ್ಪಸನ್ನು ಅವಲಂಬಿಸಿ ಹಲವು ಸಣ್ಣ ಪರಿಕರಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಕನ್ನಡ ಭಾಷೆ ಅಂತರ್ಜಾಲದಲ್ಲಿ ಇಂದು ನಮ್ಮ ಮುಂದೆ ಸುಲಭವಾಗಿ ಅಂತರ್ಜಾಲ ತಾಣಗಳಲ್ಲಿ ದೊರೆಯುತ್ತಿದೆ. ಅಂದರೆ ಇದಕ್ಕೆ ಹಲವಾರು ಕೈಗಳೆ ಶ್ರಮವಹಿಸಿವೆ."[3]

ಕನ್ನಡ ಭಾಷೆ ಅಳವಡಿಕೆ ಕೇವಲ ಒಬ್ಬ ವ್ಯಕ್ತಿಯಿಂದ ಅಥವಾ ಸಂಸ್ಥೆಯಿಂದ ನಿಗಧಿತ ಸಮಯದಲ್ಲಿ ಆಗಲು ಸಾಧ್ಯವಿಲ್ಲ ಎನ್ನುವುದನ್ನು ಅರಿತು ಒಟ್ಟಾಗಿ ಕಾರ್ಯ ಕೈಗೊಂಡರೆ ಮಾತ್ರ ಫಲ ದೊರೆಯುತ್ತದೆ ಎಂಬುದನ್ನು ಎಲ್ಲರೂ ತಿಳಿಯಬೇಕಾದ ಅಗತ್ಯವಿದೆ. ಭಾಷಾ ಸಂಸ್ಕರಣೆಯ ಕಾರ್ಯ ಜಾಲವನ್ನು ಗಮನಿಸಿದರೆ ವಿವಿಧ ಶಿಸ್ತುಗಳಲ್ಲಿನ ವಿದ್ವಾಂಸರು ಒಟ್ಟಿಗೆ ಸೇರಿ ಏಕೋದ್ದೇಶಕ್ಕಾಗಿ ಕೆಲಸ ಮಾಡಬೇಕಾಗಿರುವ ಅಗತ್ಯ ಮನದಟ್ಟಾಗುತ್ತದೆ. ಭಾಷಾ ತಜ್ಞರು, ಭಾಷಾ ವಿಜ್ಞಾನಿಗಳು, ಕಂಪ್ಯೂಟರ್ ವಿಜ್ಞಾನಿಗಳು, ಇಂಜಿನಿಯರ್‌ಗಳು, ಸಾಫ್ಟ್ ವೇರ್ ಇಂಜಿನಿಯರ್‌ಗಳು, ಇಂಟರ್ ನೆಟ್ ಮತ್ತು ಪಿಚ್ ಪರಿಣಿತರು, ಗಣಕ ವಿದ್ವಾಂಸರು, ಸಂಖ್ಯಾಶಾಸ್ತ್ರಜ್ಞರು ಇವರುಗಳೆಲ್ಲರ ಪಾತ್ರ ಮಹತ್ವದ್ದಾಗಿದೆ. ಇದಲ್ಲದೆ ಮೂಲಭೂತ ಮಾಹಿತಿಯನ್ನು ಸೃಷ್ಟಿಸಬೇಕಾಗುತ್ತದೆ. ಮಾತಿನ ಪದ ಸಮುಚ್ಚಯಗಳನ್ನು, ಸೂಚಿಗಳನ್ನು, ಅಂಕಿ ಸಂಖ್ಯಾ ವಿಶ್ಲೇಷಣೆ ಇತ್ಯಾದಿಗಳನ್ನು ಸೃಷ್ಟಿಸಿಕೊಂಡು ಲಭ್ಯವಿರುವ ಸಾಕಷ್ಟು ಉತ್ತಮ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು.

ಇಂದು ಇಂಗ್ಲೀಷ್ ಭಾಷೆಗೆ ಸಮಾನವಾಗಿ ಕನ್ನಡ ಭಾಷೆಯು ಅಂತರ್ಜಾಲ ವಲಯದಲ್ಲಿ ಬೆಳೆಯುತ್ತಿದೆ. ಇಂದು ಎಂತಹ ಮಾಹಿತಿಯು ಸಹ ಕನ್ನಡದಲ್ಲಿ ದೊರೆಯುತ್ತದೆ. ಅದು ಸಹ ಕನ್ನಡದ ಬರವಣಿಗೆಯಲ್ಲಿ. ಲೇಖಕರು ತಮ್ಮ ಲೇಖನಗಳನ್ನು ಜಾಲತಾಣಗಳಲ್ಲಿ ಪ್ರಕಟಿಸುತ್ತಾರೆ. ಅದನ್ನು ಹಲವು ಉದ್ಯಮಗಳಲ್ಲಿರುವ ಜನ ಬಿಡುವಿನ ವೇಳೆಯಲ್ಲಿ ಅಂತರ್ಜಾಲದಲ್ಲಿ ಓದುವ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದಾರೆ. ಅವರು ಸಹ ಅದಕ್ಕೆ ಅನಿಸಿಕೆ, ಅಭಿಪ್ರಾಯ ಬರೆದು ಲೇಖಕರಿಗೆ ಉತ್ತಮ ಮಾರ್ಗದರ್ಶನಗಳನ್ನು ನೀಡುವ ಕಾರ್ಯ ಮಾಡುತ್ತಿದ್ದಾರೆ. ಇದಕ್ಕೆ ಕನ್ನಡ ಭಾಷೆಯ ಮೇಲಿನ ಅಭಿಮಾನವೇ ಕಾರಣವಾಗಿದೆ.

ಕಂಪ್ಯೂಟರನ್ನು ಸಂಪೂರ್ಣವಾಗಿ ಅನಗತ್ಯವೆಂದು ಹೇಳುವ ಯಾವುದೇ ವಿಭಾಗವಿಲ್ಲ. ಏಕೆಂದರೆ ದುರುಪಯೋಗ ಶೇಕಡಾ ೨೫ರಷ್ಟಿದ್ದರೂ ಪ್ರಯೋಜನ ೭೫ರಷ್ಟಿದೆ. ಇಂದು ಪ್ರತಿಯೊಬ್ಬ ವ್ಯಕ್ತಿ ತನ್ನ ಕೆಲಸಗಳಿಗಾಗಿ ಪರರನ್ನು ಅವಲಂಬಿಸಬೇಕಾದ ಅಗತ್ಯವನ್ನು ಗಣಕಯಂತ್ರ ಗಣನೀಯವಾಗಿ ಕಡಿಮೆ ಮಾಡಿದೆ. ವಿಜ್ಞಾನಿಗಳು, ಇಂಜಿನಿಯರ್‌ಗಳು ಸಂಕಲನ ಕ್ರಿಯೆಯಿಂದ ಹಿಡಿದು, ಯಾವುದೇ ವಿಷಯದ, ವಿಭಾಗದ ಲೇಖನ ತಯಾರಿಸುವವರೆಗೆ ಗಣಕಯಂತ್ರವನ್ನೆ ಅವಲಂಬಿಸಿದ್ದಾರೆ. ಇದನ್ನು ಅವಲಂಬಿಸಿ, ಟೈಪಿಸ್ಟ್‌ಗಳ ಮೇಲೆ ಪರಾವಲಂಬಿಗಳಾಗದೆ, ಮುದ್ರಣಕಾರರ ನೆರವನ್ನು ಪಡೆಯದೆ, ಉತ್ತಮ ಮುದ್ರಿತ ಪ್ರತಿಯೊಂದನ್ನು ಕಡಿಮೆ ಕಾಲಾವಧಿಯಲ್ಲಿ ಪಡೆದುಕೊಳ್ಳಬಹುದಾಗಿದೆ. ಕನ್ನಡ ಭಾಷಾ ಪ್ರಿಯರು ಕನ್ನಡದಲ್ಲಿ ಅನೇಕ ಸಾಫ್ಟ್‌ವೇರ್‌ಗಳು ಜಾರಿಯಲ್ಲಿದ್ದು, ಅವುಗಳನ್ನು ಬಳಸಿಕೊಂಡು ತಮ್ಮ ಕಾರ್ಯ ಸಾಧಿಸಿಕೊಳ್ಳಬಹುದು.

ದಿನನಿತ್ಯದ ವ್ಯವಹಾರಗಳಿಗೆ ಕನ್ನಡ ಸಾಫ್ಟ್‌ವೇರನ್ನು ಈಗಾಗಲೇ ಅಭಿವೃದ್ಧಿ ಪಡಿಸಲಾಗಿದೆ. ಕಳೆದ ಎರಡು ದಶಕಗಳಿಂದ ಕನ್ನಡ ಭಾಷೆಯಲ್ಲಿ ಕಂಪ್ಯೂಟರ್ ಅಕ್ಷರಗಳು ವ್ಯಾಪಕವಾಗಿ ಬಳಕೆಯಾಗುತ್ತಿವೆ. ಕಂಪ್ಯೂಟರ್ ಅಕ್ಷರಗಳು ರೂಪುಗೊಳ್ಳುವ ಮೊದಲು ಕನ್ನಡದ ಕೆಲವೇ ಶೈಲಿಯ ಟೈಪ್ ಫೇಸ್‌ಗಳನ್ನು ಮುದ್ರಣದಲ್ಲಿ ಬಳಸುತ್ತಿದ್ದರು. ಕಂಪ್ಯೂಟರ್ ಗ್ರಾಫಿಕ್ಸ್ ತಜ್ಞರು ಟೈಪ್ ಫೇಸ್‌ಗಳಲ್ಲಿರುವ ದೋಷಗಳನ್ನು ಪರಿಶೀಲಿಸಿ, ಅಕ್ಷರಗಳನ್ನು ರೂಪಿಸಲು ಹೆಚ್ಚಿನ ಬದಲಾವಣೆ ಮಾಡಿಕೊಳ್ಳದೆ ಯಥಾವತ್ತಾಗಿ ಅಳವಡಿಸಿರುವುದನ್ನು ಕಾಣುತ್ತೇವೆ. ಇದರಿಂದ ಆಗುತ್ತಿರುವ ಉಪಯೋಗವು ಅಗಾಧವಾದದ್ದು. ಆಮೆ ನಡಿಗೆಯಲ್ಲಿ ಸಾಗುತ್ತಿದ್ದ ಹಾಗೂ ಸಾಗಬೇಕಾಗಿದ್ದ ಕಾಲ ಬದಲಾಗಿ ಎಲ್ಲಾ ಕಾರ್ಯಗಳು ಶರವೇಗದಲ್ಲಿ ನಡೆಯುವ ಕಾಲ ಬಂದೊದಗಿದೆ. ಇದಕ್ಕೆ ಕಾರಣ ಗಣಕಯಂತ್ರದಲ್ಲಿ ಕನ್ನಡ ಭಾಷೆಯನ್ನು ಅಳವಡಿಸಿದವರು.

ಸಣ್ಣ ಪುಟ್ಟ ಕೆಲಸ ಕಾರ್ಯಗಳಿಗೆ ನಗರದತ್ತ ಬರುತ್ತಿದ್ದ ಜನ, ಈಗ ಗಣಕ ಕೇಂದ್ರಗಳಲ್ಲಿ ಬೇಕಾದ ಮಾಹಿತಿಗಳನ್ನು ಪಡೆಯುತ್ತಿದ್ದಾರೆ. ಶಾಲಾ ಕಾಲೇಜುಗಳಲ್ಲಿ ಉಪಾಧ್ಯಾಯರು ನೀಡುವ ಪ್ರಾಯೋಗಿಕ ಚಟುವಟಿಕೆಗಳಿಗಾಗಿ ವಿದ್ಯಾರ್ಥಿಗಳು ಕನ್ನಡ ಭಾಷೆಯ ಜಾಲತಾಣಗಳನ್ನು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಕನ್ನಡ ಭಾಷೆಯ ಬಗ್ಗೆ ಹಲವಾರು ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿ ಹಾಗೂ ಲೇಖನಗಳನ್ನು ಈ ಜಾಲ ತಾಣಗಳಲ್ಲಿ ತೆಗೆದು ತಮ್ಮ ಕಾರ್ಯಗಳನ್ನು ವಿದ್ಯಾರ್ಥಿಗಳು ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಜಾಲತಾಣಗಳ ಪರಿಚಯ, ಗಣಕ ಯಂತ್ರದ ಪರಿಚಯ, ಕನ್ನಡ ಭಾಷೆಯ ಬಗ್ಗೆ ಹೆಚ್ಚಿನ ಒಲವು ಮೂಡುತ್ತದೆ.

ಗಣಕ ಯಂತ್ರದಲ್ಲಿ ಪ್ರಕಾಶಕ್, ನುಡಿ, ಶ್ರೀಲಿಪಿ, ಆಕೃತಿ, ಬರಹ, ಹಳೆಯ ಪ್ರಜಾ, ಪಿಲೀಫ್ ಹಾಗೂ ಅನು ಎಂಬ ಫಾಂಟ್‌ಗಳನ್ನು ಕನ್ನಡದಲ್ಲಿ ಅಕ್ಷರಗಳನ್ನು ಮುದ್ರಿಸುವುದಕ್ಕೆ ಹೆಚ್ಚು ಬಳಸಲಾಗುತ್ತದೆ. ಶ್ರೀಲಿಪಿ, ಆಕೃತಿ ಮತ್ತು ಬರಹ ಫಾಂಟ್‌ಗಳಲ್ಲಿ ಇವು ಪದಗಳ ಪಕ್ಕದಲ್ಲಿ ದೊಡ್ಡದಾಗಿ ಕಾಣುವಂತೆ ರೂಪಿಸಲಾಗಿದೆ. ಕನ್ನಡದಲ್ಲಿ ಅಕ್ಷರಗಳ ಪ್ರತಿ ಅಕ್ಷರದ ಸಹಜ ಸೌಂದರ್ಯವನ್ನು ಪರಿಭಾವಿಸಿ ರೂಪಿಸಲಾಗಿದೆ.

ಶೀರ್ಷಿಕೆಗಳಿಗೆ ಹಲವು ಶೈಲಿಯ ಫಾಂಟ್‌ಗಳನ್ನು ಕನ್ನಡದಲ್ಲಿ ಬಳಸಲಾಗುತ್ತಿದೆ. ಇವುಗಳನ್ನು ಗ್ರಾಫಿಕ್ಸ್ ತಜ್ಞರು ತುಂಬಾ ಶ್ರಮವಹಿಸಿ ರೂಪಿಸಿದ್ದಾರೆ. ಆಂಗ್ಲ ಲಿಪಿಯ ಮಾದರಿಗಳನ್ನು ಅನುಸರಿಸಿದ್ದಾರೆ. ಆದರೆ ಇವು ರನ್ನಿಂಗ್ ಫಾಂಟ್‌ನ ಜೊತೆ ಹೊಂದಿಕೆಯಾಗುತ್ತಿಲ್ಲ. ಇವು ಕಣ್ಣಿಗೆ ಹಿತವಾಗಿ ಕಾಣುವುದಿಲ್ಲ. ವೈವಿಧ್ಯತೆ ಎಂಬ ಹೊಸ ಸೋಗಿನಿಂದ ವಿವೇಚನೆಯಿಲ್ಲದೆ ಕಳಪೆ ವಿನ್ಯಾಸದ ಅಕ್ಷರಗಳನ್ನು ಸೃಷ್ಟಿಸುವುದು ಕನ್ನಡ ಭಾಷೆಗೆ ಹಿತವೆನಿಸುವುದಿಲ್ಲ.

ಕನ್ನಡ ಲಿಪಿಯನ್ನು ಗಣಕ ಯಂತ್ರದಲ್ಲಿ ಅಳವಡಿಸಿದರೆ ಮಾತ್ರ ಸಾಲದು, ಅದು ಎಲ್ಲಾ ತರಹದ ವ್ಯಕ್ತಿಗಳಿಗೆ ಸರಳವಾಗಿ ದೊರೆಯುವಂತೆ ಮಾಡಬೇಕು. ಈಗಾಗಲೇ ಚಾಲ್ತಿಯಲ್ಲಿರುವ ಬಹುತೇಕ ತಂತ್ರಾಂಶಗಳನ್ನು ಬಳಸಿಕೊಂಡು ಕನ್ನಡ ಮುದ್ರಣಗಳನ್ನು ತೆಗೆಯುತ್ತಿದ್ದಾರೆ. ಅವುಗಳಿಂದ ಕನ್ನಡ ಸಾಹಿತ್ಯದ ಮತ್ತಷ್ಟು ಬರವಣಿಗೆಯನ್ನು ಅಂತರ್ಜಾಲದಲ್ಲಿ ಸೇರಿಸುತ್ತಿದ್ದಾರೆ. ಈ ತಂತ್ರಾಂಶಗಳಿಂದಲೆ ನಮ್ಮ ಸಾಹಿತ್ಯ ಜಾಲಗಳಲ್ಲಿ ವಿಷಯವನ್ನು ಅಳವಡಿಸಲು ಸಾಧ್ಯ.

ಆಧುನಿಕ ಜಗತ್ತಿಗೆ ಕಾಲಿಡುತ್ತಿರುವ ಮಾನವ ಕುಲ ಹೊಸದನ್ನು ಮಾತ್ರ ಆಯ್ಕೆ ಮಾಡಿಕೊಂಡು ಹಳೆಯದನ್ನು ಹಿಂದೆ ಸರಿಸುತ್ತಿರುವುದು ತಿಳಿದುಬರುತ್ತಿದೆ. ಇಂದು ಏನಾದರೂ ಅರ್ಜಿ ನಮೂನೆ ಬರೆ ಯಬೇಕಾದರೆ ಕೂಡಲೇ ಗಣಕ ಯಂತ್ರದಿಂದ ಮುದ್ರಿಸಿ ಸಂಬಂಧಿಸಿದವರಿಗೆ ಕಳಿಸಲಾಗುತ್ತದೆ. ಕನ್ನಡ ಭಾಷೆಯ ಜಾಲತಾಣಗಳಲ್ಲಿ ಸಾಕಷ್ಟು ಮಾಹಿತಿ ಲಭ್ಯವಿದ್ದು, ಅದನ್ನೂ ಬಳಸಿಕೊಂಡರೆ ಭಾಷೆಗೆ ಮತ್ತಷ್ಟು ಮೆರಗು ಸಿಕ್ಕಿ ಅದು ಸಮಾಜದಲ್ಲೇ ಅಲ್ಲದೆ ದೇಶ, ವಿದೇಶದಲ್ಲೂ ಉತ್ತಮ ಭಾಷೆಯಾಗಿ ಪ್ರಾಮುಖ್ಯತೆ ಪಡೆಯುತ್ತದೆ.

ಗಣಕ ಯಂತ್ರದಲ್ಲಿ ಕನ್ನಡ ಭಾಷೆಯನ್ನು ಬಳಸಿಕೊಂಡು ಸಂದೇಶವನ್ನು ಮತ್ತೊಬ್ಬರಿಗೆ ಕಳು ಹಿಸಬಹುದು. ಗಣಕ ಬಳಕೆದಾರರು ಕನ್ನಡ ಭಾಷಾ ಸಂದೇಶವನ್ನು ರೋಮನ್ ಲಿಪಿಯಲ್ಲಿ ನಿರೂಪಿಸು ತ್ತಾರೆ. ಸಾಮಾನ್ಯವಾಗಿ ಈಗ ಗಣಕಗಳನ್ನು ಬಳಸುತ್ತಿರುವವರು ಕನ್ನಡದ ಜೊತೆಗೆ ಇಂಗ್ಲೀಷ್ ಲಿಪಿ ವ್ಯವಸ್ಥೆಯನ್ನು ಬಲ್ಲವರಾದ್ದರಿಂದ ಆ ಲಿಪಿಯನ್ನು ಬಳಸುವುದು ಅವರಿಗೆ ಸುಲಭವಾಗಿದೆ. ಹೀಗೆ ಕಾರ್ಯವಾಹಿಗಳ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ರೋಮನ್ ಲಿಪಿಯನ್ನು ಕನ್ನಡ ಲಿಪಿಗೆ ಪರ್ಯಾಯವಾಗಿ ಬಳಸುವುದನ್ನು ಸಾರ್ವತ್ರಿಕವಾಗಿ ಕಾಣಬಹುದು. ಗಣಕದಲ್ಲಿ ಕನ್ನಡ ಲಿಪಿಗೆ ರೋಮನ್ ಲಿಪಿಯನ್ನು ಬಳಸಿದರೆ ಅದರಿಂದ ತಪ್ಪಾಗುತ್ತದೆ ಎಂದು ಕೊರಗುವ ಕಾಲ ಇದಲ್ಲ. ಏಕೆಂದರೆ ಈಗಾಗಲೇ ಒಂದು ಲಿಪಿ ವ್ಯವಸ್ಥೆಯಿಂದ ಇನ್ನೊಂದು ಲಿಪಿ ವ್ಯವಸ್ಥೆಗೆ ಲಿಪ್ಯಂತರ ಮಾಡುವ ಕಾರ್ಯವಾಹಿಗಳು ಬಳಕೆಯಲ್ಲಿವೆ. ರೋಮನ್ ಲಿಪಿಯನ್ನು ಕನ್ನಡಕ್ಕೆ ಪರಿವರ್ತಿಸುವುದು ಈಗ ಅಸಾಧ್ಯ ಎನ್ನುವಂತಿಲ್ಲ. ಇಂದು ಹೆಚ್ಚು ಬಳಕೆಯಲ್ಲಿರುವ ಕನ್ನಡ ಕಾರ್ಯವಾಹಿಗಳಲ್ಲಿ ಒಂದಾದ ಬರಹದಲ್ಲಿ ವಾಸ್ತವವಾಗಿ ಮೂಲ ದಾಖಲಾತಿಗಳು ರೋಮನ್ ಲಿಪಿಯಲ್ಲೇ ಆಗುತ್ತವೆ. ಅನಂತರ ಅದನ್ನು ಕನ್ನಡ ಲಿಪಿಗೆ ಬದಲಿಸಿಕೊಳ್ಳುವ ಅವಕಾಶವನ್ನು ಕಾರ್ಯವಾಹಿಯಲ್ಲಿ ರೂಪಿಸಲಾಗಿದೆ.

ದಿನನಿತ್ಯದ ವ್ಯವಹಾರಗಳಿಗೆ ಕನ್ನಡದ ಪದ ಸಂಸ್ಕರಣೆ ಸಾಫ್ಟ್‌ವೇರನ್ನು ಈಗಾಗಲೇ ಹಲವರು ಅಭಿವೃದ್ಧಿಪಡಿಸಿದ್ದಾರೆ. "ಶ್ರೀ. ಶೇಷಾದ್ರಿ ವಾಸುರವರು ಬರಹವೆಂಬ ಹೆಸರಿನ ಕನ್ನಡ ಸಾಫ್ಟ್‌ವೇರನ್ನು

ಅಭಿವೃದ್ಧಿಪಡಿಸಿ, ಇಂಟರ್ ನೆಟ್‌ನಲ್ಲಿ ಮುಕ್ತವಾಗಿ ನಕಲು ಮಾಡಿಕೊಳ್ಳಲು ಬಿಡುಗಡೆ ಮಾಡಿದ್ದಾರೆ. ಇಂದು ಇದನ್ನೆ ಬಳಸಿಕೊಂಡು ಬಹುತೇಕ ಮಂದಿ ಕನ್ನಡದಲ್ಲಿ ಬೇಕಾದ ಮುದ್ರಣಗಳನ್ನು ಪಡೆದು ಕೊಳ್ಳುತ್ತಿದ್ದಾರೆ. ಇದರಲ್ಲಿ ಕನ್ನಡದ ಸರಳವಾದ ಮುದ್ರಣ ಕ್ರಿಯೆಗಳನ್ನು ನಡೆಸಲು ಸಾಧ್ಯವಿರುವುದರಿಂದ ಕನ್ನಡಾಭಿಮಾನಿಗಳಿಗೆ ಉಪಯುಕ್ತವಾಗಿದೆ. ಬರಹ ತಂತ್ರಾಂಶವು ಅಂತರ್ಜಾಲದಲ್ಲಿ ಸಾಕಷ್ಟು ಮಾಹಿತಿ ಒದಗಿಸಿ ಕೊಡಲು ಸಹಾಯಕವಾಗಿದೆ. ಬರಹ ತಂತ್ರಾಂಶದಲ್ಲಿ ಕನ್ನಡ ಭಾಷೆಯಲ್ಲಿ ಪತ್ರದ ವ್ಯವಹಾರ ಗಳನ್ನು ಮಾಡಬಹುದು. ಆದರೆ ಇತ್ತ ಕಡೆ ಪತ್ರ ವ್ಯವಹಾರ ಮಾಡಲು ವ್ಯಕ್ತಿ ಬಳಸುವ ತಂತ್ರಾಂಶ ಗಳನ್ನು ಅತ್ತ ಓದುವಂತವನು ಬಳಸಿದರೆ ಮಾತ್ರ ಅದನ್ನು ಓದಬಹುದು. ಇಲ್ಲದಿದ್ದರೆ ಅದರ ಲಿಪಿ ಬದಲಾವಣೆಯಾಗುತ್ತದೆ. ಕಂಪ್ಯೂಟರ್ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕನ್ನಡದಲ್ಲಿ ತಿಳಿಸುವ ಅಗತ್ಯ ಇಂದು ಹೆಚ್ಚಾಗಿದೆ. ಆ ಬಗೆಯ ಕನ್ನಡ ವಿಜ್ಞಾನ ಪುಸ್ತಕಗಳು ಎಲ್ಲಾ ಪುಸ್ತಕ ಮಳಿಗೆಗಳಲ್ಲಿ ದೊರೆಯುತ್ತಲಿವೆ."[೪]

ಕನ್ನಡದ ಸಾರಸತ್ವಲೋಕದ ಎಲ್ಲಾ ಮಾಹಿತಿಯನ್ನು ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸುವುದ ರಿಂದ ಗ್ರಂಥ ಭಂಡಾರಗಳಲ್ಲಿ ಕೇವಲ ಕೀ ಬೋರ್ಡ್, ಮಾನೀಟರ್‌ಗಳ ಏಪಾರ್ಡಿನಿಂದ ಅನೇಕ ಜನರು ಒಂದೇ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಮ್ಮೆಗೇ ಓದಲು ಸಾಧ್ಯವಾಗುತ್ತದೆ. ಇಂತಹ ಮಾದರಿಯ ತಂತ್ರಾಂಶಗಳನ್ನು ಜಾರಿಗೆ ತಂದು ಕನ್ನಡಿಗರಿಗೆ ಅನುಕೂಲ ಮಾಡುವ ಯತ್ನ ವನ್ನು ಸರ್ಕಾರ ಮಾಡಬೇಕು.

ಗಣಕ ಯಂತ್ರದಲ್ಲಿ ಹೊಸ ತಂತ್ರಜ್ಞಾನವನ್ನು ಕನ್ನಡ ಬರವಣಿಗೆಯ ಮತ್ತೊಂದು ವಲಯವು ಪ್ರಭಾವಿಸಿದೆ. ದಾಖಲೆಗಳ ಸಂರಕ್ಷಣೆಯ ವಲಯವಿದು. ಲಿಖಿತ ದಾಖಲೆಗಳನ್ನು ಅವು ಯಾವ ಸಾಮ ಗ್ರಿಯ ಮೇಲೆ, ಭಿತ್ತಿಯ ಮೇಲೆ, ಶಿಲೆಯ ಮೇಲೆ ರೂಪ ಗೊಂಡಿದ್ದವೋ ಅವುಗಳನ್ನು ನಮ್ಮ ಅನು ಕೂಲಕ್ಕಾಗಿ ಮುದ್ರಣದ ನೆರವಿನಿಂದ ಕಾಗದಕ್ಕೆ ರವಾನಿಸಿಕೊಂಡಿದ್ದೇವೆ. ೨೦ನೇ ಶತಮಾನದಲ್ಲಿ ಹೀಗೆ ಮಾಧ್ಯಮ ಪರಿವರ್ತನೆಯ ಕೆಲಸ ಅಗಾಧ ಪ್ರಮಾಣದಲ್ಲಿ ನಡೆದಿದೆ. ಕಳೆದ ಐವತ್ತು ವರ್ಷದಲ್ಲಿ ಇಂತಹ ಕೆಲಸ ನಡೆಯುತ್ತಲೇ ಬಂದಿದೆ. ಆದರೆ ನಮಗೆ ಈಗ ಖಚಿತವಾಗಿರುವ ಸಂಗತಿ ಎಂದರೆ ಕಾಗದದ ಜೀವಿತಾವಧಿ ದಿನಕಳೆದಂತೆ ಕುಗ್ಗುತ್ತದೆ. ಮೊದಮೊದಲು ಹಲವು ದಶಕಗಳ ಕಾಲ ಹಾಳಾ ಗದೆ ಇರುತ್ತಿದ್ದ ಕಾಗದದ ಮೇಲಿರುವ ದಾಖಲೆಗಳನ್ನು ಹೆಚ್ಚು ಸ್ಥಿರವಾದ ಗಣಕ ಮಾಧ್ಯಮಕ್ಕೆ ರವಾನಿ ಸುವ ಅಗತ್ಯ ಕಂಡು ಬಂದಿದೆ. ಕಾಗದದ ಇನ್ನೊಂದು ಮಿತಿ ಎಂದರೆ ಅದೊಂದು ಭೌತಿಕ ವಸ್ತು ವಾದ್ದರಿಂದ ಅದರಲ್ಲಿ ಆಗಿರುವ ಭಾಷಾ ದಾಖಲಾತಿಗಳು ಕೆಲವೇ ವರ್ಷ ಬಾಳುತ್ತವೆ. ಕಾಗದದ ಈ

ಎರಡು ಮಿತಿಗಳನ್ನು ಮೀರಿ ಈಗ ಗಣಕಗಳ ನೆನಪಿನಲ್ಲಿ ಇರಿಸಬಹುದು ಮತ್ತು ಯಾರಿಗಾದರೂ ಅವು ತಕ್ಷಣ ದೊರೆಯುವಂತೆ ಮಾಡಬಹುದು. ಕನ್ನಡದಲ್ಲಿ ಈ ಸಾಧ್ಯತೆಯನ್ನು ಈಗೀಗ ಬಳಸಲಾಗುತ್ತಿದೆ.

ಕನ್ನಡ ಭಾಷೆ ತನ್ನ ಹುಟ್ಟಿನಿಂದ ವೈಯಕ್ತಿಕವಾಗಿ ಹಾಗೂ ಇತರ ಭಾಷೆಗಳ ಸಂಪರ್ಕ ಪ್ರಕ್ರಿಯೆಯಿಂದ ನಿರಂತರವಾಗಿ ಬೆಳೆದು ಪ್ರಸ್ತುತ ರೂಪವನ್ನು ಪಡೆದಿದೆ. ಕನ್ನಡಕ್ಕೆ ತನ್ನದೇ ಆದ ಸ್ವರೂಪ ವಿದ್ದರೂ ಸಹ ಸಂದರ್ಭಕ್ಕೆ ಅನುಗುಣವಾಗಿ ಆಡು ನುಡಿ ಮತ್ತು ಬರಹದಲ್ಲಿ ಅಂತರವನ್ನು ಹೊಂದಿದೆ. ಈ ಅಂತರ ಕೆಲವೊಮ್ಮೆ ಬರಹದಲ್ಲಿ ದೋಷಪೂರಿತ ರಚನೆಗೆ ಕಾರಣವಾಗಿದೆ. ಅಲ್ಲದೆ ಸಾಮಾನ್ಯ ಬಳಕೆಯಿಂದ ಭಿನ್ನವಾಗಿ ಅನೇಕ ತಾಂತ್ರಿಕ ಸಂದರ್ಭಗಳಲ್ಲಿ ಆಡುನುಡಿ ಹಾಗೂ ಸಾಮಾನ್ಯ ಬರಹಕ್ಕಿಂತ ಭಿನ್ನವಾಗಿ ಇಂದು ಆಡಳಿತದ ಕನ್ನಡವಾಗಿ ಬೆಳೆದು ಬಂದು ಗಣಕ ಲೋಕಕ್ಕೆ ಅಗತ್ಯವಾದ ಭಾಷೆಯಾಗಿ ಬೆಳೆದು ಬಂದಿದೆ. ಇಂದು ಅಂತರ್ಜಾಲ ಕ್ಷೇತ್ರದಲ್ಲಿ ಹಲವಾರು ತಂತ್ರಾಂಶಗಳನ್ನು ಬಳಸಿಕೊಂಡು ಕನ್ನಡ ಭಾಷೆಯಲ್ಲಿ ಅನೇಕ ಅರ್ಜಿ ನಮೂನೆಗಳು, ಕಛೇರಿ ವ್ಯವಹಾರಗಳು ಜರುಗುವುದನ್ನು ಕಾಣು ತ್ತೇವೆ.

ಕನ್ನಡ ಭಾಷೆಯಲ್ಲಿ ಮಾತು ಮತ್ತು ಬರಹದ ಭಾಷೆಗಳಿವೆ. ಈ ಎರಡೂ ಭಾಷೆಗಳು ಒಂದ ಕ್ಕೊಂದು ಪೂರಕವಾಗಿವೆ. ಬರಹದ ಭಾಷೆಗಿಂತ ಆಡುಮಾತಿಗೆ ಸುದೀರ್ಘವಾದ ಚರಿತ್ರೆಯಿದೆ. ಆದರೆ ಕನ್ನಡ ಭಾಷೆಯ ಚರಿತ್ರೆಯನ್ನು ಲಿಖಿತ ದಾಖಲೆಗಳ ಮೂಲಕ ಕಟ್ಟಲು ಪ್ರಯತ್ನಿಸಿರುವುದರಿಂದ ನಾವು ಅಧ್ಯಯನ ಮಾಡುವ ಕನ್ನಡ ಚರಿತ್ರೆ ಲಿಖಿತ ಭಾಷೆಯನ್ನೇ ಕುರಿತದ್ದಾಗಿದೆ. ಲಿಖಿತ ಭಾಷೆ ಆಡು ಮಾತನ್ನು ಆಧರಿಸಿಯೇ ರಚನೆಯಾಗಿರುವುದರಿಂದ ಈಗ ದೊರೆತ ಆಧಾರಗಳಿಗಿಂತ ತುಂಬಾ ಹಿಂದೆ ಯೇ ಕನ್ನಡ ಭಾಷೆಯು ಬಳಕೆಯಲ್ಲಿತ್ತು. ಕರ್ನಾಟಕದಾದ್ಯಂತ ಬಳಸುವ ಭಾಷೆ ಕನ್ನಡವೊಂದೆ ಆಗಿ ದ್ದರೂ ಅದು ಒಂದು ಕನ್ನಡ ಅಲ್ಲ. ಹಲವಾರು ಕನ್ನಡಗಳಿವೆ. ಒಂದೇ ಪ್ರದೇಶದಲ್ಲಿ ಬಳಸುವ ಕನ್ನಡ ದಲ್ಲೂ ಸಾಮಾಜಿಕವಾಗಿ ಬಳಕೆಯಾಗುವಾಗ ಭಿನ್ನತೆಯಿರುವುದನ್ನು ನೋಡಬಹುದಾಗಿದೆ. ಕನ್ನಡ ಭಾಷೆ ದೈವದತ್ತವಾದುದು. ಅದು ಮನುಷ್ಯನಿಗೆ ದೈವ ಸ್ವರೂಪದಿಂದಲೆ ಪ್ರಾಪ್ತವಾಗುತ್ತದೆ ಎಂದು ನಂಬ ಲಾಗಿತ್ತು. ಆದರೆ ಭಾಷೆಯ ಉಗಮಕ್ಕೆ ಹಲವಾರು ವಾದಗಳೇ ಹುಟ್ಟಿಕೊಂಡಿವೆ. ಪ್ರಕೃತಿ ದತ್ತವಾದದ್ದು ಅಂತ ಕೆಲವರು, ದೈವದತ್ತವಾದದ್ದು ಎಂದು ಕೆಲವರು, ಸಂಜ್ಞೆಗಳ ಮೂಲಕ ಭಾಷೆಯ ಉದ್ಭವ ಎಂದು ಹೀಗೆ. ಏನೇ ಆದರೂ ಸಾವಿರಾರು ವರ್ಷಗಳಿಂದ ಭಾಷೆ ರಚನೆಗೊಂಡು ಬಳಕೆಗೆ ಬಂದಿದೆ. ಅದನ್ನು ಇಂದು ಕಂಪ್ಯೂಟರೀಕರಣಗೊಳಿಸಿ ಸಮಾಜದಲ್ಲಿ ಬಳಸಲಾಗುತ್ತಿದೆ.

"ಕನ್ನಡ ಭಾಷೆಯ ಚರಿತ್ರೆಯನ್ನು ಕಟ್ಟುವಲ್ಲಿ ನಮ್ಮ ವಿದ್ವಾಂಸರು ಮುಖ್ಯವಾಗಿ ಎರಡು ವಿಧಾನ ಗಳನ್ನು ಬಳಸಿದ್ದಾರೆ. ಒಂದು, ವಿವಿಧ ಮೂಲಗಳಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ನಾಡಿನ ಬಗ್ಗೆ ಸಿಗುವ

ಲಿಖಿತ ದಾಖಲೆಗಳ ಮೂಲಕ ಕನ್ನಡ ಭಾಷೆಯ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಈಗಲೂ ಈ ವಿಧಾನ ಹೆಚ್ಚು ಪ್ರಚಲಿತದಲ್ಲಿದೆ. ಎರಡು, ಕನ್ನಡ ಭಾಷೆಯ ಆಂತರಿಕ ರಚನೆಯ ಮೂಲಕವೇ ಅದರ ಪ್ರಾಚೀನತೆಯನ್ನು ಹೇಳುವುದು. ಈ ವಿಧಾನ ಹೆಚ್ಚು ಬಳಕೆಯಲ್ಲಿಲ್ಲ."[೫]

ಇಲ್ಲಿಯವರೆಗೂ ವಿದ್ವಾಂಸರು ಕನ್ನಡ ಭಾಷೆಯ ಚರಿತ್ರೆಯನ್ನು ಕ್ರಿಸ್ತ ಪೂರ್ವಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಶಾಸನ, ಕಾವ್ಯ, ಪುರಾಣ ಮುಂತಾದ ಬರಹಗಳಲ್ಲಿ ಕನ್ನಡ ನಾಡಿನ ಬಗ್ಗೆ, ಕನ್ನಡ ಭಾಷೆಯ ಬಗ್ಗೆ ಸಿಗುವ ಅಲ್ಪಸ್ವಲ್ಪ ಆಧಾರಗಳಿಂದ ಕನ್ನಡದ ಪ್ರಾಚೀನತೆಯನ್ನು ಹೇಳಿದ್ದಾರೆ. ಕನ್ನಡ ಎನ್ನುವುದು ಕನ್ನಡ ಭಾಷೆಯ ಹೆಸರಾಗಿಯೂ ಮತ್ತು ಕರ್ನಾಟಕ ಎನ್ನುವುದು ಪ್ರದೇಶ ಸೂಚಕವಾಗಿ ಬಳಕೆಯಾಗಿದೆ. ಇಲ್ಲಿ ಬಳಕೆಯಾಗುತ್ತಿರುವ ಕರ್ನಾಟಕವೇ ಮೂಲ ರೂಪವೆಂದು, ಕನ್ನಡ ಎನ್ನುವುದು ಅದರ ತದ್ಭವವೆಂದು ತುಂಬಾ ಹಿಂದೆಯೇ ನಮ್ಮ ವೈಯ್ಯಾಕರಣಿಗಳು ಅಭಿಪ್ರಾಯಪಟ್ಟಿದ್ದಾರೆ. ಕರ್ಣಾಟ ಎಂಬುದು ಕರ್ನಾಡು ಎಂಬುದರ ಸಂಸ್ಕೃತ ರೂಪ ಎಂತಲೂ ಹೇಳಿದ್ದಾರೆ. "ಕರ್ಣಾಟ ಮತ್ತು ಕರ್ನಾಟಕ ಎಂಬ ರೂಪಗಳು ಪ್ರಾಚೀನ ಕಾಲದಿಂದಲೂ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಬಳಕೆ ಯಾಗಿರುವ ದಾಖಲೆಗಳಿವೆ. ಇದರಿಂದಲೂ ನಮ್ಮ ವಿದ್ವಾಂಸರು ಕನ್ನಡದ ಪ್ರಾಚೀನತೆಯನ್ನು ನಿರ್ಧ ರಿಸುತ್ತಾರೆ.

ಉದಾ : ಕ್ರಿ. ಪೂ. ೨ನೇ ಶತಮಾನದಿಂದ ಕ್ರಿ. ಶ. ೨ನೇ ಶತಮಾನದ ಕಾಲಾವಧಿಯಲ್ಲಿ ರಚನೆ ಗೊಂಡಿದೆ ಎಂದು ವಿದ್ವಾಂಸರಿಂದ ಹೇಳಲ್ಪಡುವ ಮಹಾಭಾರತದಲ್ಲಿ ಕರ್ಣಾಟ, ಕರ್ನಾಟಕ ಎನ್ನುವ ದೇಶ ವಾಚಕ ಪದಗಳು ಉಲ್ಲೇಖವಾಗಿವೆ. ಕ್ರಿ. ಪೂ. ೧ರಿಂದ ೯ನೇ ಶತಮಾನದಲ್ಲಿ ರಚನೆಯಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟ ಸಂಸ್ಕೃತದ ಮೃಚ್ಛಕಟಿಕ ನಾಟಕದಲ್ಲಿ ಬರುವ ವಿಚಕ – ಚಂದ ನಾಥರ ಸಂಭಾಷಣೆಯಲ್ಲಿ ಕರ್ನಾಟಕ ದೇಶದ ಹೆಸರು ದಾಖಲಾಗಿದೆ. ಕ್ರಿ. ಶ. ೨ನೇ ಶತಮಾನದಲ್ಲಿ ರಚನೆಯಾದ ತಮಿಳು ಭಾಷೆಯ ಶಿಲಪ್ಪದಿಕಾರಂ ಎಂಬ ಗ್ರಂಥದಲ್ಲಿ ಕರುನಾಡರ್ ಎನ್ನುವ ಶಬ್ದ ಪ್ರಯೋಗವಾಗಿರುವುದು ಕಂಡು ಬರುತ್ತದೆ. ಇದೇ ಕಾಲದ ಹಾಲರಾಜನ ಗಾಥಾಸಪ್ತಶತಿ ಗ್ರಂಥ ದಲ್ಲಿಯೂ ಪೊಟ್ಟೆ, ಪಿಟ್ಟ ಎನ್ನುವ ಕನ್ನಡದ ಪದಗಳು ಬಳಕೆಯಾಗಿರುವುದು ವಿದ್ವಾಂಸರಿಂದ ತಿಳಿಯು ತ್ತದೆ. ೧ನೇ ಶತಮಾನದಲ್ಲಿ ರಚಿತವಾಗಿದೆ ಎನ್ನುವ ಮಾರ್ಕಂಡೇಯ ಪುರಾಣದಲ್ಲಿ ಅನೇಕ ದೇಶಗಳ ಹೆಸರುಗಳ ಜೊತೆಗೆ ಕರ್ಣಾಟಕ ಎನ್ನುವುದನ್ನು ದಾಖಲಿಸಲಾಗಿದೆ."[೬] ಹೀಗೆ ಸಾಹಿತ್ಯ ಕೃತಿಗಳಲ್ಲಿ, ಪುರಾಣಗಳಲ್ಲಿ, ಶಾಸನಗಳಲ್ಲಿ ದಾಖಲಾಗಿರುವ ಭಾಷಾ ವಾಚಕ, ಪ್ರದೇಶ ವಾಚಕ ಶಬ್ದಗಳ ಜೊತೆಗೆ ಅನೇಕ ಕನ್ನಡ ಪದಗಳು ದಾಖಲಾಗಿವೆ. ಕನ್ನಡ ಪದಗಳು, ಪ್ರದೇಶದ ಹೆಸರುಗಳು ದಾಖಲಾ ಗಿರುವುದರಿಂದ ಆ ಕಾಲಕ್ಕಾಗಲೇ ಕನ್ನಡ ಪ್ರದೇಶ ಮತ್ತು ಭಾಷೆ ಇತ್ತು ಎನ್ನುವುದು ಎಲ್ಲರ ಅಭಿಮತ.

ಕನ್ನಡ ಭಾಷೆಯ ಚರಿತ್ರೆಯನ್ನು ಇದುವರೆಗೆ ಕಟ್ಟಲಾದ ಮಾದರಿಗಿಂತ ತೀರ ಭಿನ್ನವಾಗಿ ಕಟ್ಟಲು ತೀರ ಇತ್ತೀಚೆಗೆ ಡಾ. ಕೆ.ಎಸ್. ಶಂಕರ ಭಟ್ಟರು ಪ್ರಯತ್ನಿಸಿದ್ದಾರೆ. ಕೇವಲ ಲಿಖಿತ ಆಧಾರಗಳಿಂದಷ್ಟೆ ಒಂದು ಭಾಷೆಯ ಚರಿತ್ರೆಯನ್ನು ನಿರೂಪಿಸಲು ಸಾಧ್ಯ ಎಂದು ತಿಳಿದಿದ್ದು, ನಮಗೆ ಕನ್ನಡ ಭಾಷೆಯ ಆಂತರಿಕ ರಚನೆಯ ಮೂಲಕವೂ ಅದರ ಚರಿತ್ರೆ ಕಟ್ಟಲು ಸಾಧ್ಯ ಎನ್ನುವುದನ್ನು ಅವರು ತೋರಿಸಿ ಕೊಟ್ಟಿದ್ದಾರೆ. ಪ್ರಸ್ತುತ ಚಾಲ್ತಿಯಲ್ಲಿರುವ ಭಾಷಾ ಬಳಕೆಯ ದಾಖಲೆಗಳ ಮೂಲಕವೇ ಕನ್ನಡ ಭಾಷೆಯ ಚರಿತ್ರೆಯನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ.

ಪ್ರತಿಯೊಂದು ಪ್ರಾಣಿ ಪಕ್ಷಿಗಳಿಗೂ ಅವುಗಳದೆ ಆದ ಭಾಷಾ ಮಾಧ್ಯಮಗಳಿವೆ. ಅವು ಕೂಗುವ, ಬೊಗಳುವ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಆದರೆ ಮನುಷ್ಯ ಆ ಎಲ್ಲಾ ಪ್ರಾಣಿಗಳಿಗಿಂತ ಭಿನ್ನವಾಗಿ ಮಾತನಾಡುವ ಬುದ್ಧಿಶಕ್ತಿಯನ್ನು ಹೊಂದಿರುವುದು ಅವನ ಹೆಗ್ಗಳಿಕೆ. ಯಂತ್ರ ಜಗತ್ತಿಗೆ ಕಾಲಿಟ್ಟಾಗಿನಿಂದಲೂ ಅವನು ಹೊಸ ಹೆಜ್ಜೆಗಳನ್ನಿಟ್ಟು, ಹೊಸ ಯುಗಕ್ಕೆ ಲಂಘಿಸುತ್ತಿದ್ದಾನೆ. ಭಾಷೆಯನ್ನು ಇಂದು ಕಂಪ್ಯೂಟರ್‌ನಲ್ಲಿ ಅಳವಡಿಸಿಕೊಂಡು ತನ್ನ ಕಾರ್ಯಗಳನ್ನು ಮಾಡುತ್ತಿದ್ದಾನೆ. ಸರ್ಕಾರಿ ಕಛೇರಿಗಳಲ್ಲಿ ಒಂದು ಸುತ್ತೋಲೆ ಹೊರಡಿಸಬೇಕಾದರೂ ಕೈಬರಹವನ್ನೇ ನಂಬಬೇಕಿತ್ತು. ಆದರೆ ಈಗ ಅತಿ ಸುಲಭ ರೀತಿಯಲ್ಲಿ ಗಣಕ ಯಂತ್ರದಲ್ಲಿ ಮುದ್ರಿಸಿ ಕಳುಹಿಸುವ ಸೌಲಭ್ಯ ಜಾರಿಯಲ್ಲಿದೆ.

ಮನುಷ್ಯ ತನ್ನ ಅನುಭವವನ್ನು, ಜ್ಞಾನವನ್ನು ಪ್ರಸಾರ ಮಾಡುವುದು ಮತ್ತು ಸ್ವೀಕರಿಸುವುದು ತನ್ನ ಗುರಿ ಸಾಧನೆಗಾಗಿ ಮಾಡುವ ಪ್ರಯತ್ನವಾಗಿದೆ. ಈ ರೀತಿಯ ಪ್ರಯತ್ನದ ಫಲವಾಗಿಯೇ ಮನುಷ್ಯ ಸಮಾಜದಲ್ಲಿ ಭಾಷೆ ಮತ್ತು ಲಿಪಿ ಹುಟ್ಟಿಕೊಂಡಿವೆ ಎಂದು ಅನೇಕರು ಈಗಾಗಲೆ ವಿಶದಪಡಿಸಿದ್ದಾರೆ. ಭಾಷೆಯನ್ನು ರೂಪಿಸಿದ್ದೆ ಮನುಷ್ಯನ ಅದ್ಭುತ ಸಾಹಸಗಳಲ್ಲಿ ಒಂದು. ಅದನ್ನು ಲಿಪಿಯಲ್ಲಿ ಹಿಡಿದಿಡಲು ಆಕರಗಳನ್ನು ಕಂಡು ಹಿಡಿದಿದ್ದು ಮತ್ತೂ ಅದ್ಭುತ. ಇಂದಿನ ಸಾಮಾಜಿಕ ಬದಲಾವಣೆಗೆ ಮತ್ತು ಬೆಳವಣಿಗೆಗೆ ಭಾಷೆಯೇ ಕಾರಣವಾಗಿದೆ ಎಂದರೂ ತಪ್ಪಾಗಲಾರದು. ಭಾಷೆಗೆ ಲಿಪಿಯನ್ನು ಅಳವಡಿಸಿಕೊಂಡು ಮನುಷ್ಯ ನಶಿಸಿ ಹೋಗುತ್ತಿರುವ ಅನುಭವಗಳನ್ನು, ಯೋಚಿಸಿದ ಚಿಂತನೆಗಳನ್ನು, ಜೊತೆಗೆ ಭಾಷೆಯ ಬೆಳವಣಿಗೆಯನ್ನು, ಅದರ ಸ್ಥಿತಿಯನ್ನು ಲಿಪಿಯಲ್ಲಿ ಹಿಡಿದಿಡಲು ಪ್ರಯತ್ನಿಸಿದ. "ಲಿಪಿಯೊಂದು ಖಚಿತವಾಗಿ ರೂಪುಗೊಳ್ಳುವ ಮುನ್ನ ನೆನಪುಗಳು, ಅನುಭವಗಳು ಮತ್ತು ಯೋಚಿಸಿದ ಚಿಂತನೆಗಳು ರಚನೆಯಾದ ಮೌಖಿಕ ಕಾವ್ಯಗಳು ನಶಿಸಿ ಹೋಗುತ್ತಿದ್ದವು. ಲಿಪಿಯೊಂದು ಭಾಷೆಗೆ ರೂಪುಗೊಂಡ ನಂತರ ಈ ರೀತಿ ನಾಶವಾಗುವುದನ್ನು ಬಹುತೇಕ ತಪ್ಪಿಸಲಾಯಿತು."[2]

ಯಾವುದೇ ಭಾಷೆ ನಿಂತ ನೀರಲ್ಲ. ಅದು ಸದಾ ಕಾಲ ಚಲನೆಯಲ್ಲಿರುವುದರಿಂದ ಬದಲಾಗುತ್ತಲೇ ಇರುತ್ತದೆ. ನೀರು ಹೇಗೆ ಒಂದೇ ಕಡೆ ಇದ್ದರೆ ತನ್ನ ತನವನ್ನು ಕಳೆದುಕೊಳ್ಳುತ್ತದೋ ಹಾಗೆಯೇ

ಭಾಷೆಯೂ ಕೂಡ. ಹರಿಯುತ್ತಿದ್ದರೆ ಅದು ಶುದ್ಧವಾಗಿಯೂ, ವಿಶಾಲವಾಗಿಯೂ, ತನ್ನ ವ್ಯಾಪ್ತಿಯನ್ನು ಹರಡಿಸಿಕೊಳ್ಳುತ್ತದೆ. ಅದೇ ರೀತಿ ಈ ಕನ್ನಡ ಭಾಷೆಯು ಸಹ ಒಂದೆಡೆ ಇದ್ದರೆ ಅದು ತನ್ನ ತನವನ್ನು ಕಳೆದುಕೊಳ್ಳುತ್ತದೆ. ಅದು ಸದಾ ಚಾಲ್ತಿಯಲ್ಲಿದ್ದು ಬದಲಾಗುತ್ತ ಹೊಸ ಹೊಸ ತಿರುವುಗಳನ್ನು ಕಂಡರೆ ಅದು ಒಂದು ಉತ್ತಮ ಭಾಷೆಯಾಗಿ ನೆಲೆ ನಿಲ್ಲಲು ಸಾಧ್ಯವಾಗುತ್ತದೆ. ಮನುಷ್ಯ ವೈಜ್ಞಾನಿಕ ಜಗತ್ತಿಗೆ ಕಾಲಿಡುತ್ತಿದ್ದಾನೆ. ಅವನಿಗೆ ಬೇಕಾದ ರೀತಿಯಲ್ಲಿ ಭಾಷೆಯನ್ನು ಬಳಸುತ್ತಿದ್ದಾನೆ. ಗಣಕ ಯಂತ್ರದಲ್ಲಿ ಬೇಕಾದ ವ್ಯವಹಾರಗಳಿಗೆ ಬಳಸಿಕೊಳ್ಳುತ್ತಿದ್ದಾನೆ. ತನ್ನ ಜೊತೆಗೆ ಭಾಷೆಯನ್ನು ಬದಲಾವಣೆಯತ್ತ ಕೊಂಡೊಯುತ್ತಿದ್ದಾನೆ.

ಶಾಸನಗಳಿಂದ ಹಿಡಿದು ಇಂದಿನ ಸಣ್ಣ ಕವನಗಳವರೆಗೂ ಕನ್ನಡ ಸಾಹಿತ್ಯದ ಸಾರಸತ್ವ ಲೋಕ ವನ್ನೇ ಅಂತರ್ಜಾಲದಲ್ಲಿ ಕಾಣಬಹುದು. ಇದಕ್ಕೆ ಪ್ರಮುಖ ಕಾರಣ ಕನ್ನಡ ಭಾಷೆಯ ಬೆಳವಣಿಗೆ ಯಾಗಿದೆ. ಯಾವುದೇ ಭಾಷೆ ಅಭಿವೃದ್ಧಿ ಆದಾಗಲೇ ಅದಕ್ಕೆ ಬೇಕಾದ ಬೆಲೆ ಸಿಗುವುದು. ಆದ್ದರಿಂದ ಇಂದು ಕನ್ನಡ ಇಡೀ ವಿಶ್ವದಲ್ಲೆ ಉತ್ತಮ ಭಾಷೆಯಾಗುವ ಮಟ್ಟಕ್ಕೆ ತಲುಪುತ್ತಿದೆ. ಮಾನವನು ಜಗತ್ತಿಗೆ ಕಾಲಿರಿಸಿದ ಕ್ಷಣದಿಂದ ನಾಗರೀಕನಾಗುತ್ತ ಹೋದಂತೆ ಆತನ ಯೋಚನೆಗಳು ಬದಲಾದಂತೆ ಬದುಕುವ ಕ್ರಮವೂ ಬದಲಾಗುತ್ತ ಬಂದಿದೆ. ಹಾಗೆಯೇ ಆತನೊಂದಿಗೆ ಭಾಷೆಯು ಸಹ ಬೆಳೆಯುತ್ತಾ, ಬದಲಾವಣೆ ಹೊಂದುತ್ತ, ಸುಧಾರಣೆಗಳನ್ನು ಮಾಡಿಕೊಂಡು ಬಂದಿದೆ. ವೈಯಕ್ತಿಕವಾಗಿ ಭಾಷೆ ಬದಲಾಗುತ್ತ ಒಂದೆಡೆ ನಡೆದರೆ ಸಾಮಾಜಿಕವಾಗಿಯೂ ಆತನ ಭಾಷೆ ಬದಲಾಗುತ್ತ ಮತ್ತು ಬೆಳೆಯುತ್ತ ಹೋಯಿತು. ಹೊಸ ಹೊಸ ಆವಿಷ್ಕಾರದಂತೆ ಹೊಸ ಪದಕೋಶ ಬೆಳೆಯುತ್ತ ಹೋಗಿ ಹಳೆಯದನ್ನು ಮರೆಯುತ್ತಲೂ ಬಂದ. ಹೀಗೆ ಭಾಷೆ ಬದಲಾವಣೆಯಾಗುತ್ತ ಬಂದಿದೆ. ನಾವು ಬಳಸುತ್ತಿರುವ ಮಾದರಿಯಲ್ಲಿ ಕನ್ನಡ ಹಿಂದೆ ಇರಲಿಲ್ಲ. ಯಾವುದೇ ಹಿಂದಿನ ಕೃತಿಯನ್ನು ತೆಗೆದುಕೊಂಡರೆ ಈ ವಿಷಯ ಖಚಿತವಾಗುತ್ತದೆ. ಆ ಜನರಾಡುವ ಭಾಷೆಯ ಬಗ್ಗೆ ಲಿಖಿತ ಗ್ರಂಥಗಳಿಂದ ಮಾತ್ರ ಅಲ್ಪ ಸ್ವಲ್ಪ ಗೊತ್ತಾಗುತ್ತದೆ. ಇಂದಿನಂತೆ ರೆಕಾರ್ಡ್ ಮಾಡಿಕೊಳ್ಳಲು ಟೇಪ್ ರೆಕಾರ್ಡರ್ ಮತ್ತಿತರ ಯಂತ್ರಗಳು ಇಲ್ಲದೆ ಇರುವ ಕಾಲ ಅದಾಗಿ ರುವುದರಿಂದ ಜನರಾಡುವ ಭಾಷೆಯ ದಾಖಲಾತಿ ಖಚಿತವಾಗಿ ಸಿಕ್ಕುವುದಿಲ್ಲ. ಅಂದಿನ ಗ್ರಂಥಗಳನ್ನು ಗಮನಿಸಿದರೆ, ಗ್ರಂಥಗಳಲ್ಲಿ ಬಳಸಲಾದ ಭಾಷೆ ಕೂಡ ಇಂದು ನಾವು ಬಳಸುತ್ತಿಲ್ಲ.

ಅಂದರೆ ಮಾನವ ತಾನು ಬದಲಾವಣೆಯಾದಂತೆ ಭಾಷೆಯನ್ನು ತನಗೆ ಬೇಕಾದ ರೀತಿಯಲ್ಲಿ ಬದಲಾವಣೆ ಮಾಡಿಕೊಂಡು ಸುಲಭ ರೀತಿಯಲ್ಲಿ ಬಳಸುತ್ತಿದ್ದಾನೆ. ಅದೇ ಇಂದು ಕಂಪ್ಯೂಟರೀಕೃತ ಭಾಷೆಯಾಗಿ ಬೆಳೆದು ಜನರಿಗೆ ಅನುಕೂಲ ಮಾಡುವತ್ತ ಸಾಗಿದೆ. ಈ ಭಾಷೆಯನ್ನು ಬಳಸಿಕೊಂಡು ಸಮಾಜದಲ್ಲಿ ಮನುಷ್ಯ ತನ್ನ ವಹಿವಾಟುಗಳನ್ನು ನಡೆಸುತ್ತಿದ್ದಾನೆ. ಅವನ ಆಧುನೀಕರಣಕ್ಕೆ ಕನ್ನಡ

ಭಾಷೆಯು ಸಹ ಅವನೊಂದಿಗೆ ಬದಲಾವಣೆಯಾಗುತ್ತ ಬಂದಿರುವುದು ತಿಳಿದುಬರುತ್ತದೆ. ಹಳೆಯ ಕಾಲದ ಕನ್ನಡವನ್ನು ಯಾರು ವ್ಯವಹಾರಿಕವಾಗಿ ಬಳಸುತ್ತಿಲ್ಲ. ಇಂದು ಹೊಸ ಕನ್ನಡವೇ ಚಾಲ್ತಿಯಲ್ಲಿದೆ.

ಕನ್ನಡದಲ್ಲಿ ಲಿಖಿತವಾಗಿ ಇದುವರೆಗೂ ದೊರೆತದ್ದು ಕನ್ನಡದ ಮೊಟ್ಟ ಮೊದಲ ಶಾಸನ ಹಲ್ಮಿಡಿ ಶಾಸನವಾಗಿದೆ. ಹೀಗೆಯೇ ಮೊಟ್ಟ ಮೊದಲ ಗ್ರಂಥ ಕವಿರಾಜಮಾರ್ಗವಾಗಿದೆ. ದೊರೆತ ಎರಡು ಆಧಾರಗಳ ನಡುವೆ ಸಾಕಷ್ಟು ಕಾಲಮಾನದ ಅಂತರ ಇದೆ. "ಕ್ರಿ.ಶ. ೪೫೦ರಲ್ಲಿ ಹಲ್ಮಿಡಿ ರಚನೆಯಾಗಿರುವುದು ಕಂಡರೆ ಕವಿರಾಜಮಾರ್ಗ ಸುಮಾರು ೮೫೦ ರಲ್ಲಿ ರಚನೆಯಾದಂತೆ ಕಾಣುತ್ತದೆ. ಅಂದರೆ ಈ ಎರಡೂ ದಾಖಲೆಗಳ ನಡುವೆ ೪೦೦ ವರ್ಷಗಳ ಅಂತರ ಇದೆ. ಹಲ್ಮಿಡಿ ಶಾಸನದಲ್ಲಿ ಕನ್ನಡದ ಶಬ್ದಗಳು ಕಂಡು ಬರುತ್ತವೆ. ಕವಿರಾಜಮಾರ್ಗದಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ನಾಡಿನ ಬಗ್ಗೆ ಪುರಾವೆಗಳು ದೊರೆಯುತ್ತವೆ. ನೃಪತುಂಗ ಅರಸನ ಆಸ್ಥಾನ ಕವಿಯಾದ ಶ್ರೀವಿಜಯ ರಚಿಸಿದನೆಂದು ತಿಳಿದು ಬರುವ ಕವಿರಾಜಮಾರ್ಗದಲ್ಲಿ ಬರುವ 'ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್' ಸಾಲನ್ನು ಗಮನಿಸಿದರೆ ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ಕನ್ನಡ ಪ್ರದೇಶವಿತ್ತು ಎನ್ನುವುದು ಖಚಿತವಾಗುತ್ತದೆ. ಈ ಮೇಲೆ ಸೂಚಿಸಿದ ಎರಡು ಗಡಿಗಳ ನಡುವೆ ಆಡುವ ಮಾತು ತಿರುಳ್ಗನ್ನಡ ಎಂದು ಹೇಳಿದ್ದಾರೆ. ಕವಿರಾಜಮಾರ್ಗಕಾರ ಶ್ರೀವಿಜಯ ಹೇಳುವ ಪ್ರಕಾರ ಕನ್ನಡ ಭಾಷೆ ಸಮೃದ್ಧವಾಗಿಯೇ ಬೆಳೆದಿತ್ತು ಮತ್ತು ತಾನು ಕವಿರಾಜಮಾರ್ಗ ರಚಿಸುವ ಹೊತ್ತಿಗೆ ಕನ್ನಡ ಬದಲಾಗಿಯೂ ಅಂದರೆ ಬೆಳವಣಿಗೆಯಾಗಿಯೂ ಇತ್ತು."[೮] ಏಕೆಂದರೆ ತನ್ನ ಹಿಂದಿನ ಕನ್ನಡವನ್ನು ಹಳಗನ್ನಡ ಎಂದು ಬಳಸಿರುವುದೇ ಇದನ್ನು ಖಚಿತಗೊಳಿಸುತ್ತದೆ.

ಕವಿರಾಜಮಾರ್ಗಕಾರನಾದ ಶ್ರೀವಿಜಯ ತನ್ನ ಕೃತಿಯಲ್ಲಿ ಬಳಸಿದ ಪದಗಳು ಕನ್ನಡದ್ದವೇ ಆಗಿವೆ. ಆಗಲೇ ಭಾಷೆ ಬಳಕೆ ಬಂದು ಅದನ್ನು ತನ್ನ ಕೃತಿಯಲ್ಲಿ ಪ್ರಯೋಗ ಮಾಡಿದ್ದಾನೆ. ಅದೇ ಭಾಷೆಯನ್ನು ಜನ ಸಮಾಜದಲ್ಲಿ ತಮಗೆ ಬೇಕಾದ ರೀತಿಯಲ್ಲಿ ಬಳಸಿ, ವ್ಯಾಪಾರ ವಹಿವಾಟು ನಡೆಸಿ, ಇಂದು ಹಸ್ತಪ್ರತಿಗಳಲ್ಲಿದ್ದ ತಾಳೆಗರಿ ಯಲ್ಲಿದ್ದ ಭಾಷೆಗಳನ್ನು ದೃಶ್ಯ ಮಾಧ್ಯಮವಾದ ಗಣಕ ಯಂತ್ರದಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಭಾಷೆಗೆ ಹಲವಾರು ತಂತ್ರಾಂಶಗಳನ್ನು ಕಂಡು ಹಿಡಿದು ಗಣಕದಲ್ಲಿ ಅಳವಡಿಸಿ ಅಭಿವೃದ್ಧಿ ಮಾಡುತ್ತಿದ್ದಾರೆ.

ಗಣಕ ಲೋಕ ಮಾನವನನ್ನು ಮಂದಗತಿಯಿಂದ ಚಾಣಾಕ್ಷತೆಯೆಡೆಗೆ ಸಾಗಿಸುವ ಒಂದು ಮಾಧ್ಯಮವಾಗಿದೆ. ಇದರಿಂದ ಮಾನವ ನಿಧಾನ ಗತಿಯಲ್ಲಿ ಸಾಗುತ್ತಿದ್ದ ಕೆಲಸಗಳನ್ನು ಅತಿ ಬೇಗ ಮಾಡಿ ಮುಗಿಸುವ ಹಂತಕ್ಕೆ ತಲುಪಿದ್ದಾನೆ.. ಈ ಒಂದು ಮುಖ್ಯವಾದ ಭಾಷೆ ಇಲ್ಲದೆ ಇದ್ದಿದ್ದರೆ ಊಹಿಸಲಾಗದ ಪ್ರಪಂಚವನ್ನು ಇಂದು ನಾವು ಕಾಣುತ್ತಿದ್ದೆವು. ಆದರೆ ಭಾಷೆಯ ಬೆಳಕು ಮಾನವನನ್ನು

ಅಂತಹ ಮಟ್ಟಕ್ಕೆ ಕರೆದೊಯ್ಯದೆ, ಬೆಳಕಿನೆಡೆಗೆ ಕರೆದುಕೊಂಡು ಈಗ ಯಂತ್ರ ಜಗತ್ತಿನಲ್ಲಿ ಬಿಟ್ಟಿದೆ. ಅದು ಭಾಷೆಯಿಂದ ಆಗಿರುವ ಕಾರ್ಯ. ಈ ಭಾಷೆಯನ್ನು ತನ್ನ ವೈಯಕ್ತಿಕ ವ್ಯವಹಾರಗಳಿಗೆ, ಪತ್ರ ವ್ಯವಹಾರ ಗಳಿಗೆ, ಭಾವನೆಗಳ ವ್ಯಕ್ತಪಡಿಸುವಿಕೆಗೆ, ಸಮಾಜದ ಒಳಿತು ಕಾರ್ಯಗಳಿಗೆ ಬಳಸಿಕೊಳ್ಳುತ್ತಿರುವುದು ಸಂತೋಷಕರವಾದ ವಿಷಯ. ಒಂದು ದೇಶದಿಂದ ಮತ್ತೊಂದು ದೇಶದ ಜೊತೆ ವ್ಯಾಪಾರ ವಹಿವಾಟು ನಡೆಸಲು ಈ ಭಾಷಾ ಮಾಧ್ಯಮವೇ ಸಹಾಯ ಮಾಡುತ್ತಿದೆ. ಗಣಕ ಯಂತ್ರದಲ್ಲಿ, ಅಂತರ್ಜಾಲದಲ್ಲಿ ಈ ಭಾಷೆಯನ್ನು ಅನುಷ್ಠಾನ ಮಾಡಿರುವುದರಿಂದ ವಿದೇಶೀಯರಿಗೂ ಕನ್ನಡದ ಪರಿಚಯ ಆಗುತ್ತದೆ.

ಕನ್ನಡ ಭಾಷೆ ಪ್ರಾರಂಭದಲ್ಲಿ ಹಲವಾರು ಘಟ್ಟಗಳಲ್ಲಿ ಹರಿದು ಬಂದಿದೆ. ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಮತ್ತು ಹೊಸಗನ್ನಡ ಈ ರೀತಿಯಾಗಿ ನಾಲ್ಕು ಘಟ್ಟಗಳನ್ನು ಕಾಣುತ್ತೇವೆ. ಈ ವಿಷಯದಲ್ಲಿ ಬಿ.ಎಲ್. ರೈಸ್, ಕಿಟ್ಟೆಲ್, ಬಿ.ಎಂ.ಶ್ರೀ. ಟಿ.ಎಸ್. ವೆಂಕಣಯ್ಯ, ನರಸಿಂಹಾಚಾರ್ಯರರ ನಡುವೆ ಒಮ್ಮತವಿಲ್ಲ. ಒಬ್ಬೊಬ್ಬರು ಬೇರೆ ಬೇರೆ ಕಾಲಘಟ್ಟಗಳನ್ನು ತಿಳಿಸುತ್ತಾರೆ. ವಿಭಿನ್ನವಾದ ಅಭಿ ಪ್ರಾಯಗಳನ್ನು ಇವರು ನೀಡುತ್ತಾರೆ.

ಕನ್ನಡ ಭಾಷೆ ಕೇವಲ ಕರ್ನಾಟಕ ರಾಜ್ಯದ ಜನತೆಗೆ ಮಾತ್ರ ಸೀಮಿತವಾಗಿಲ್ಲ. ಅದು ದೇಶ ವ್ಯಾಪಿ ಇರುವ ಕನ್ನಡಿಗರಿಗೆ ಅಭಿಮಾನದ ಭಾಷೆಯಾಗಿದೆ. ಮಾತೃ ಭಾಷಿಕರೆಲ್ಲರ ಭಾಷೆಯು ಇದಾಗಿ ರುವುದಿಲ್ಲ. ಇದು ಬೇರೆ ಬೇರೆ ಭಾಷೆ ಮಾತೃ ಭಾಷೆಯಾಗಿದ್ದು, ಕನ್ನಡವನ್ನು ಮಾತನಾಡುವ ಜನರನ್ನು ದೇಶದೆಲ್ಲೆಡೆ ನಾವು ತಿಳಿಯಬಹುದು. ಏಕೆಂದರೆ ಇಂದು ಕಂಪ್ಯೂಟರ್ ಯುಗ. ಮಾತೃ ಭಾಷೆ ಆಂಗ್ಲ ವಾಗಿದ್ದು, ಅಂತರ್ಜಾಲದಲ್ಲಿ ಕನ್ನಡ ಭಾಷೆಯ ಬಗ್ಗೆ ಒಳ್ಳೆಯ ಅನಿಸಿಕೆ ಅಭಿಪ್ರಾಯಗಳನ್ನು ಕಳುಹಿಸುವ ಎಷ್ಟೋ ಮಂದಿ ಆಂಗ್ಲರನ್ನು ನಾವು ನೋಡಬಹುದು. ಇಂದು ಅಂತರ್ಜಾಲದಲ್ಲಿ ಈ ಕನ್ನಡ ಭಾಷೆ ಯನ್ನು ಅನುಷ್ಠಾನಗೊಳಿಸುವ ಉತ್ತಮ ಕಾರ್ಯವನ್ನು ಸಂಶೋಧನ ವರ್ಗ ಮಾಡಿದೆ. ಕನ್ನಡ ಭಾಷೆ ಯನ್ನು ವ್ಯವಹಾರಿಕವಾಗಿ ಬಳಸುತ್ತಾರೆ. ಇನ್ನು ಕೆಲವರು ಕನ್ನಡ ಕಲಿಯಲೇ ಬೇಕು ಎಂಬ ಅಭಿಮಾನ ದಿಂದ ಈ ಭಾಷೆಯನ್ನು ಕಲಿಯುತ್ತಾರೆ. ಇಂದು ಸಮಾಜದಲ್ಲಿ ಕನ್ನಡ ಬಾರದೆ ಇರುವ ವ್ಯಕ್ತಿಗಳು ಅಪರೂಪ. ಬೇರೆ ರಾಜ್ಯಗಳಿಂದ ಬಂದವರು ಸಹ ನೆರೆಹೊರೆಗಳಿಂದ ಕನ್ನಡವನ್ನು ಕಲಿತಿರುವ ನಿದ ರ್ಶನಗಳಿವೆ. ನೆರೆ ರಾಜ್ಯಗಳಲ್ಲಿಯೂ ಸಹ ಕನ್ನಡ ಭಾಷೆ ಬಳಸಲಾಗುತ್ತಿದ್ದು, ಅಂತರ್ಜಾಲದಲ್ಲಿ ಕನ್ನಡ ಪ್ರಿಯರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕೆ ಪ್ರಮುಖ ಕಾರಣ ಕನ್ನಡ ಭಾಷೆ ಅಂತರ್ಜಾಲದಲ್ಲಿ ಬಳಕೆಗೆ ಬಂದಿರುವುದಾಗಿದೆ.

ಸುಮಾರು ಎರಡು ದಶಕಗಳಿಂದಲೂ ಭಾರತದಲ್ಲಿ ಕಂಪ್ಯೂಟರ್ ಬಳಕೆ ವ್ಯಾಪಕವಾಗಿ ಆಗು ತ್ತಿದೆ. ಹಳ್ಳಿಗಾಡಿನ ಭಾಗಗಳಲ್ಲಿ, ವಿರಳ ನಗರದಲ್ಲಂತೂ ಮನೆ ಮನೆಗೂ ಈ ಗಣಕ ಯಂತ್ರವನ್ನು

ಕಾಣುತ್ತೇವೆ. ಗಣಕ ಯಂತ್ರದಿಂದ ಆಗುವ ಉಪಯೋಗಗಳು ದಿನೇ ದಿನೇ ಹೆಚ್ಚುತ್ತಿದೆ. ಕನ್ನಡ ಭಾಷೆ ಅಳವಡಿಸುವ ಮೊದಲು ಕಂಪ್ಯೂಟರ್ ಬಳಕೆ ಅಷ್ಟೇನು ಪ್ರಯೋಜನವಾಗುತ್ತಿರಲಿಲ್ಲ. ಆಂಗ್ಲ ಭಾಷೆ ಬಲ್ಲ ವರು ಅದನ್ನು ಹೆಚ್ಚಿನ ರೀತಿಯಲ್ಲಿ ಬಳಸುತ್ತಿದ್ದರು. ಆದರೆ ಕನ್ನಡ ಭಾಷೆ ಅಂತರ್ಜಾಲದಲ್ಲಿ ಕಾಣಿಸಿ ಕೊಂಡಾಗಿನಿಂದ ಕನ್ನಡ ಭಾಷೆ ಬಲ್ಲವರು ಸಹ ಗಣಕ ಯಂತ್ರವನ್ನು ಬಳಸುತ್ತಿದ್ದಾರೆ.

ಹಿಂದೆ ಭಾರತದಲ್ಲಿ ಬಹು ಭಾಷಾ ಪ್ರಿಯರಿದ್ದರು. ಈಗಲೂ ಇದ್ದಾರೆ. ಭಾರತ ವಿಶಾಲ ದೇಶ ಯಾರನ್ನು ಮಲತಾಯಿ ಧೋರಣೆಯಿಂದ ಕಾಣುವುದಿಲ್ಲ. ಆಂಗ್ಲ ಭಾಷೆ ಬಲ್ಲವರು ಸರಳವಾಗಿ ಗಣಕ ಯಂತ್ರ ಬಳಸುತ್ತಿದ್ದರು. ಹಲವಾರು ಭಾಷೆಗಳನ್ನು ಹೊಂದಿರುವ ಭಾರತದ ಪ್ರಜೆಗಳಿಗೆ ತಮ್ಮ ಭಾಷೆ ಯಲ್ಲಿ ಕಂಪ್ಯೂಟರ್ ಬಳಸಲು ಇರುವ ಪ್ರಮುಖ ಅಡ್ಡಿಯೆಂದರೆ ಪ್ರಾದೇಶಿಕ ಭಾಷೆಗಳು. ಉದಾ: ಕನ್ನಡ ಭಾಷೆ. ತಮ್ಮ ಪ್ರಾದೇಶಿಕ ಭಾಷೆಗಳಲ್ಲಿ ಸಾಫ್ಟ್‌ವೇರ್ ಲಭ್ಯವಿಲ್ಲ ಎಂಬ ಕೊರಗು ಅವರನ್ನು ಕಾಡುತ್ತಿತ್ತು. ಆದರೆ ಈಗ ಕನ್ನಡ ಭಾಷೆಗಳಲ್ಲೂ ಹಲವಾರು ತಂತ್ರಾಂಶಗಳು ಬೆಳಕಿಗೆ ಬಂದಿರು ವುದರಿಂದ ಕನ್ನಡಿಗರು ಇಂಗ್ಲೀಷ್ ಪ್ರಿಯರಿಗೆ ಸಮಾನವಾಗಿ ಗಣಕ ಲೋಕ ಪ್ರವೇಶಿಸುತ್ತಿರುವುದನ್ನು ಕಾಣುತ್ತೇವೆ. ಕನ್ನಡ ಭಾಷೆಯಲ್ಲಿ ಬರಹ ಮತ್ತು ನುಡಿ ಎನ್ನುವ ತಂತ್ರಾಂಶಗಳಿವೆ. ಇವುಗಳನ್ನು ಬಳಸಿಕೊಂಡು ಕನ್ನಡ ಭಾಷೆಯಲ್ಲಿ ಬೇಕಾದ ಮಾಹಿತಿಗಳನ್ನು ತೆಗೆದುಕೊಳ್ಳಬಹುದು. ಇಡೀ ಸಾರಸತ್ವ ಲೋಕವೇ ಇದರಲ್ಲಿ ಅಂದರೆ ಅಂತರ್ಜಾಲದಲ್ಲಿ ಅಡಗಿರುತ್ತದೆ. ಅದರಲ್ಲಿ ಬೇಕಾದ ಮಾಹಿತಿ ತೆರೆಯ ಮೇಲೆ ನಮೂದಿಸಿ, ನಮಗೆ ಬೇಕಾದ್ದನ್ನು ಪಡೆದುಕೊಳ್ಳಬಹುದು.

ಕನ್ನಡ ಭಾಷೆಯಲ್ಲದೆ ಈಗಾಗಲೇ ಲಿನೆಕ್ಸ್‌ನಲ್ಲಿ ಹಿಂದಿ, ಬಾಂಗ್ಲಾ, ತಮಿಳು, ಮರಾಠಿ ಭಾಷೆ ಗಳಲ್ಲಿ ತಂತ್ರಾಂಶ ರೂಪಿಸಲಾಗಿದೆ. ಲಿನೆಕ್ಸ್ ಆಧಾರಿತ ಮುಕ್ತ ತಂತ್ರಾಂಶದ ಅಡಿಯಲ್ಲಿ ಕನ್ನಡದಲ್ಲಿ ಲಿನೆಕ್ಸ್ ತಂತ್ರಾಂಶ ತಯಾರಿಸಲು ಬೇಕಾದ ಸಾಮಾಗ್ರಿಗಳನ್ನು ತಯಾರಿಸಲಾಗುತ್ತಿದೆ. ಕಾಲ ಕಾಲಕ್ಕೆ ಆಗುವ ಬದಲಾವಣೆಗಳನ್ನು ಪ್ರತಿ ಬದಲಾವಣೆ ಮಾಡಿ ಬಿಡುಗಡೆ ಮಾಡಲಾಗುತ್ತದೆ. ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಂಸ್ಥೆಗಳು ತಮ್ಮದೇ ಆದ ಆವೃತ್ತಿ ಹಂಚಿಕೆಗಳ ರೂಪದಲ್ಲಿ ಲಿನಕ್ಸ್ ತಂತ್ರಾಂಶವನ್ನು ಬಿಡುಗಡೆ ಮಾಡುತ್ತಿವೆ. ಅವುಗಳಲ್ಲಿ ಸುಸೇ ಲಿನಕ್ಸ್, ಮಾಂಡ್ರೇಕ್ ಲಿನಕ್ಸ್ ಮತ್ತು ರೆಡ್ ಹ್ಯಾಟ್ ಲಿನಕ್ಸ್ ಪ್ರಸಿದ್ಧವಾದ ತಂತ್ರಾಂಶಗಳಾಗಿವೆ.

ಜಗತ್ತಿನ ದೊಡ್ಡ ಕಂಪನಿಗಳಾದ ಮೊಟೊರೋಲ, ಸ್ಯಾಮ್‌ಸಂಗ್, ಎಲ್.ಜಿ. ಮುಂತಾದ ಕಂಪನಿಗಳು ಮತ್ತು ದೊಡ್ಡ ಕಂಪ್ಯೂಟರ್ ಸಾಫ್ಟ್‌ವೇರ್ ಕಂಪನಿಗಳಾದ ಐಬಿಎಂ, ಹ್ಯೂಲೆಟ್, ಪ್ಯಾಕರ್ಟ್, ಇನ್‌ಫೋಸಿಸ್, ವಿಪ್ರೋ ಕಂಪನಿಗಳು ಲಿನಕ್ಸ್ ಬಳಕೆ ಅಭಿವೃದ್ಧಿಯಲ್ಲಿ ತೊಡಗಿವೆ. ಕನ್ನಡಕ್ಕೆ ಸಂಬಂಧಿಸಿದಂತೆ ಲಿನಕ್ಸ್‌ನಲ್ಲಿ ಕನ್ನಡ ಕೀ ಬೋರ್ಡ್ ಅಳವಡಿಸಲಾಗಿದ್ದು, ಓಪನ್ ಆಫೀಸ್ ತಂತ್ರಾಂಶ

ದಲ್ಲಿ ಭಾಗಶಃ ಕನ್ನಡ ಲಿಪಿಯ ಬಳಕೆ ಮಾಡಲಾಗಿದೆ. ಇನ್ನು ಕೀ ಬೋರ್ಡ್ ವಿಚಾರವಾಗಿ ಅವಲೋಕಿಸಿದಾಗ ಲಭ್ಯವಿರುವ ಎಲ್ಲಾ ಕೀ ಬೋರ್ಡ್ ವಿನ್ಯಾಸಗಳನ್ನು ಬಳಕೆದಾರರ ಅನುಕೂಲಕ್ಕೆ ಆಯ್ಕೆ ಮಾಡುವ ಸ್ವಾತಂತ್ರವಿರುವಂತೆ ಅಭಿವೃದ್ಧಿಪಡಿಸಿದರೆ ಕೀ ಬೋರ್ಡ್‌ಗಳ ಗೊಂದಲಕ್ಕೆ ಪರಿಹಾರವಾಗುತ್ತದೆ. ಮುಂದಿನ ದಿನಗಳಲ್ಲಿ ಕೀ ಬೋರ್ಡ್ ಅವಶ್ಯಕತೆಯಿಲ್ಲದಂತೆ ಕಂಪ್ಯೂಟರ್‌ನಲ್ಲಿ ಲಿಪಿ ಮೂಡಿಸುವ ತಂತ್ರಜ್ಞಾನ ಬರಲಿದೆ. ಕೈ ಬರವಣಿಗೆಯನ್ನು ಗುರುತಿಸಿ, ಅದಕ್ಕೆ ತಕ್ಕಂತೆ ಅಕ್ಷರಗಳನ್ನು ಕಂಪ್ಯೂಟರ್ ಸ್ಕ್ರೀನ್‌ನಲ್ಲಿ ಮೂಡಿಸುವ, ಮುದ್ರಿಸುವ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಈಗಾಗಲೇ ಮರಾಠಿ, ಹಿಂದಿ, ಗುಜರಾತಿಗಳಲ್ಲಿ ಕೈ ಬರಹ ಗುರುತಿಸಿ ಲಿಪಿ ಮೂಡಿಸುವ, ಮುದ್ರಿಸುವ ತಂತ್ರಾಂಶ ಅಭಿವೃದ್ಧಿಪಡಿಸಿದ್ದು, ಆಸಕ್ತರಿಗೆ ತಂತ್ರಾಂಶ ಉಚಿತವಾಗಿ ಲಭ್ಯವಿದೆ. ಇನ್ನು ಕನ್ನಡ ಭಾಷೆಗೆ ಇಂತಹ ಒಂದು ದಿನ ಅತಿ ಶೀಘ್ರದಲ್ಲಿಯೆ ಬರುತ್ತದೆ. ಇದಕ್ಕೆ ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ.

ಕನ್ನಡ ಭಾಷೆಯನ್ನು ಗಣಕ ಯಂತ್ರದಲ್ಲಿ ಅಳವಡಿಸಿ ಬಳಸುತ್ತಿರುವುದು ಸಂತಸದ ವಿಷಯ. ಸಾಮಾನ್ಯ ಬಳಕೆಯ ಕ್ಷೇತ್ರಗಳಿಗೂ ಕಂಪ್ಯೂಟರ್ ಅಗತ್ಯವಿದ್ದು, ಅದರೊಂದಿಗೆ ಕನ್ನಡ ಭಾಷೆಯನ್ನು ಬಳಸುತ್ತಿದ್ದಾರೆ. ವೇಗವಾಗಿ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶಕ್ಕೆ ಮತ್ತಷ್ಟು ವೇಗವನ್ನು ತಂದು ಕೊಡುತ್ತಿರುವ ಈ ಸಾಧನ ಕುಟುಂಬದ ಅವಿಭಾಜ್ಯ ಅಂಗವಾಗಿದೆ. ಇಂದು ಇದರ ಪ್ರಭಾವ ಎಷ್ಟರ ಮಟ್ಟಿಗೆ ಮುಂದುವರೆದಿದೆ ಎಂಬುದಕ್ಕೆ ಉದಾ : ಮನೆ ಕಟ್ಟುವಾಗ ವಾಸ್ತು ಪ್ರಕಾರವಾಗಿ ಕಂಪ್ಯೂಟರ್‌ಗೆಂದೆ ಜಾಗವನ್ನು ಮೀಸಲಿಡುವ ಎಷ್ಟೋ ಮಂದಿಯನ್ನು ಸಮಾಜದಲ್ಲಿ ಕಾಣುತ್ತೇವೆ. ಕಂಪ್ಯೂಟರ್ ಮತ್ತು ಅದರ ಬಗ್ಗೆ ತಿಳುವಳಿಕೆಯಿಂದ ಕ್ಷೇತ್ರವನ್ನು ಊಹಿಸಿಕೊಳ್ಳಲು ಸಾಧ್ಯವಾಗದಷ್ಟು ಅದು ಸರ್ವಾಂತರ್ಯಾಮಿಯಾಗಿದೆ. ಕನ್ನಡ ಭಾಷೆಯನ್ನು ಗಣಕಯಂತ್ರದಲ್ಲಿ ಉಪಯೋಗಿಸಿಕೊಂಡು ಸಾಮಾಜಿಕವಾಗಿ, ವ್ಯವಹಾರಿಕವಾಗಿ, ಆರ್ಥಿಕವಾಗಿ, ಅಭಿವೃದ್ಧಿ ಪಡುತ್ತಿರುವುದನ್ನು ನಾವು ಗಮನಿಸುತ್ತೇವೆ. ಕನ್ನಡ ಭಾಷೆ ಇಂದು ಪಡೆದಿರುವ ಪರಂಪರೆಯನ್ನು ಗಮನಿಸಿದರೆ ಅದರ ಮೌಲ್ಯ ಎಷ್ಟರ ಹಂತ ತಲುಪಿದೆ ಎಂಬುದನ್ನು ತಿಳಿಯುತ್ತೇವೆ. ಅಂತರ್ಜಾಲ ಕ್ಷೇತ್ರದಲ್ಲಿ ಈ ಭಾಷೆಯ ಪ್ರಭಾವ ಈಗ ವಿಶಾಲ ವ್ಯಾಪ್ತಿಯನ್ನು ಪಡೆಯುತ್ತಿದೆ. ಇಂದು ಸಾಮಾನ್ಯ ಕಛೇರಿಯಿಂದ ದೊಡ್ಡ ಸಂಸ್ಥೆಗಳವರೆಗೂ ಇದರ ಪ್ರಭಾವವನ್ನು ಕಾಣುತ್ತೇವೆ. ವ್ಯವಹಾರಿಕವಾಗಿ ಈ ಭಾಷೆಯನ್ನು ಬಳಸಿ, ಇಂದು ಸಮಾಜದಲ್ಲಿ ಜನ ಅಭಿವೃದ್ಧಿಯತ್ತ ಸಾಗುತ್ತಿರುವುದನ್ನು ತಿಳಿಯಬಹುದು. ಹಲವು ತಂತ್ರಾಂಶಗಳ ಬಳಕೆಯಿಂದ ಕನ್ನಡ ಭಾಷೆ ಇಂದು ಅಂತರ್ಜಾಲ ಕ್ಷೇತ್ರದಲ್ಲಿ ಪ್ರಾಮುಖ್ಯತೆ ಪಡೆದಿದೆ. ಇದಕ್ಕಾಗಿ ವಿವಿಧ ಜಾಲತಾಣಗಳು ತೆರೆದುಕೊಂಡಿವೆ. ಇವುಗಳಿಂದ ಕನ್ನಡಾಭಿಮಾನಿಗಳು ಬೇಕಾದ ಮಾಹಿತಿ ಪಡೆದುಕೊಂಡು ಆಧುನಿಕತೆಗೆ ಕಾಲಿಡುತ್ತಿದ್ದಾರೆ. ಇದನ್ನು ಬಳಸುತ್ತಿರುವ ಪ್ರಿಯರು ಸಹ ಹೆಚ್ಚುತ್ತಿದ್ದಾರೆ.

ಕನ್ನಡ ಭಾಷೆ ಅಳವಡಿಸಿದ್ದೆ ಸಾಕು ಅದರಲ್ಲಿ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಇದರ ಸದು ಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಮಕ್ಕಳಿಗೆ ಬೇಕಾದ ಕನ್ನಡ ಭಾಷೆಯ ಸಾಹಿತ್ಯ ದೊರೆಯುತ್ತದೆ. ವೃದ್ಧರಿಗೆ ಬೇಕಾದ ಸಾಹಿತ್ಯವೂ ದೊರೆಯುತ್ತದೆ. ಇನ್ನು ತರುಣರು ಅವರಿಗೆ ಬೇಕಾದ ಕವನಗಳ ಉಪ ಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಭಾಷೆಯು ಇದಕ್ಕೆ ಏಕೈಕ ಮಾಧ್ಯಮವಾಗಿ ಕೈ ಜೋಡಿಸುತ್ತಿದೆ. ಭಾಷೆ ವಿಕಸನದ ಸಾಧನ. ಪ್ರಪಂಚಕ್ಕೆ ಬೆಳಕು. ಇದರಿಂದಲೆ ಮಾನವ ಇಲ್ಲಿಯವರೆಗೂ ಬೆಳೆದು ಬಂದಿ ದ್ದಾನೆ ಎಂಬುದನ್ನು ನಂಬುತ್ತೇವೆ.

ಒಟ್ಟಾರೆ ಗಣಕ ಯಂತ್ರದಲ್ಲಿ ಕನ್ನಡ ಭಾಷೆಯಿಂದ ಇಂದು ಸಮಾಜದಲ್ಲಿನ ಜನ ಗಣಕ ಯಂತ್ರವನ್ನು ಸರಾಗವಾಗಿ ಉಪಯೋಗಿಸುವಂತೆ ಆಗಿದೆ. ಇದರಲ್ಲಿ ಬೇಕಾದ್ದನ್ನು ಪಡೆದು ಮತ್ತಷ್ಟನ್ನು ಪಡೆಯುವ ಹಂಬಲವುಳ್ಳವರಾಗುತ್ತಿದ್ದಾರೆ. ಕನ್ನಡ ಭಾಷೆ ಎಲ್ಲಾ ಭಾಷೆಗಳಿಗಿಂತ ಉತ್ತಮ ಇತಿಹಾಸ ಹೊಂದಿರುವ ಭಾಷೆಯಾಗಿದೆ. ಅದು ಅಭಿವೃದ್ಧಿ ಹೊಂದಿ ಮತ್ತಷ್ಟು ಉನ್ನತ ಶಿಖರಕ್ಕೇರುವ ಕಾರ್ಯ ಕನ್ನಡಿಗರಿಂದಲೇ ಆಗಬೇಕು. ಗಣಕ ಯಂತ್ರದಲ್ಲಿ ಬಳಕೆಯಾಗಿರುವ ಭಾಷೆಯನ್ನು ಸದುಪಯೋಗ ಪಡಿಸಿಕೊಂಡು ಮತ್ತಷ್ಟು ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಬೆಂಬಲ ಅವಶ್ಯಕವಾಗಿದೆ.

ಕನ್ನಡ ಭಾಷೆಯನ್ನು ಸಂವಹನಕ್ಕಾಗಿ ಬಳಸಲಾಗುತ್ತಿತ್ತು. ಆದರೆ ಈಗ ಕಂಪ್ಯೂಟರ್ ಬಳಕೆಯಲ್ಲಿ ತಂದಿರುವುದು ಮತ್ತಷ್ಟು ಸಾಧಿತ ಕಾರ್ಯವಾಗಿದೆ. ಮನುಷ್ಯನ ಮಾಧ್ಯಮ ಭಾಷೆ. ನಾವು ಜೀವಿಸುವ ಪ್ರತಿಬಿಂಬವು ಭಾಷೆಯಾಗಿದೆ. ಆದ್ದರಿಂದಾಗಿ ಅದು ವಿಶಾಲವಾದದ್ದು ಮತ್ತು ಬಹಳ ಸಂಕೀರ್ಣ ವಾದದ್ದು ಆಗಿದೆ. ಆ ಜನರು ತಮ್ಮ ಸಾಮಾನ್ಯ ತಿಳುವಳಿಕೆ ಮತ್ತು ಬುದ್ದಿವಂತಿಕೆಯಿಂದ ನಿಜ ಜೀವನ ದಲ್ಲಿ ಭಾಷೆಯನ್ನು ಸಮರ್ಥವಾಗಿ ಬಳಸುತ್ತಾರೆ. ಕಂಪ್ಯೂಟರುಗಳಿಗೆ ಸಾಮಾನ್ಯ ತಿಳುವಳಿಕೆ ಹೇರಳ ವಾಗಿದೆ. ಕಂಪ್ಯೂಟರ್‌ಗಳನ್ನು ಬುದ್ದಿಶಾಲಿಯಾಗಿ ಮಾಡುವ ಪ್ರಯತ್ನಗಳು ಮನುಷ್ಯನ ಬುದ್ದಿವಂತಿಕೆಯ ಮಟ್ಟಕ್ಕೆ ಅದನ್ನು ಕರೆದೊಯುವಲ್ಲಿ ಇನ್ನೂ ಪ್ರಯತ್ನಗಳಾಗುತ್ತಿವೆ. ಒಬ್ಬ ವ್ಯಕ್ತಿಯು ಸಹಜ ಜ್ಞಾನವನ್ನು ಆಧರಿಸಿದ ಅಥವಾ ಸೀಮಿತ ಅಧ್ಯಯನಗಳನ್ನು ಆಧರಿಸಿ ನಡೆದ ಭಾಷೆಯನ್ನು ಕುರಿತ ತಾಂತ್ರಿಕ ಅಧ್ಯಯನಗಳು ಅಸಂಪೂರ್ಣವು ಅಪರಿಪಕ್ವವೂ ಆಗಿರುವ ಸಾಧ್ಯತೆಗಳುಂಟು.

ಕನ್ನಡ ಭಾಷೆ ಕೇವಲ ಮಾನವನ ಸಂವಹನಕ್ಕಾಗಿ ಅಲ್ಲದೆ ಕಂಪ್ಯೂಟರ್‌ನಲ್ಲಿ ಬಳಕೆಯಾಗಿ ಜನರಿಗೆ ಅನುಕೂಲವಾಗುತ್ತಿದೆ. ಭಾಷೆ ಒಂದು ಕಡೆ ನಿಲ್ಲದೆ ನಿರಂತರ ಚಲನೆ ಮತ್ತು ಬೆಳವಣಿಗೆಯನ್ನು ಹೊಂದುತ್ತಿರುತ್ತದೆ. ಕಂಪ್ಯೂಟರ್‌ನಲ್ಲಿ ಕನ್ನಡ ಭಾಷೆಯನ್ನು ಸೇರಿಸುವ ಕಾರ್ಯದಲ್ಲಿ ಹಲವಾರು ಸಂಶೋಧಕರು ಅದರ ಸಾಧಕ ಬಾಧಕಗಳನ್ನೆ ಆಧಾರವಾಗಿಟ್ಟು ಸಂಶೋಧನೆ ನಡೆಸಿದ್ದಾರೆ.

ಆಧುನಿಕ ಸಂದರ್ಭದಲ್ಲಿ ಭಾಷೆ ಮತ್ತು ತಂತ್ರಜ್ಞಾನಗಳ ಸಂಬಂಧದ ಹಿಂದೆ ಎಂದೂ ಕಾಣದ ಪ್ರಗತಿ ಕಾಣುತ್ತಿದ್ದೇವೆ. ಯಾವುದೇ ಕೆಲಸ ಕಾರ್ಯಗಳು ಎರಡು ದಶಕಗಳ ಹಿಂದೆ ನಿಧಾನಗತಿಯಲ್ಲಿ ಸಾಗುತ್ತಿದ್ದವು. ಆದರೆ ಈಗ ಮಾನವ ತನ್ನ ಅನುಕೂಲಗಳಿಗೆ ಏನನ್ನು ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಂಡು ಸರಳ, ಸುಂದರ ಜೀವನ ನಡೆಸಲು ಮುಂದಾಗುತ್ತಿದ್ದಾನೆ. ಭಾಷೆ ಗಣಕ ಯಂತ್ರದಲ್ಲಿ ಅಳವಡಿಸಿದ ಕಾರ್ಯ ಯಶಸ್ವಿಯಾಗಿದೆ. ಇದರಿಂದ ಜನ ಕನ್ನಡ ಭಾಷೆಯನ್ನು ಕಂಪ್ಯೂಟರ್‌ನಲ್ಲಿ ಬಳಸುತ್ತಿದ್ದಾರೆ. ಬರೀ ಬರವಣಿಗೆ ಸಾಧ್ಯವಾಗಿದ್ದ ಆ ಕಾಲಕ್ಕಿಂತ ಈ ಕಾಲವು ವಿಭಿನ್ನವಾಗಿದೆ. ತಾಳೆ ಎಲೆಗಳ ಮೇಲೆ ಬರೆಯತೊಡಗಿದಾಗ ಬರೆಯುವ ಉಪಕರಣ, ಬರೆದ ಮೇಲೆ ಅಕ್ಷರಗಳು ಮೂಡಿ ಬರಲು ಅಗತ್ಯವಾದ ಮಸಿ ಮತ್ತು ಬರೆಯಬೇಕಾದ ತಾಳೆ ಎಲೆಗಳನ್ನು ಸರಿಯಾಗಿ ಸಂಸ್ಕರಿಸಿ, ಸಿದ್ಧಪಡಿಸಿದ ಕೃತಿಗಳನ್ನು ಬಹುಕಾಲ ಹಾಳಾಗದಂತೆ ಕಾಯ್ದಿರಿಸುವ ಉಪಾಯಗಳು ಇವೆಲ್ಲವೂ ಹೊಸ ತಂತ್ರಜ್ಞಾನವನ್ನು ಬಯಸುತ್ತಿದ್ದವು. ಅದರ ಫಲವಾಗಿ ನಾವಿಂದು ಗಣಕ ಯಂತ್ರ ಮತ್ತು ಅದರೊಂದಿಗೆ ಬೇಕಾದ ಭಾಷೆಗಳನ್ನು ಕಂಡುಕೊಂಡಿದ್ದೇವೆ. ಕಡತಗಳ ಆಗಮನದ ಅನಂತರ ಕಾಗದದ ಬಳಕೆ ಬರಹ ದ ತಾಂತ್ರಿಕತೆಯಲ್ಲಿ ಅದೆಷ್ಟು ಬದಲಾವಣೆಯನ್ನು ತಂದವು. ೧೯ನೇ ಶತಮಾನದ ಆದಿಯಲ್ಲಿ ಕನ್ನಡಕ್ಕೆ ಪರಿಚಿತವಾದ ಮುದ್ರಣ ಯಂತ್ರ ಮತ್ತೊಂದು ತಾಂತ್ರಿಕ ನೆಲೆಯ ಜಿಗಿತಕ್ಕೆ ಸಾಕ್ಷಿಯಾಯಿತು. ಕರ್ನಾಟಕ ಏಕೀಕರಣದ ವೇಳೆಗೆ ಮುದ್ರಣದ ಅನಂತರ ಬಂದ ಕಲ್ಲಚ್ಚಿನ ಬಳಕೆ ಮತ್ತು ಕನ್ನಡ ಬರವಣಿಗೆ ಸೇರಿ ಕೊಂಡು ಹೊಸ ಆವಿಷ್ಕಾರವಾಯಿತು. ಕಳೆದ ಐವತ್ತು ವರ್ಷಗಳಲ್ಲಿ ಈ ಮೊದಲಿನ ಎಲ್ಲಾ ಆವಿಷ್ಕಾರ ಗಳಿಗಿಂತಲೂ ಗುಣಾತ್ಮಕವಾಗಿ ಬೇರೆಯೇ ಆದ ತಾಂತ್ರಿಕತೆ ಜಗತ್ತಿನ ಹಲವು ಭಾಷೆಗಳನ್ನು ಪ್ರಭಾವಿಸಿ ದಂತೆ ಕನ್ನಡವನ್ನು ಪ್ರಭಾವಿಸಿತ್ತು. ಬರಹದ ದಾಖಲೆಗಳನ್ನು ರೂಪಿಸುವಲ್ಲಿ ತಂತ್ರಜ್ಞಾನವು ನೆರವಿಗೆ ಬಂದ ಮುಂದಿನ ಹಂತವೆಂದರೆ ವಿದ್ಯುನ್ಮಾನ ಬೆರಳಚ್ಚು ಯಂತ್ರಗಳ ಆವಿಷ್ಕಾರ. ಇದು ತಾಂತ್ರಿಕವಾಗಿ ಬೆರಳಚ್ಚು ಯಂತ್ರಗಳ ಮೂಲ ಮಾದರಿಯ ಅನುಕರಣೆ ಆಗಿದೆ.

ಪ್ರಸ್ತುತದಲ್ಲಿ ಗಣಕ ಯಂತ್ರದ ಪ್ರಭಾವ ಹೆಚ್ಚುತ್ತಿದೆ. ಇದರ ಪರಿಣಾಮ ಗ್ರಾಮೀಣ ಪ್ರದೇಶ ಗಳಲ್ಲೂ ಇದರ ಪರಿಚಯ ಅಗಾಧವಾಗಿ ಬೆಳೆಯುತ್ತಿದೆ. ಗ್ರಾಮೀಣದವರಿಗೆ ಕೇವಲ ಆಂಗ್ಲ ಭಾಷೆಯಲ್ಲಿ ಇದ್ದಿದ್ದರೆ ಬಹಳ ಕಷ್ಟವಾಗುತ್ತಿತ್ತು. ಆದರೆ ಕನ್ನಡ ಭಾಷೆಯನ್ನು ಅದರಲ್ಲಿ ಅಳವಡಿಸಲಾಗಿದೆ. ಇದರಿಂದ ಗ್ರಾಮೀಣದವರು ಸಹ ಇದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಬೆರಳಚ್ಚು ಸಿದ್ದಗೊಂಡು ಜನರ ಬಳಕೆಗೆ ಲಭಿಸಿದ್ದು, ೧೯೮೫ರ ನಂತರವೇ.

ಆಧುನಿಕ ಯುಗದಲ್ಲಿ ಗಣಕ ಯಂತ್ರ ಮಾನವ ಮಿತ್ರನೆಂಬ ಖ್ಯಾತಿ ಪಡೆದಿದೆ. ಇದರ ಕಾರ್ಯ ಬಹು ಆಯ್ಕೆಯದ್ದಾಗಿರುತ್ತದೆ. ಏನೆಲ್ಲಾ ಕಾರ್ಯಗಳನ್ನು ಬೇಕಾದರೂ ಸಹ ಮಾಡಿಕೊಳ್ಳುವಂತಹ

ಸಾಮರ್ಥ್ಯ ಗಣಕ ಯಂತ್ರ ಹೊಂದಿದೆ. ಗಣಕ ಯಂತ್ರ ಒಂದೇ ಏನನ್ನು ಮಾಡುವುದಿಲ್ಲ. ಅದನ್ನು ಮಾಡಿಸುವುದು ಮಾನವನು. ಅದು ಅತಿ ವೇಗದಲ್ಲಿ ಕಾರ್ಯ ಮಾಡಬಲ್ಲದು. ಏಕಾಂಗಿಯಾಗಿ ಏನು ಮಾಡದು. ಅದರಲ್ಲಿ ಯಾವ ಭಾಷೆಯನ್ನು ಬೇಕಾದರೂ ಅಳವಡಿಸಿಕೊಂಡು ಬಳಸಬಹುದು. ಕನ್ನಡ ವನ್ನು ಕಂಪ್ಯೂಟರಿಗೆ ಅಳವಡಿಸಿರುವುದರಿಂದ ಕಂಪ್ಯೂಟರ್ ಕಲಿಯಬೇಕೆನ್ನುವವರಿಗೆ ಕ ಮತ್ತು ಬ ಬರಹಗಳು, ಕಲಿತ ಹಾಗೂ ನುಡಿ ಸಾಫ್ಟ್‌ವೇರ್‌ಗಳು ತುಂಬ ಅನುಕೂಲತೆಯನ್ನು ತೆರೆದಿಟ್ಟಿವೆ. "ಕನ್ನಡ ದ ಖ್ಯಾತ ಬರಹಗಾರರಾದ ಶ್ರೀ ಅನಕೃ ನೆನಪಿನಲ್ಲಿ ಕ ಬರಹವನ್ನು ಕೆ.ಪಿ. ರಾವ್ ಅವರು ಅಭಿವೃದ್ಧಿ ಪಡಿಸಿದ್ದಾರೆ. ಅಂತರ್ ರಾಷ್ಟ್ರೀಯ ಗಣಕ ಜಾಲದಲ್ಲಿ ಹರಿಬಿಡಲಾಗಿರುವ ಈ ಎರಡು ಸಾಫ್ಟ್‌ವೇರ್ ಗಳು ಕನ್ನಡದಲ್ಲಿ ಬಹುಮುಖಿಯಾದ ತಾಂತ್ರಿಕ ಸಾಧ್ಯತೆಗಳನ್ನು ಹುಟ್ಟುಹಾಕಿವೆ. ಕ ಬರಹದ ಪರಿಷ್ಕೃತ ಆವೃತ್ತಿ ಬ ಬರಹವಾಗಿದೆ."[6]

ಗಣಕ ಯಂತ್ರದಲ್ಲಿ ಭಾಷೆ ಬಳಕೆಗೆ ಬಂದಾಗಿನಿಂದ ಪ್ರತಿಯೊಬ್ಬರು ಅಂದರೆ ಸಮಾಜದಲ್ಲಿ ಓದುಗರು ಆ ಪುಸ್ತಕ ನನಗೆ ದೊರೆತಿಲ್ಲ ಅನ್ನುವುದು ಕಡಿಮೆಯಾಗಿದೆ. ಯಾಕೆಂದರೆ ಪುಸ್ತಕದ ಅಂಗಡಿ ಯಲ್ಲಿ ಸಿಗದಿದ್ದ ಪುಸ್ತಕದ ಪುಟಗಳನ್ನು ಮತ್ತು ಲೇಖನಗಳನ್ನು ಗಣಕ ಯಂತ್ರದಲ್ಲಿ ಅದರಲ್ಲೂ ಕನ್ನಡ ಭಾಷೆಯಲ್ಲಿ ಕಾಣುತ್ತಿದ್ದಾರೆ. ಹಿಂದಿನಂತೆ ಬೇರೊಬ್ಬರ ಬರವಣಿಗೆ ಓದಲು ಕಷ್ಟ. ಓದಿದರು ಅರ್ಥವಾ ಗುವುದಿಲ್ಲ ಎನ್ನುವ ಮಾತು ದೂರವಾಗಿ, ನೇರ ಪರದೆಯ ಮೇಲೆ ಲೇಖನವನ್ನು ಓದುವ, ಬರೆಯುವ, ಅವಕಾಶಗಳು ಸಾಕಷ್ಟಿವೆ. ಇದು ಕನ್ನಡದ ತಂತ್ರಾಂಶಗಳಿಂದ ಸಾಧ್ಯವಾಗಿದೆ. ತಂತ್ರಜ್ಞಾನ ಎಂದು ಬರೆಯುವಲ್ಲಿ 'ಜ್ಞ' ಬರೆಯುವಾಗ 'ಜಾ' ಬರೆದು 'ಞ' ದ ಒತ್ತನ್ನು ಕೊಡುವುದು ವಾಡಿಕೆಯಾಗಿದೆ. ಆದರೆ ಕಂಪ್ಯೂಟರ್ ಕೀ ಬೋರ್ಡ್‌ನಲ್ಲಿ 'ಜ' ಬರೆದು 'ಞ' ಒತ್ತು ನೀಡಿ ಆ ಮೇಲೆ ಆ ಸ್ವರ ಸೇರಿಸಿ, 'ಜಾ' ಮಾಡಿ 'ಜ್ಞಾ' ಅಕ್ಷರವನ್ನು ಸಿದ್ಧಪಡಿಸಿಕೊಳ್ಳುವ ಸೌಲಭ್ಯಗಳು ನಿಹಿತವಾಗಿವೆ. ವಿವಿಧ ಸಾಫ್ಟ್‌ವೇರ್ ಗಳು ವಿವಿಧ ರೀತಿಯ ಅಕ್ಷರ ಸಂಯೋಜನೆಯನ್ನು ಹೊಂದಿದ್ದು ಕಂಡುಬರುತ್ತದೆ. ನಾವು ಕನ್ನಡ ಪತ್ರವೊಂದನ್ನು ಟೈಪ್ ಮಾಡುತ್ತೇವೆಂದುಕೊಳ್ಳೋಣ ಆಗ 'ಎ' ಇರುವ ಗುಂಡಿಯನ್ನು ಒತ್ತಿದರೆ, 'ಅ' ಸ್ವರ ತೆರೆಯ ಮೇಲೆ ಬರುತ್ತದೆ. ಅದೇ ಸಮಯಕ್ಕೆ ಇಂಗ್ಲಿಷ್‌ನ ಬಳಕೆ ಬೇಕೆಂದಾಗ ಎಫ್ ೧೦ ಒತ್ತಿದರೆ ಅದು ಇಂಗ್ಲೀಷ್‌ಗೆ ಪರಿವರ್ತನೆ ಹೊಂದುತ್ತದೆ. ಕೆಲವೊಂದು ಕಂಪ್ಯೂಟರಿನಲ್ಲಿ ಇದು **esc** ಕೀಲಿಮಣೆ ಯಲ್ಲಿರುತ್ತದೆ. ಅಂದರೆ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳನ್ನು ಆನ್ ಮತ್ತು ಆಫ್ ಮಾಡುವ ಸ್ವಿಚ್‌ನಂತೆ ಕಾರ್ಯನಿರ್ವಹಿಸುತ್ತದೆ. ತಂತ್ರಾಂಶಗಳನ್ನು ನಿರ್ಮಿಸುವಲ್ಲಿ ಮುಖ್ಯ ಪಾತ್ರ ವಹಿಸಿದವರು ಕನ್ನಡಿಗರು. ಅದರಲ್ಲೂ ಬೆಂಗಳೂರಿನವರೇ ಅಧಿಕ ಪ್ರಮಾಣದಲ್ಲಿ ಕೆಲಸ ನಿರ್ವಹಿಸಿದ್ದಾರೆ. ಇಂಥ ಮಹತ್ಕಾರ್ಯಗಳನ್ನು ಬೆಂಬಲಿಸಿ, ಕರ್ನಾಟಕ ಸರ್ಕಾರದ ಭಾಷಾಭಿವೃದ್ಧಿ ಸಂಸ್ಥೆಗಳು ಕನ್ನಡವನ್ನೇ

ತಂತ್ರಜ್ಞಾನದಲ್ಲಿ ಉತ್ತಮ ಭಾಷೆಯನ್ನಾಗಿ ಸಶಕ್ತಗೊಳಿಸುತ್ತಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಇದರಿಂದ ಕನ್ನಡಕ್ಕೆ ಮತ್ತಷ್ಟು ಬೆಂಬಲ ಸಿಕ್ಕಿ ಅಭಿವೃದ್ಧಿಗೆ ಸಜ್ಜಾಗುತ್ತಿದೆ.

ಇಂದು ಮಾಹಿತಿ ವಿನಿಮಯ ಕೇಂದ್ರಗಳಲ್ಲಿ ಕಂಪ್ಯೂಟರ್ ತನ್ನ ವ್ಯಾಪ್ತಿಯನ್ನು ಬಹಳಷ್ಟು ವ್ಯಾಪಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ಹೆಚ್ಚು ಶ್ರಮವೂ ಇಲ್ಲದೆ ಕಡಿಮೆ ಖರ್ಚಿನಲ್ಲಿ ಅತ್ಯಧಿಕ ಮಾಹಿತಿಯನ್ನು ಸಂಗ್ರಹಿಸುವ ಮತ್ತು ರವಾನಿಸುವ ಅನುಕೂಲಗಳನ್ನು ಜನತೆಗೆ ಕಲ್ಪಿಸುತ್ತಿದೆ. ಹೋಂ ಪೇಜ್, ವೆಬ್‌ಪೇಜ್, ವೆಬ್‌ಸರ್ವರ್‌ಗಳ ಸಹಾಯದಿಂದ ದಾಖಲೆಗಳನ್ನು ಸಂಗ್ರಹಿಸಿ ಇಡಬಹುದಲ್ಲದೆ ಅದನ್ನು ಈ – ವಾಣಿಜ್ಯ ಸಂಪರ್ಕ ಸಾಧನಗಳ ಮೂಲಕ ಡಿಜಿಟಲ್ ರೂಪದಲ್ಲಿ ವಿನಿಮಯ ಮಾಡ ಬಹುದು. ಇದಕ್ಕೆ ಅನುಕೂಲವಾಗಿ ಕನ್ನಡ ಸಾಫ್ಟ್‌ವೇರ್ ಸಹಾಯ ಮಾಡುತ್ತದೆ. ಕನ್ನಡ ಸಾಫ್ಟ್‌ವೇರ್ ಗಳು ಕೇವಲ ಕನ್ನಡ ಫಾಂಟ್ಸ್ ವರ್ಡ್, ವರ್ಡ್ ಪ್ರೋಸೆಸಿಂಗ್ ಕಾರ್ಯಗಳಿಗೆ ಮಾತ್ರ ಸೀಮಿತವಾಗ ಬಾರದೆಂದು ಬರಹ ಸಾಫ್ಟ್‌ವೇರನ್ನು ಶ್ರೀ. ಶೇಷಾದ್ರಿ ವಾಸು ಅವರು ಅಭಿವೃದ್ಧಿ ಪಡಿಸಿದ್ದಾರೆ.

ಇವುಗಳಿಂದ ಕನ್ನಡದಲ್ಲಿಯೇ ಆಡಳಿತ ವ್ಯವಹಾರ ಬರವಣಿಗೆಯನ್ನು ನಿರ್ವಹಿಸುವ ಸಾಧ್ಯತೆ ಗಳನ್ನು ಕಾಣುತ್ತಿದ್ದೇವೆ. ಈ ಮೇಲ್ಕಂಡ ಸಾಫ್ಟ್‌ವೇರ್‌ಗಳ ಸಹಾಯದಿಂದ ಬೇಕಾದ ಬರವಣಿಗೆಯನ್ನು ದಾಖಲು ಮಾಡಿಕೊಂಡು ಯಾವಾಗ ಬೇಕಾದರೂ ಅದನ್ನು ಉಳಿಸಿಕೊಂಡು ಉಪಯೋಗಿ ಸುವ ಅವಕಾಶವು ಗಣಕಯಂತ್ರದಲ್ಲಿ ಕಾಣಬಹುದು. ಸರ್ಕಾರಿ ಕಛೇರಿಗಳಲ್ಲಿ ಇತ್ತೀಚೆಗೆ ಗಣಕ ಯಂತ್ರಗಳ ಸಹಾಯದಿಂದ ಕನ್ನಡ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ಕಛೇರಿ ಸುತ್ತೋಲೆಗಳನ್ನು, ವ್ಯವಹಾರ ಪತ್ರಗಳನ್ನು ಪ್ರಕಟಿಸಿ ಉಪಯೋಗಿಸುತ್ತಿದ್ದಾರೆ. ಅಲ್ಲದೆ ಇಂಟರ್‌ನೆಟ್, ಈ– ಮೇಲ್‌ಗಳಂತಹ ಸಂಪರ್ಕ ಜಾಲಗಳ ಮೂಲಕವೂ ಕಾಪಾಡಿಕೊಳ್ಳುವ ಸಾಧ್ಯತೆಗಳು ಗಣಕ ಯಂತ್ರದಲ್ಲಿವೆ.

ಕನ್ನಡ ಭಾಷೆ ಗಣಕ ಯಂತ್ರದಲ್ಲಿ ಕಂಡು ಹಿಡಿದಿರುವುದು ಕನ್ನಢಭಿಮಾನಿಗಳಿಗೆ ಸರಳವಾಗಿ ಕಾರ್ಯಗಳನ್ನು ಮಾಡಿಕೊಳ್ಳಲು ಅನುಕೂಲವಾಗಿದೆ. ಕನ್ನಡ ಭಾಷೆಯಂತೆ ಇನ್ನಿತರ ಭಾಷೆಗಳನ್ನು ಇಂದು ಗಣಕ ಯಂತ್ರದಲ್ಲಿ ಅಳವಡಿಸುತ್ತಿರುವುದನ್ನು ಗಮನಿಸುತ್ತೇವೆ. ಕನ್ನಡ ಭಾಷೆ ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಅದನ್ನು ಹಿಂದಿನ ಪೀಳಿಗೆಯಿಂದ ಮುಂಬರುವ ಪೀಳಿಗೆಗೆ ರವಾನಿಸುವ ಕಾರ್ಯ ನಮ್ಮದಾಗಬೇಕು. ಭಾಷೆ ಮಾನವನಿಗೆ ಉಸಿರಾಟವಿದ್ದಂತೆ. ಉಸಿರಾಟವು ಒಂದು ಕ್ಷಣ ನಿಂತರು ಅದು ಜೀವಕ್ಕೆ ಹಾನಿ ಉಂಟಾಗುವಂತೆ, ಭಾಷೆ ಮಾನವನಿಗೆ ಅಮೂಲ್ಯವಾದದ್ದು. ಅದರ ಬಳಸುವಿಕೆಯಿಂದ ಈತ ಏನೆಲ್ಲಾವನ್ನು ಸಾಧನೆ ಗೈಯಲು ಮುಂದಾಗಿದ್ದಾನೆ. ಇಂದು ಕನ್ನಡ ಭಾಷೆಯ ಬಳಕೆದಾರರು ಹೆಚ್ಚುತ್ತಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಅದು ಪ್ರಾಮುಖ್ಯತೆ ಪಡೆಯುತ್ತಿದೆ.

ಆಧುನಿಕ ಜಗತ್ತು ಬದಲಾವಣೆಯಾಗುತ್ತಿದೆ. ಅದರೊಂದಿಗೆ ಮಾನವ ಹೊಂದಿಕೊಳ್ಳುತ್ತಿದ್ದಾನೆ. ಕನ್ನಡ ಭಾಷೆ ಅವನಿಗೆ ಹೆಚ್ಚು ಉಪಯುಕ್ತತೆಯನ್ನು ಮಾಡುತ್ತಿದೆ. ಕನ್ನಡ ಭಾಷೆಗೆ ಸಾಫ್ಟ್‌ವೇರ್‌ಗಳು ಅಭಿವೃದ್ಧಿಯಾಗಿ ಈಗ ಭಾಷೆಗೆ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ. ಗಣಕ ಯಂತ್ರದಲ್ಲಿ ಕನ್ನಡ ಭಾಷಾ ತಂತ್ರಾಂಶಗಳಿಂದ ಕಡತಗಳನ್ನು ಉಳಿಸಿಕೊಂಡು ಕಛೇರಿಗಳ ಕಾರ್ಯಗಳನ್ನು ನಿರ್ವಹಿಸಬಹುದು.

ಕನ್ನಡ ಭಾಷೆಯ ಅಭಿವೃದ್ಧಿಯಿಂದ ಗಣಕ ಯಂತ್ರದಲ್ಲಿ ಅಂತರ್ಜಾಲದ ತಾಣಗಳು ಹುಟ್ಟಿಕೊಂಡಿವೆ. ಅವುಗಳ ಸಹಾಯದಿಂದ ಕನ್ನಡ ಸಾಹಿತ್ಯದ ಸಾರಸತ್ವ ಲೋಕವನ್ನು ಕಾಣಬಹುದು. ಲೇಖನಗಳು, ದಿನಪತ್ರಿಕೆ ಇನ್ನೂ ಮುಂತಾದ ಬರವಣಿಗೆಗಳನ್ನು ಕಾಣಬಹುದು. ಸರ್ಕಾರದ ಕಛೇರಿಗಳಲ್ಲಿ ಈ ಭಾಷೆಯ ಬಳಕೆಯಿಂದ ಗಣಕಯಂತ್ರದಲ್ಲಿ ಕಛೇರಿಗಳಿಗೆ ಬರುವ ಅರ್ಜಿಗಳಿಗೆ ಅಥವಾ ಇಲಾಖೆಗಳಿಂದ ಬರುವ ಪತ್ರಗಳು ಇತ್ಯಾದಿಗಳನ್ನು ಓದಿ ಅರ್ಥೈಸಿಕೊಂಡು ತಕ್ಷಣವೇ ಉತ್ತರ ರೂಪದಲ್ಲಿ ಪತ್ರಗಳನ್ನು ಕಛೇರಿಯಿಂದ ಗಣಕಯಂತ್ರದ ಸಹಾಯದಿಂದ ರವಾನೆ ಮಾಡುವ ಪ್ರಯೋಗ ಜರುಗುತ್ತಿದೆ. ಬಹುತೇಕ ಸರ್ಕಾರಿ ಕಾರ್ಯಗಳು ಗಣಕಯಂತ್ರದ ಸಹಾಯದಿಂದ ಕನ್ನಡ ಭಾಷೆಯಲ್ಲಿ ಸುಲಭವಾಗಿ ನಿರ್ವಹಿಸುವ ಆಧುನಿಕ ಮಾಹಿತಿ ತಂತ್ರಜ್ಞಾನದ ಜಗತ್ತಿನಲ್ಲಿ ನಾವಿಂದು ಸಾಗುತ್ತಿದ್ದೇವೆ.

ಅಡಿಟಿಪ್ಪಣಿಗಳು

೧. ಕಂಪ್ಯೂಟರ್ ಮತ್ತು ಕನ್ನಡಾಭಿವೃದ್ಧಿ – ಪ್ರೊ. ಎಂ.ಎ. ಲಕ್ಷ್ಮಿತಾತಾಚಾರ್, ಪುಟ ೦೧

೨. ಕನ್ನಡ ಭಾಷೆಯ ಕಂಪ್ಯೂಟರ್ ಸಂಸ್ಕರಣ – ಕೆ. ನಾರಾಯಣಮೂರ್ತಿ, ಅನು: ವಿ.ಬಿ ತಾರಕೇಶ್ವರ್, ೨೦೦೨, ಪುಟ ೦೯

೩. ಅದೇ; ಪುಟ ೧೨

೪. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್ – ಶ್ರೀಮತಿ ನೇಮಿಚಂದ್ರ, ಪ್ರಧಾನ ಸಂಪಾದಕರು – ಪ್ರೊ. ಎಲ್.ಎಸ್.ಶೇಷಗಿರಿರಾವ್, ಸಪ್ನ ಬುಕ್ ಹೌಸ್, ೨೦೦೩, ಪುಟ ೨೪೦

೫. ಆಡಳಿತ ಕನ್ನಡ, ಪ್ರಧಾನ ಸಂಪಾದಕರು: ಮುಖ್ಯಮಂತ್ರಿ ಚಂದ್ರು, ಡಾ. ಎ. ಮುರಿಗೆಪ್ಪ, ಕನ್ನಡ ಭಾಷೆಯ ಚರಿತ್ರೆ (ಲೇಖನ) – ಡಾ. ಅಶೋಕಕುಮಾರ ರಂಜೇರೆ, ೨೦೧೦, ಪುಟ ೧೧೮

೬. ಅದೇ; ಪುಟ ೧೧೯

೭. ಅದೇ; ಪುಟ ೧೨೧

೮. ಅದೇ; ಪುಟ ೧೨೩

೯. ಭಾಷಾ ತಂತ್ರಜ್ಞಾನ, ಸಂ: ಡಾ. ಸಾಂಬ ಮೂರ್ತಿ, ಕಂಪ್ಯೂಟರ್‌ನ ಆವಿಷ್ಕಾರ ಹಾಗು ಬೆಳವಣಿಗೆ (ಲೇಖನ) – ಡಾ. ವೀರೇಶ ಬಡಿಗೇರ, ೨೦೦೯

ಅಧ್ಯಾಯ – ೩
ಅಂತರ್ಜಾಲ ಮತ್ತು ಕನ್ನಡ ಭಾಷೆ

ಅಧ್ಯಾಯ – ೩
ಅಂತರ್ಜಾಲ ಮತ್ತು ಕನ್ನಡ ಭಾಷೆ

ಕುಮಾರವ್ಯಾಸನು ತನ್ನ 'ಕರ್ನಾಟ ಭಾರತ ಕಥಾಮಂಜರಿ'ಯಲ್ಲಿ ತನ್ನ ಬಗ್ಗೆ ಹೇಳಿಕೊಳ್ಳುವ ಮಾತನ್ನು ಗಮನಿಸೋಣ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ' ಎಂಬುದು ಅವನ ಮಾತು. ಇತ್ತೀಚೆಗೆ ಗಣಕಗಳು ಜನ ಜೀವನದಲ್ಲಿ ಹಾಸುಹೊಕ್ಕಾಗಿ ಅದನ್ನೇ ಸಾಧಿಸಿವೆ. ಮುಂದಿನ ತಲೆಮಾರಿನ ಜನ ಲೇಖನಿ, ಸೀಸದ ಕಟ್ಟಿ ಬಳಸದೆ, ಕೇವಲ ಗಣಕ ಯಂತ್ರ ಮತ್ತು ಕೀಲಿ ಮಣೆಯನ್ನು ಮಾತ್ರ ಬಳಸುತ್ತಾರೆ ಎಂದು ಭವಿಷ್ಯ ನುಡಿಯಬಹುದು. ಹಾಗಾದಾಗ ಅವರನ್ನು 'ಆಧುನಿಕ ಕುಮಾರವ್ಯಾಸರು' ಎಂದು ಕರೆಯಬಹುದು. ಏಕೆಂದರೆ ಯಾರು ಸಹ ಅಜ್ಜ ನೆಟ್ಟ ಆಲದ ಮರಕ್ಕೆ ಜೋತು ಬೀಳುವ ಪದ್ಧತಿಯನ್ನು ಇಷ್ಟ ಪಡುವುದಿಲ್ಲ. ಜೋತು ಬಿದ್ದರೂ ಅದರ ಶೈಲಿಯನ್ನಾದರೂ ಬದಲಾವಣೆ ಮಾಡುವ ಯೋಚನೆ ಮಾಡುತ್ತಾರೆ. ಅಂತಹ ಬದಲಾವಣೆ ಪ್ರಿಯರು ನಮ್ಮವರು. ಆದ್ದರಿಂದಲೇ ನಮ್ಮ ಭಾಷೆ ಹಿಂದೆಂದಿಗಿಂತಲೂ ಆಧುನಿಕವಾಗಿ ಕಂಪ್ಯೂಟರನ್ನು ಸಾಧನವಾಗಿ ಮಾಡಿಕೊಂಡಿದೆ.

ಗಣಕಗಳು ಜೀವನದಲ್ಲಿ ಹಾಸುಹೊಕ್ಕಾಗಿ ವ್ಯಾಪಿಸುತ್ತಿದ್ದಂತೆ ನಮ್ಮ ಕನ್ನಡ ಭಾಷೆಯನ್ನು ಅದರಲ್ಲಿ ಅಳವಡಿಸಲಾಗುತ್ತಿದೆ. ಇದರ ಜೊತೆ ಬೇಕಾದ ವಲಯಗಳಿಗೆ ಕನ್ನಡ ಭಾಷೆಯಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯನ್ನು ಮಾಡಲಾಗಿದೆ. ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನದ ಸಾಹಿತ್ಯವನ್ನು ಕಾಣುತ್ತಿದ್ದೇವೆ. ಅದನ್ನು ಮತ್ತಷ್ಟು ಬೆಳೆಸುವ ಬುನಾದಿಯನ್ನು ನಾವು ಹಾಕಿಕೊಳ್ಳಬೇಕು. ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಸಾಹಿತ್ಯ, ವಿಜ್ಞಾನ ಸಾಹಿತ್ಯಕ್ಕೆ ಬಹುಮಟ್ಟಿಗೆ ಸಾಮ್ಯವಿದೆ. "ಕನ್ನಡದ ವಿಜ್ಞಾನ ಸಾಹಿತ್ಯಕ್ಕೆ, ಸುಮಾರು ಒಂದೂವರೆ ದಶಕಗಳ ಇತಿಹಾಸವಿದೆ. ಕನ್ನಡ ಭಾಷೆಯಲ್ಲಿ ಲೇಖನ ಗಳನ್ನು ಬರೆದು ಅಂತರ್ಜಾಲಕ್ಕೆ ಕಳುಹಿಸಬಹುದು. ಲೇಖನ ಬರೆಯುವಾಗ ಬಹುಮುಖ್ಯವಾಗಿ ಎದುರಾಗು ವುದು ಪಾರಿಭಾಷಿಕ ಪದಗಳ ಸಮಸ್ಯೆ. ಇಂಗ್ಲಿಷ್ ಭಾಷೆಯಲ್ಲಿ ರಚಿತವಾಗಿರುವ ಸಾಹಿತ್ಯಕ್ಕೂ ಈಗ ಕನ್ನಡ ಭಾಷೆಯಲ್ಲೆ ಬರುವ ಸಾಹಿತ್ಯಕ್ಕೂ ವ್ಯತ್ಯಾಸವನ್ನು ಕಾಣುತ್ತೇವೆ."[೧]

ಅಂತರ್ಜಾಲದ ಸ್ವರೂಪ : ಇಂದು ಪ್ರಪಂಚದಲ್ಲಿ ಹೆಚ್ಚು ಬಳಕೆಯಾಗುತ್ತಿರುವುದು ಗಣಕ ಯಂತ್ರಗಳು ಮತ್ತು ಅದರಲ್ಲಿ ಅಡಕವಾಗಿರುವ ಅಂತರ್ಜಾಲ. ಈ ಎರಡರ ವ್ಯಾಪ್ತಿ ವಿಶ್ವದಲ್ಲಿ ಮನ್ನಣೆ ಯನ್ನು ಪಡೆದಿದೆ. ಅಂತರ್ಜಾಲವನ್ನು ಕುರಿತು ತಿಳಿದುಕೊಳ್ಳೋಣ. ಅಂತರ್ಜಾಲ ಎಂಬುದು ಸಹಸ್ರಾರು ಗಣಕ ಯಂತ್ರಗಳ ಜಾಲಗಳ ನಡುವೆ ಸಂಪರ್ಕವನ್ನು ಏರ್ಪಡಿಸಿ, ನಿರ್ಮಿಸಲಾದ ಬೃಹತ್ ಜಾಲ ತಾಣವಾಗಿದೆ. ಇದು ಸಾರ್ವಜನಿಕವಾಗಿ ಲಭ್ಯವಾಗಿದ್ದು, ಇಂಟರ್‌ನೆಟ್, ಪ್ರೋಟೋಕೋಲ್ ಮೊದ ಲಾದ ವ್ಯವಸ್ಥೆಗಳ ಮುಖಾಂತರ ಮಾಹಿತಿ ಸಂವಹನ ನಡೆಸುತ್ತದೆ. ಉದಾಹರಣೆಗೆ ಸರ್ಕಾರಿ, ಶೈಕ್ಷಣಿಕ

ಮತ್ತು ವಾಣಿಜ್ಯ ಸಂಸ್ಥೆಗಳ ಅಂತರ್‌ಜಾಲ ಅಥವಾ ಇಂಟರ್‌ನೆಟ್. ಅನೇಕ ರೀತಿಯ ಮಾಹಿತಿಯನ್ನು ಸಾಗಿಸುವ ಈ ಜಾಲ 'ವಿ – ಅಂಚೆ', 'ಜಾಲ ಹರಟೆ', 'ಅಂತರ ಜಾಲತಾಣ' ಮೊದಲಾದ ಸೇವೆಗಳನ್ನು ಒದಗಿಸುತ್ತದೆ.

ಅಂತರ್ಜಾಲದ ಇತಿಹಾಸ : ೧೯೬೯ರಲ್ಲಿ ಅಮೇರಿಕ ಸರ್ಕಾರದ ರಕ್ಷಣಾ ವಿಭಾಗ ತನ್ನ ಕೆಲಸಗಳಿಗಾಗಿ ಗಣಕ ಯಂತ್ರಗಳ ಒಂದು ಜಾಲವನ್ನು ನಿರ್ಮಿಸಿತು. ಇದಕ್ಕೆ ಅರ್ಪಾನೆಟ್ ಎಂದು ಹೆಸರಿಡಲಾಗಿತ್ತು. ವಿಕೇಂದ್ರಿಕೃತ ಜಾಲಗಳು ಮತ್ತು ಮಾಹಿತಿ ಸಂವಹನ ವ್ಯವಸ್ಥೆಗಳ ಮೇಲಿನ ಸಂಶೋಧನೆಯ ಫಲಿತಾಂಶ ಈ ಜಾಲವಾಗಿತ್ತು. ಜನವರಿ ೧, ೧೯೮೩ ರಂದು ಅರ್ಪಾನೆಟ್‌ನ ಕೆಲವು ಮೂಲಭೂತ ವ್ಯವಸ್ಥೆಗಳನ್ನು ಆಧುನೀಕರಣಗೊಳಿಸಲಾಯಿತು. ಇಂದಿನ ಅಂತರ ಜಾಲದ ಹಿರಿಯಜ್ಜ ಈ ಆಧುನೀಕೃತ ಅರ್ಪಾನೆಟ್.

ಅಂತರ್‌ಜಾಲದ ಅಭಿವೃದ್ಧಿಯಲ್ಲಿ ಇನ್ನೊಂದು ಮುಖ್ಯ ಹೆಜ್ಜೆ ಅಮೇರಿಕದ ರಾಷ್ಟ್ರೀಯ ವಿಜ್ಞಾನ ಸಂಸ್ಥೆ ೧೯೮೬ರಲ್ಲಿ ನಿರ್ಮಿಸಿದ ಇನ್ನೊಂದು ಕಂಪ್ಯೂಟರ್ ಜಾಲ. ಇದಕ್ಕೆ ಎನ್.ಎಸ್.ಎಫ್ ನೆಟ್ ಎಂದು ಹೆಸರಿಡಲಾಗಿತ್ತು. ನಂತರದ ವರ್ಷಗಳಲ್ಲಿ ಇನ್ನೂ ಅನೇಕ ಜಾಲಗಳು ಚಿಗುರಿಕೊಂಡವು. ಆದರೆ ಆಗ ಇನ್ನೂ ಈ ಜಾಲಗಳು ಬಿಡಿ ಬಿಡಿಯಾಗಿ ಹಂಚಿ ಹೋಗಿದ್ದವೇ ಹೊರತು ಒಂದಕ್ಕೊಂದು ಸಂಪರ್ಕವನ್ನು ಹೊಂದಿರಲಿಲ್ಲ. ೯೦ರ ದಶಕದಲ್ಲಿ ಈ ವಿವಿಧ ಜಾಲತಾಣಗಳ ನಡುವೆ ಸಂಪರ್ಕ ಏರ್ಪಡಿಸಿ ಅವುಗಳನ್ನು ಒಗ್ಗೂಡಿಸಲಾಯಿತು. ಇತರ ಸಣ್ಣ ದೇಶಗಳಲ್ಲಿ ಜನ್ಮ ತಾಳಿದ್ದ ಕಂಪ್ಯೂಟರ್ ಜಾಲಗಳು ಈ ಪ್ರಯತ್ನದಲ್ಲಿ ಸೇರಿಕೊಂಡು ಅನೇಕ ಸಣ್ಣ ಸಣ್ಣ ಕಂಪ್ಯೂಟರ್ ಜಾಲಗಳನ್ನು ಒಳಗೊಂಡ ಬೃಹತ್ ಜಾಲ ರೂಪುಗೊಳ್ಳಲಾರಂಭಿಸಿತು. ಇದೇ ಈಗಿನ ಅಂತರ್ಜಾಲವಾಗಿದೆ.

ಅಂತರ್ಜಾಲದಲ್ಲಿ ಕನ್ನಡ : ಅಂತರ್ಜಾಲದಲ್ಲಿ ಭಾಷೆಯ ಬಳಕೆ ಅತಿ ಮುಖ್ಯವಾಗಿದೆ. ಏಕೆಂದರೆ ಭಾಷೆಯ ಮೂಲಕವೇ ಬೇಕಾದ ಕಾರ್ಯಗಳನ್ನು ಸಾಧಿಸಲು ಸಾಧ್ಯ. ಮನುಷ್ಯರಲ್ಲಿ ನಾನಾ ಬಗೆಯ ವಿಭಿನ್ನ ಕ್ರಿಯೆಗಳು ನಡೆಯುತ್ತವೆ. ಅವರು ತಮ್ಮ ಕಾರ್ಯ ಸಿದ್ದಿಗಾಗಿ ಏನೆಲ್ಲಾ ಮಾಡಲು ಸಿದ್ದರಾ ಗಿರುತ್ತಾರೆ. ಒಬ್ಬ ಮೂಗ ಸನ್ನೆಯ ಮೂಲಕ ನೀರು ಕುಡಿಯಲು ಕೇಳಿದರೆ ಕೊಡಬಹುದು. ಆದರೆ ಇನ್ನಿತರ ಕೆಲಸ ಕಾರ್ಯಗಳನ್ನು ಹೇಗೆ ಹೇಳುತ್ತಾನೆ. ಆದ್ದರಿಂದ ಭಾಷೆ ಅದೇ ರೀತಿ ಅಂತರ್ಜಾಲದಲ್ಲಿ ಸಹಾಯಕವಾಗುತ್ತದೆ. ಇದರಿಂದ ಬೇಕಾದ ಕಾರ್ಯ ಪ್ರಗತಿ ಜರುಗುತ್ತದೆ.

ಈಗಾಗಲೇ ಅಂತರ್ಜಾಲದಲ್ಲಿ ಕನ್ನಡ ಭಾಷೆ ತನ್ನ ವ್ಯಾಪ್ತಿಯನ್ನು ಕಂಡುಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ಅಂತರ್ಜಾಲ ಪದ್ಧತಿಯಲ್ಲಿ ಬಹಳ ಉಪಯುಕ್ತತೆಯನ್ನು ಕಾಣುತ್ತಿದೆ. ಅಂತ ರ್ಜಾಲ ತಾಣಗಳಲ್ಲಿ ಲಕ್ಷಗಟ್ಟಲೆ ಪುಟಗಳಷ್ಟು ಕನ್ನಡ ಮಾಹಿತಿಯನ್ನು ಶೇಖರಿಸಲಾಗಿದೆ. ಕನ್ನಡ ಭಾಷೆ,

ಸಾಹಿತ್ಯ, ಕರ್ನಾಟಕದ ವೃತ್ತಾಂತ, ಇಲ್ಲಿನ ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳು, ಇಲ್ಲಿನ ಆಹಾರ ಪದ್ಧತಿ, ಶಿಕ್ಷಣ, ತಂತ್ರಜ್ಞಾನ, ಕಲೆ, ಕಾನೂನು, ಆರೋಗ್ಯ, ಲೇಖನಗಳು, ಕ್ರೀಡಾಲೋಕ, ಪ್ರದರ್ಶನ, ಕನ್ನಡ ಡಿಜಿಟಲ್ ಗ್ರಂಥಾಲಯ, ಕನ್ನಡ ಬ್ಲಾಗ್‌ಗಳ ಕೊಂಡಿಗಳನ್ನು ಅಂತರ್ಜಾಲದಲ್ಲಿ ಅಳವಡಿಸ ಲಾಗಿದ್ದು, ಇದರ ಉಪಯೋಗವನ್ನು ಲಕ್ಷೋಪಲಕ್ಷ ಮಂದಿ ಉಪಯೋಗಿಸುತ್ತಿರುವುದನ್ನು ಕಾಣುತ್ತೇವೆ.

ಅಂತರ್ಜಾಲದಲ್ಲಿ ಗೂಗಲ್ ಸೇವೆಯನ್ನು ಸಹ ಪಡೆಯಬಹುದು. ಇದರಲ್ಲಿ ಹಲವಾರು ಭಾಷೆಗಳನ್ನು ಉಪಯೋಗಿಸಬಹುದು. ತೆರೆಯ ಮೇಲೆ ಇದನ್ನು ತೆರೆದು ಕನ್ನಡ ಎಂದು ಕ್ಲಿಕ್ಕಿಸಿದರೆ ನಾವು ಪಡೆಯುವ ವಿಷಯವನ್ನು ಕನ್ನಡದಲ್ಲಿಯೇ ಪಡೆಯಬಹುದು. ಕನ್ನಡ, ತೆಲುಗು, ತಮಿಳು, ಮಲಯಾಳಂ, ಇಂಗ್ಲೀಷ್ ಇತರೆ ಭಾಷೆಗಳು ಸಹ ಓದಲು ಸಿಗುತ್ತವೆ. ಮೊದಲು ಕನ್ನಡ ಭಾಷೆ ಇಲ್ಲ ದಿರುವಾಗ ಇಲ್ಲವೆಂದು ಕೊರಗುತ್ತಿದ್ದ ಕನ್ನಡಿಗರಿಗೆ ಈಗ ಹರುಷವಾಗಿದೆ. ಕನ್ನಡದಲ್ಲೆ ಹಲವು ಮಾಹಿತಿ ಗಳನ್ನು ಪಡೆಯಬಹುದಾಗಿದೆ. ಅಂತರ್ಜಾಲವು ಒಂದು ಖಾಸಗಿ ಕಂಪ್ಯೂಟರ್ ನೆಟ್‌ವರ್ಕ್ ನಿರ್ವ ಹಣಾ ವ್ಯವಸ್ಥೆಯ ಬಗ್ಗೆ ವಿಶ್ಲೇಷಿಸುತ್ತದೆ. ಈ ವಿವರಣೆಯನ್ನು ಇಂಟರ್‌ನೆಟ್ ಪ್ರೋಟೋಕಾಲ್, ಶಿಷ್ಟ ನಿಯಮದ ತಂತ್ರಜ್ಞಾನವನ್ನು ಬಳಸಿಕೊಂಡು ಗೌಪ್ಯವಾಗಿ ಹಂಚಿಕೆ ಮಾಡಿಕೊಳ್ಳುತ್ತದೆ. ಈ ಪದವನ್ನು ಅಂತರ್‌ಜಾಲ ಪದದ ಅರ್ಥಕ್ಕೆ ತದ್ವಿರುದ್ಧವಾಗಿ ಬಳಕೆ ಮಾಡಲಾಗುತ್ತದೆ. ಇದು ಸಂಸ್ಥೆಗಳ ನಡುವಿನ ನೆಟ್‌ವರ್ಕ್ ಆಗಿರುವುದರ ಜೊತೆಗೆ ಒಂದು ಸಂಸ್ಥೆಯೊಳಗಿನ ನೆಟ್‌ವರ್ಕ್‌ಗೆ ಸೂಚಿತವಾಗುತ್ತದೆ. ಕೆಲವೊಂದು ಬಾರಿ ಈ ಪದವು ಕೇವಲ ಸಂಸ್ಥೆಯ ಆಂತರಿಕ ವೆಬ್‌ಸೈಟ್‌ಗೆ ಮಾತ್ರ ಉಲ್ಲೇಖಿತ ವಾಗುತ್ತದೆ. ಆದರೂ ಇದು ಸಂಸ್ಥೆಯ ಮಾಹಿತಿ ತಂತ್ರಜ್ಞಾನ ಮೂಲ ಸೌಕರ್ಯದ ಆಧಾರ ರಚನೆಯ ಅಧಿಕ ವ್ಯಾಪಕತೆಯ ಭಾಗವಾಗಿರಲೂಬಹುದು. ಇದು ಬಹು ಉದ್ದೇಶಿತ ಖಾಸಗಿ ವೆಬ್ ಸೈಟ್‌ಗಳಿಗೆ ಅತಿಥೇಯ ಸ್ಥಾನ ನೀಡಬಹುದು. ಜೊತೆಗೆ ಇದು ಆಂತರಿಕ ಸಂವಹನ ಹಾಗೂ ಸಹಯೋಗಕ್ಕೆ ಒಂದು ಪ್ರಮುಖ ಅಂಶವಲ್ಲದೇ ಕೇಂದ್ರ ಬಿಂದುವಾಗಿರುತ್ತದೆ. ಅಂತರ್ಜಾಲವನ್ನು ಅಂತರ್ಜಾಲದ ಪರಿಕಲ್ಪನೆ ಹಾಗೂ ತಂತ್ರಜ್ಞಾನಗಳನ್ನು ಬಳಸಿಕೊಂಡು ನಿರ್ಮಿಸಲಾಗುತ್ತದೆ. ಉದಾ : ಕ್ಲೈಂಟ್ ಸರ್ವರ್ ಗ್ರಾಹಕ ಸೇವಾ ಪರಿಕರ ಕಂಪ್ಯೂಟಿಂಗ್ ಹಾಗೂ ಇಂಟರ್‌ನೆಟ್ ಪ್ರೋಟೋಕಾಲ್ ಸೂಟ್ ಅಂತರಜಾಲ ನಿಯಮಗಳ ಬಳಕೆ ಮಾಡಲಾಗುತ್ತದೆ. ಯಾವುದೇ ಒಂದು ಜನಪ್ರಿಯ ಇಂಟರ್ ನೆಟ್ ಪ್ರೋಟೋ ಕಾಲ್‌ಗಳನ್ನು ಒಂದು ಅಂತರ್ಜಾಲದಲ್ಲಿ ಪತ್ತೆ ಮಾಡಬಹುದು. **http** (ಜಾಲ ಸೇವೆಗಳು) ಮತ್ತು **smtp** (ಇ ಮೇಲ್)ಗಳ ಮೂಲಕವಾಗಿ ತಿಳಿಯಬಹುದು. "ಅಂತರ್ಜಾಲವನ್ನು ಅಂತರ್ಜಾಲದ ಒಂದು ಖಾಸಗಿ ಆನಲಾಗ್ (ಸದೃಶವಾದ ವಸ್ತು) ಎಂದು ಅರ್ಥೈಸಿಕೊಳ್ಳಬಹುದು ಅಥವಾ ಒಂದು ಸಂಸ್ಥೆಗೆ ಸೀಮಿತವಾದ ಅಂತರ್ಜಾಲದ ಒಂದು ಖಾಸಗಿ ವಿಸ್ತರಣೆಯೆಂದು ಅರ್ಥೈಸಿಕೊಳ್ಳಬಹುದು. ನೀಲ್ಸನ್

ನಾರ್ಮಸ್ ಗ್ರೂಪ್ ೨೦೦೭ರಲ್ಲಿ ರಚಿಸಿ ಆಯೋಜಿಸಿದ ವಾರ್ಷಿಕ ಅಂತರ್ಜಾಲ ವಿನ್ಯಾಸದ ಪ್ರಕಾರ ಇದರಲ್ಲಿ ಭಾಗವಹಿಸಿದವರ ಅಂತರ್ಜಾಲ ಪುಟಗಳ ಸಂಖ್ಯೆಯು ೨೦೦೧ ರಿಂದ ೨೦೦೩ರೊಳಗೆ ಸರಿ ಸುಮಾರು ೨,೦೦,೦೦೦ಕ್ಕೂ ಅಧಿಕವಾಗಿತ್ತೆಂದು ಅಂದಾಜಿಸಲಾಗಿದೆ. ಅಲ್ಲದೇ ೨೦೦೫-೦೭ ನಡುವೆ ಇದು ಸರಿಸುಮಾರು ಆರು ದಶಲಕ್ಷಕ್ಕೂ ಹೆಚ್ಚೆಂದು ಅಂದಾಜಿಸಲಾಗಿದೆ.[೨] ಇದು ಇನ್ನೂ ಹೆಚ್ಚುವ ಲಕ್ಷಣಗಳಿವೆ.

ಜಾಲತಾಣಗಳು ಅಂತರ್ಜಾಲದ ಬಳಕೆದಾರರಿಗೆ ಗುರುತಿಸಲು ಹಾಗೂ ಮಾಹಿತಿಯನ್ನು ಶೀಘ್ರದಲ್ಲಿ ಸಂಗ್ರಹಿಸಲು ಸಹಾಯ ಮಾಡುತ್ತವೆ. ಅಲ್ಲದೇ ಅವರ ಪಾತ್ರ ಹಾಗೂ ಜವಾಬ್ದಾರಿಗಳಿಗೆ ಅನುಸಾರವಾಗಿ ಅನ್ವಯಗಳನ್ನು ಬಳಕೆ ಮಾಡಬಹುದು. ವೆಬ್ ಬ್ರೌಸರ್ ಇಂಟರ್ ಫೇಸ್‌ನ ಸಹಾಯ ದಿಂದ ಬಳಕೆ ದಾರರು ದತ್ತಾಂಶ ಸಂಗ್ರಹದಲ್ಲಿರುವ, ಸಂಸ್ಥೆಗೆ ಬೇಕಾದ ಯಾವುದೇ ದತ್ತಾಂಶವನ್ನು, ಯಾವುದೇ ಸಮಯದಲ್ಲಿ ಪಡೆಯುವ, ಕಾರ್ಯ ತಾಣಗಳೊಂದಿಗೆ ಯಾವಾಗಲೂ ಸಂಪರ್ಕದಲ್ಲಿರುವ, ತಮ್ಮ ಕಾರ್ಯವನ್ನು ಬೇಗನೆ ಮುಗಿಸಲು ನೌಕರರ ಸಾಮರ್ಥ್ಯವನ್ನು ಹೆಚ್ಚು ನಿಖರವಾಗಿ ಹೆಚ್ಚಿಸುವ ಹಾಗೂ ತಮ್ಮ ಮಾಹಿತಿ ಸರಿಯಾಗಿದೆಯೆಂಬ ಭರವಸೆ ನೀಡುವ ಇವು ಬಳಕೆದಾರರಿಗೆ ಒದಗಿಸಲಾದ ಸೇವೆ ಗಳನ್ನು ಉತ್ತಮ ಪಡಿಸಲು ಸಹಾಯ ಮಾಡುತ್ತವೆ. ನಮಗೆ ಬೇಕಾದ ವಿಷಯದ ಬಗ್ಗೆ ನಾವು ನಮೂದಿಸಿದರೆ ಅದಕ್ಕೆ ಸಂಬಂಧಿಸಿದಂತೆ ಸಂಗ್ರಹವಾಗಿರುವ ಮಾಹಿತಿ ತೆರೆಯ ಮೇಲೆ ಕಾಣಿಸಿ ಕೊಳ್ಳುತ್ತದೆ. ಉದಾ: ಕುವೆಂಪು ಎಂದು ಗೂಗಲ್‌ನಲ್ಲಿ ನಮೂದಿಸಿದರೆ ಅವರ ಬಗೆಗಿನ ಮಾಹಿತಿಯನ್ನು ಓದಬಹುದು. ಜೊತೆಗೆ ಮುದ್ರಿಸಿಕೊಳ್ಳಬಹುದು.

ಅಂತರ್ಜಾಲಗಳು ಸಂಸ್ಥೆಗಳಿಗೆ, ನೌಕರರಿಗೆ ಅಗತ್ಯವಿದ್ದ ಸಮಯದಲ್ಲಿ ಮಾಹಿತಿಯನ್ನು ಹಂಚಿಕೆ ಮಾಡಲು ಅವಕಾಶ ನೀಡುತ್ತಿದೆ. ನೌಕರರು ಎಲೆಕ್ಟ್ರಾನಿಕ್ ಮೇಲಿನ ಮೂಲಕ ಮಾಹಿತಿಯ ಅವ್ಯವಸ್ಥೆ ಯಿಂದಾಗಿ ಉಂಟಾಗುವ ಗೊಂದಲವನ್ನು ನಿವಾರಿಕೊಂಡು, ತಮಗೆ ಅನುಕೂಲವಾಗುವ ರೀತಿಯಲ್ಲಿ ಮಾಹಿತಿಯನ್ನು ಸಂಯೋಜಿಸಿಕೊಳ್ಳುತ್ತಾರೆ.

ಅಂತರ್ಜಾಲಗಳು ಒಂದು ಸಂಸ್ಥೆಯೊಳಗೆ ಸಮಗ್ರವಾಗಿ ಹಾಗೂ ಸಮಾನವಾಗಿ ಸಂವಹನದ ಪ್ರಬಲ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಸಂಪರ್ಕ ಸಂವಹನದ ದೃಷ್ಟಿಕೋನದಿಂದ ಅಂತರ್ಜಾಲ ಗಳು ಸಂಸ್ಥೆಯುದ್ದಕ್ಕೂ ಸಮಗ್ರವಾದ ನಿಲುಕಿನಲ್ಲಿರುವ ಕಾರ್ಯ ನೀತಿಯ ಉಪ ಕ್ರಮವನ್ನು ಜಾಗತಿಕ ವಾಗಿ ಅಗತ್ಯ ಮಾಹಿತಿ ತಿಳಿಸಲು ಸಹಕಾರಿಯಾಗಿವೆ. ಸಂಘಟನೆಯ ಸಂಪೂರ್ಣ ಆರಂಭಿಕ ಕಾರ್ಯ ವಿಧಾನಗಳನ್ನು ಅವು ವೃದ್ಧಿಪಡಿಸಲು ಸಮರ್ಥವಾಗಿವೆ. ಮಾಹಿತಿಯ ಮಾದರಿಯನ್ನು ಸುಲಭವಾಗಿ ತಿಳಿಯಪಡಿಸುವುದು ಉಪಕ್ರಮದ ಉದ್ದೇಶವಾಗಿದೆ. ಅದು ಉಪಕ್ರಮವು ಏನನ್ನು ಸಾಧಿಸಲು

ಉದ್ದೇಶಿಸಿದೆ? ಉಪಕ್ರಮದ ಹಿಂದಿರುವ ಅಂಶಗಳು ಯಾವುವು? ಇಲ್ಲಿಯವರೆಗೂ ದೊರೆತ ಫಲಿತಾಂಶ ಹಾಗೂ ನೆಚ್ಚಿನ ಮಾಹಿತಿಗಾಗಿ ಯಾರನ್ನು ಸಂಪರ್ಕಿಸಬೇಕು? ಅಂತರ್ಜಾಲದಲ್ಲಿ ಈ ಮಾಹಿತಿಯನ್ನು ಸಂಗ್ರಹಿಸಿ ಕಲೆ ಹಾಕುವ ಅವಕಾಶ ದೊರೆಯುತ್ತದೆ. ಸಂವಹನದ ಕೆಲ ಉದಾ : ಚಾಟ್, ಇಮೇಲ್ ಹಾಗೂ ಬ್ಲಾಗ್‌ಗಳು. ಅಂತರ್ಜಾಲವು ತನ್ನ ಸಂವಹನದಿಂದಾಗಿ ಒಂದು ಸಂಸ್ಥೆಗೆ ನೆರವಾದ ವಾಸ್ತವಕ್ಕೆ ಒಂದು ಉತ್ತಮ ಉದಾಹರಣೆ ಎಂದರೆ ನೆಸ್ಲೆ ಸಂಸ್ಥೆ. ಇದು ಸ್ಯಾಂಡಿನೇವಿಯದಲ್ಲಿ ಆರಂಭಿಸಿದ ಹಲವಾರು ಆಹಾರ ಸಂಸ್ಕರಣ ಘಟಕಗಳ ಬಗ್ಗೆ ಅಂತರ್ಜಾಲ ಸಂವಹನದಿಂದ ಹೊರ ಜಗತ್ತಿಗೆ ಮಾಹಿತಿ ದೊರೆಯಿತು. ಅವರ ಪ್ರಮುಖ ಬೆಂಬಲದ ನೆರವಿನ ವ್ಯವಸ್ಥೆಯು ಪ್ರತಿ ದಿನ ಹಲವಾರು ಪ್ರಶ್ನೆಗಳಿಗೆ ಉತ್ತರಿಸಿ, ವ್ಯವಹಾರಿಕ ಸಮಸ್ಯೆಗಳನ್ನು ಬಗೆ ಹರಿಸಬೇಕಿತ್ತು. ನೆಸ್ಲೆ ಸಂಸ್ಥೆಯು ಅಂತರ್ಜಾಲದ ಮೇಲೆ ತನ್ನ ಬಂಡವಾಳ ಹೂಡಲು ನಿರ್ಧರಿಸಿದಾಗ ಅದು ಇದರಿಂದ ಆಗುವ ಉಳಿತಾಯವನ್ನು ಬೇಗನೆ ಗುರುತಿಸಿತು. ಮ್ಯಾಕ್ಲೋಟರ್ನ್ ಪ್ರಕಾರ ಪ್ರಶ್ನೆಗಳಿಗಾಗಿ ಮಾಡಲಾಗುತ್ತಿದ್ದ ದೂರವಾಣಿ ಕರೆಗಳ ನಂತರ ಉಂಟಾಗುತ್ತಿದ್ದ ಉಳಿತಾಯವು ಅಂತರ್ಜಾಲದ ಮೇಲೆ ಹೂಡಲಾದ ಬಂಡವಾಳಕ್ಕಿಂತ ಮೂಲಭೂತವಾಗಿ ಅಧಿಕವಾಗಿತ್ತು.

ಭಾಷೆ ಕೇವಲ ಮಾತನಾಡಲು ಮಾತ್ರವಲ್ಲ. ಸಮಾಜದಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವ ಮಾಧ್ಯಮವಾಗಿದೆ. ಇದನ್ನು ಅಂತರ್ಜಾಲದಲ್ಲಿ ಇತ್ತೀಚೆಗೆ ಸುಲಭವಾಗಿ ಬಳಸುತ್ತಿದ್ದೇವೆ. ಕನ್ನಡ ಗಣಕ ಯಂತ್ರದಲ್ಲಿ ಕನ್ನಡ ಭಾಷೆಯನ್ನು ಅಳವಡಿಸಲು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಅದನ್ನು ಸರಳ ಮಾದರಿಯಲ್ಲಿ ಬಳಸುವ ಜನ ಇಂದು ಅವರನ್ನು ನೆನೆಯತಕ್ಕದ್ದು. ಏಕೆಂದರೆ ಅವರ ಶ್ರಮವೇ ಈಗ ಕನ್ನಡ ಭಾಷೆಗೆ ಅಂತರ್ಜಾಲದಲ್ಲಿ ಒಳ್ಳೆಯ ಸ್ಥಾನ ನೀಡಿದೆ. ಆದ್ದರಿಂದ ಇಂದು ಏನೆಲ್ಲಾ ಕಾರ್ಯಗಳನ್ನು ಮಾಡುತ್ತಿ ದ್ದೇವೆ. ಕನ್ನಡ ಭಾಷೆಗೆ ಸಂಬಂಧಿಸಿದ ಬರವಣಿಗೆಗಳನ್ನು ಸಾವಿರಾರು ಪುಟಗಳಷ್ಟು ಅಂತರ್ಜಾಲದಲ್ಲಿ ಅಳವಡಿಸಿರುವುದು ಕನ್ನಡಿಗರಿಗೆ ಸಂತಸವನ್ನುಂಟುಮಾಡಿದೆ. ಪ್ರತಿಯೊಂದು ಭಾಷೆಯು ಸಹ ತನ್ನದೇ ಆದ ಮೌಲ್ಯವನ್ನು ಹೊಂದಿರುತ್ತದೆ. ಕನ್ನಡ ಭಾಷೆಯು ಸಹ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವುದರಿಂದ ಸಮಾಜದಲ್ಲಿ ಒಂದು ಉತ್ತಮ ಭಾಷೆಯಾಗಿ ಬೆಳವಣಿಗೆ ಹೊಂದುತ್ತಿದೆ. ಕನ್ನಡ ಭಾಷೆಯ ಯಾವ ಮಾಹಿತಿಯನ್ನು ಬೇಕಾದರೂ ಸಹ ಇಂದು ಪಡೆದುಕೊಳ್ಳಬಹುದು. ಅಷ್ಟರ ಮಟ್ಟಿಗೆ ಕನ್ನಡ ಭಾಷೆಯನ್ನು ಅಂತರ್ಜಾಲದಲ್ಲಿ ಕಾಣುತ್ತಿದ್ದೇವೆ. ಹಳ್ಳಿಗಳಿಂದ ನಗರದವರೆಗೂ ಇದರ ವ್ಯಾಪ್ತಿ ಹರಡಿದೆ. ಇದರಿಂದ ಸಾಮಾನ್ಯ ಕಛೇರಿಯಿಂದ ದೊಡ್ಡ ಕಂಪನಿಗಳವರೆಗೂ ಇದರ ಉಪಯೋಗ ಪಡೆ ಯುತ್ತಿದ್ದಾರೆ. ಕನ್ನಡವನ್ನು ಆಂಗ್ಲ ಭಾಷೆಯಲ್ಲೂ ತರ್ಜುಮೆ ಮಾಡಿಕೊಳ್ಳಬಹುದು. ಅಂತಹ ಮಾದರಿ ಯ ವ್ಯವಸ್ಥೆಯನ್ನು ಅಂತರ್ಜಾಲದಲ್ಲಿ ಕಾಣುತ್ತೇವೆ.

ಅಂತರ್ಜಾಲದಲ್ಲಿ ದಿನೇ ದಿನೇ ಕನ್ನಡದ ಪ್ರಭಾವ ಹೆಚ್ಚಾಗುತ್ತಿದೆ. ಇದಕ್ಕೆ ಮೂಲವೆಂದರೆ ವಿದೇಶಗಳಲ್ಲಿರುವ ಕನ್ನಡಿಗರು. ಉತ್ತರಿಸುವ, ಅನಿಸಿಕೆಗಳನ್ನು ವ್ಯಕ್ತಪಡಿಸುವ ಜಾಲ ತಾಣಗಳು ಹೆಚ್ಚಾಗುತ್ತಿವೆ. ಇದರಲ್ಲಿ ಅವರ ಕನ್ನಡದ ಬಗೆಗಿನ ಅಭಿಮಾನವನ್ನು ವ್ಯಕ್ತಪಡಿಸುವ ಬಗೆಯನ್ನು ತಿಳಿಯಬಹುದು. ಅಂತರ್ಜಾಲವು ಜನಪ್ರಿಯವಾಗಿ ಬೆಳೆದು ದೊಡ್ಡ ಪ್ರಮಾಣದ ಅಂತರ್ಜಾಲ ಸಂಬಂಧಿತ ದಟ್ಟಣೆಯು ಹೆಚ್ಚಾದಂತೆಲ್ಲ ಲ್ಯಾನ್ ಮತ್ತು ವ್ಯಾನ್‌ಗಳು ನಿಧಾನವಾಗಿ ಟಿಸಿಪಿ/ಐಪಿ ನಿಯಮಾವಳಿಗಳಿಗೆ ಬದಲಾಯಿಸಿಕೊಂಡವು. ಕನ್ನಡ ಭಾಷೆಯು ಕಂಪ್ಯೂಟರ್ ಜಾಲವನ್ನು ಹೊಕ್ಕು ಹಲವು ವರ್ಷಗಳೇ ಆದವು. ಮೊದ ಮೊದಲು ಕನ್ನಡಿಗರನ್ನು ಅನೇಕ ಸಮಸ್ಯೆಗಳು ಕಾಡುತ್ತಿದ್ದವು. ಆದರೆ ಈಗ ಮುಕ್ತವಾಗಿ ಜಾಲ ತಾಣಗಳಲ್ಲಿ ಕನ್ನಡ ಪ್ರಿಯರು ಹೆಚ್ಚುತ್ತಿದ್ದಾರೆ. ಕನ್ನಡದ ಪ್ರಖ್ಯಾತ ತಂತ್ರಾಂಶವೆಂದರೆ ಬರಹ. ಇದನ್ನು ಶೇಷಾದ್ರಿ ವಾಸುರವರು ಮಾಡಿದ್ದಾರೆ. ಇದರಲ್ಲಿ ಕನ್ನಡವನ್ನು ನಿರರ್ಗಳವಾಗಿ ಬಳಸಬಹುದು. ಇದರಿಂದ ಕನ್ನಡದಲ್ಲಿ ನಮಗೆ ಬೇಕೆನಿಸಿದ ಮಾಹಿತಿ, ಬರವಣಿಗೆ, ಅರ್ಜಿ, ಕಡತ ಇತ್ಯಾದಿಗಳನ್ನು ಡಿ.ಟಿ.ಪಿ. ಮಾಡಿಸಿಕೊಳ್ಳಬಹುದು. ಮಾಡಲೂಬಹುದು. ಆದರೆ ಬರಹವನ್ನು ಸರಿಯಾಗಿ ತಿಳಿದಿದ್ದರೆ ನಾವೇ ಸ್ವತಃ ಮಾಡಿಕೊಳ್ಳಬಹುದು. ಇಂಟರ್‌ನೆಟ್‌ನಲ್ಲಿ ಇದರ ಸಹಾಯದಿಂದ ಕವನ, ಲೇಖನ, ವಿಮರ್ಶೆ, ಶುಭಾಶಯ, ಪತ್ರಿಕೆ ಇತ್ಯಾದಿಗಳನ್ನು ಪ್ರಕಟಿಸಬಹುದು. ಇದಕ್ಕೆ ಬರಹದ ಸಹಾಯ ಬೇಕು. ಮೊದಲು ಅಂತರ್ಜಾಲದಲ್ಲಿ ಇಂಗ್ಲೀಷ್ ಮಾತ್ರವೇ ಇ ಮೇಲ್‌ಗೆ ಸಹಕರಿಸುತ್ತಿತ್ತು. ಆದರೆ ಈಗ ಕನ್ನಡದಲ್ಲಿಯು ಸಹ ಇ ಮೇಲ್ ಗಳನ್ನು ಕಳುಹಿಸುವ ಸುವರ್ಣಾವಕಾಶ ಬಂದಿದೆ.

ಬರಹ ಸಾಫ್ಟ್‌ವೇರ್ ತನ್ನದೇ ಆದ ಹಿರಿಮೆಯನ್ನು ಹೊಂದಿದೆ. ಈಗಾಗಲೇ ಕನ್ನಡ ಸಾಫ್ಟ್‌ವೇರ್‌ಗಳು ಇವೆ. ಆದರೆ ಇವು ಕೀಬೋರ್ಡ್ ಮ್ಯಾಪನ್ನು ಉಪಯೋಗಿಸುತ್ತವೆ. ನಿರ್ದಿಷ್ಟ ಕೀ ಬೋರ್ಡ್ ಲೇಔಟ್‌ನ್ನು ಕಲಿಯಬೇಕಾಗುತ್ತದೆ. ಆದರೆ ಬರಹದಲ್ಲಿ ಈ ತೊಂದರೆ ಇಲ್ಲ. ಇಲ್ಲಿ ಕನ್ನಡ ದೇವನಾಗರಿ ಮುಂತಾದ ಭಾರತೀಯ ಭಾಷೆಗಳ ಬರವಣಿಗೆಯನ್ನು ಇಂಗ್ಲೀಷ್‌ನಲ್ಲೇ ಬರೆದು ನಂತರ ಆಯಾ ಭಾಷೆಗಳಿಗೆ ಅದನ್ನು ಪರಿವರ್ತಿಸಿಕೊಳ್ಳಬಹುದು.

ಬರಹವನ್ನು ಉಪಯೋಗಿಸಲು ಇಂಗ್ಲಿಷ್ ಜ್ಞಾನವು ಅವಶ್ಯಕವಾಗಿ ಬೇಕಾಗಿರುತ್ತದೆ. ಏಕೆಂದರೆ ಕನ್ನಡ ಟೈಪ್ ಗೊತ್ತಿಲ್ಲದಿದ್ದರೆ ಇಂಗ್ಲೀಷ್ ಭಾಷೆಯ ೨೬ ಅಕ್ಷರದ ಕೀ ಬೋರ್ಡ್ ಲೇಔಟ್ ತಿಳಿದಿದ್ದರೆ ಸಾಕು. ಅದನ್ನು ಬಳಸಿಕೊಂಡು ಯಾವ ಭಾಷೆಗೆ ಬೇಕಾದರೂ ಪರಿವರ್ತಿಸಿಕೊಳ್ಳಬಹುದು. ನಾವು ಕನ್ನಡ ಮಾಹಿತಿಯನ್ನು ಪಡೆಯಬೇಕಾದರೆ **Karnataka** ಎಂದು ಇಂಗ್ಲಿಷ್‌ನಲ್ಲಿ ನಮೂದಿಸಿದರೆ, ತೆರೆಯ ಮೇಲೆ ಕನ್ನಡವನ್ನು ಆಯ್ಕೆ ಮಾಡಿದರೆ ಕರ್ನಾಟಕ ಎಂದು ತೆರೆಯ ಮೇಲೆ ಕಾಣಿಸುತ್ತದೆ. ಅದೇ ರೀತಿ **kuvempu** ಎಂದು ನಮೂದಿಸಿದರೆ ಕುವೆಂಪು ಕಾಣಿಸುತ್ತದೆ. **Kavithe** ಎಂದು ಟೈಪ್ ಮಾಡಿದರೆ ಅದು

ಕನ್ನಡ ಭಾಷೆಯಲ್ಲಿ ಕವಿತೆ ಎಂದು ಕಾಣಿಸುತ್ತದೆ. ಗಣಕ ಯಂತ್ರದ ಸಹಾಯದಿಂದ ಕನ್ನಡ ಭಾಷೆಯಲ್ಲಿ ಬೇಕಾಗುವ ಪ್ರಮುಖ ಕನ್ನಡ ಕಾಗದ ಪತ್ರಗಳನ್ನು ತಯಾರಿಸಬಹುದು. ಇದಕ್ಕೆ ಬರಹ ಸಾಫ್ಟ್‌ವೇರ್ ಸಹಾಯಕವಾಗುತ್ತದೆ. ಕನ್ನಡದಲ್ಲಿ ಡಿಟಿಪಿ ಸಾಫ್ಟ್‌ವೇರ್‌ಗಳಿದ್ದರೂ ಅವನ್ನು ದುಡ್ಡು ಕೊಟ್ಟು ಕೊಳ್ಳಬೇಕು. ಅದನ್ನು ಕೊಳ್ಳಲು ಸಾಮಾರ್ಥ್ಯವಿಲ್ಲದವರು ಇದರ ಉಪಯೋಗವನ್ನು ಪರೋಕ್ಷವಾಗಿ ಪಡೆಯುತ್ತಾರೆ.

ಇಂಗ್ಲೀಷ್‌ನಲ್ಲಿ ಒಂದು ಅನುಕೂಲತೆ ಇದೆ. ಒಂದು ಕಂಪ್ಯೂಟರ್ ಕೊಂಡರೆ ಅದರಲ್ಲಿ ಅನೇಕ ಸಾಫ್ಟ್‌ವೇರ್‌ಗಳನ್ನು ಉಚಿತವಾಗಿ ಎಡಿಟಿಂಗ್ ಮಾಡಿಕೊಳ್ಳಬಹುದು. ಇದುವರೆಗೂ ಕನ್ನಡದಲ್ಲಿ ಉಚಿತ ವಾಗಿ ದೊರೆಯುವ ಸಾಫ್ಟ್‌ವೇರ್‌ಗಳು ಇರಲಿಲ್ಲ. ಹೀಗಾಗಿಯೇ ಕನ್ನಡದಲ್ಲಿ ಕಾಗದ ಪತ್ರಗಳನ್ನು ತಯಾ ರಿಸಲಾಗದೆ ಕಛೇರಿಗಳಲ್ಲೆಲ್ಲಾ ಇಂಗ್ಲೀಷ್ ಬಳಕೆ ಹೆಚ್ಚಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಫ್ಟ್‌ವೇರ್‌ಗಳು ಉಚಿತವಾಗಿ ದೊರೆಯುತ್ತಿರುವುದರಿಂದ ಗಣಕ ಯಂತ್ರಗಳಲ್ಲಿ ಅವುಗಳನ್ನು ಬಳಸ ಬಹುದು. ಇದರ ಸಹಾಯದಿಂದ ಕಛೇರಿಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಕಂಪನಿಗಳಲ್ಲಿ ಕನ್ನಡವನ್ನು ಸಹ ಬಳಸಲಾಗುತ್ತಿದೆ. ಬೇಕಾದ ಕಡತಗಳನ್ನು ಟೈಪ್ ಮಾಡಿಸಿ, ಉಳಿಸಿಕೊಂಡು ಅವುಗಳನ್ನು ಬೇಕಾ ದಾಗ ಬಳಸುವ ಸ್ಥಿತಿಯನ್ನು ಕಾಣುತ್ತಿದ್ದೇವೆ. ಅಂತರ್ಜಾಲದಲ್ಲಿ ಕನ್ನಡ ಭಾಷೆಯ ಬಳಕೆಯಿಂದ ಇಂಗ್ಲೀಷ್ ಭಾಷೆಯ ಮೋಹವನ್ನು ಕನ್ನಡಿಗರು ಬಿಟ್ಟಿದ್ದಾರೆ.

ಇಂಗ್ಲೀಷ್ ಭಾಷೆಯ ಪ್ರಭಾವವನ್ನು ಕನ್ನಡ ಸಾಪ್ಟ್‌ವೇರ್ ಬರಹ ನೀಗುತ್ತಿದೆ. ಕೇವಲ ಕಛೇರಿ ಗಳಲ್ಲೆ ಮಾತ್ರವಲ್ಲದೆ ಮನೆಗಳಲ್ಲಿ, ಶಾಲೆ ಕಾಲೇಜುಗಳಲ್ಲಿ, ಸಾಹಿತಿಗಳು, ಪತ್ರಕರ್ತರು, ಯುವ ಬರಹ ಗಾರರು, ವಿಮರ್ಶಕರು, ವ್ಯಾಪಾರಸ್ಥರು ಬರಹದ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಅಂತ ರ್ಜಾಲದಲ್ಲಿ ಇದನ್ನು ಬೇಕಾದ ಮಾಹಿತಿ ಸಂಗ್ರಹಿಸಲು ಸಹ ಬಳಸುತ್ತಿದ್ದಾರೆ. ಕನ್ನಡ ಭಾಷೆಯಲ್ಲದೆ ಹಿಂದಿ, ಮರಾಠಿ, ತೆಲುಗು, ತಮಿಳು, ಉರ್ದು ಭಾಷೆಗಳನ್ನು ಈ ಅಂತರ್ಜಾಲದಲ್ಲಿ ಕಾಣುತ್ತೇವೆ. ಕನ್ನಡ ಭಾಷೆ ಅಂತರ್ಜಾಲದಲ್ಲಿ ಬೆಳಕಿಗೆ ಬಂದ ಮೇಲೆ ಅನಾಹುತಕ್ಕಿಂತ ಹೆಚ್ಚು ಉಪಯುಕ್ತತೆಯನ್ನು ಮಾಡಿದೆ. ಅಂತರ್ಜಾಲದಲ್ಲಿ ಕನ್ನಡದಲ್ಲಿ ಪತ್ರಿಕೆಯನ್ನು ಶುರು ಮಾಡಿದವರು ಡಾ. ಯು. ಬಿ. ಪವನಜ. ಅನಂತರದಲ್ಲಿ ಕನ್ನಡ ಪತ್ರಿಕೆಗಳು ಅಷ್ಟಿಷ್ಟು ಅಂತರ್ಜಾಲವನ್ನು ಹೊಕ್ಕು ಸರಾಗವಾಗಿ ಹರಡಿವೆ. ಮೊದಲು ಕ್ಲಿಷ್ಟತೆ ಎಂದವರು ಶೇಷಾದ್ರಿ ವಾಸುರವರ ಬರಹದಿಂದ ಅಂತರ್ ಜಾಲದ ವ್ಯವಹಾರ ಸುಲಭ ಮಾಡಿಕೊಂಡಿದ್ದಾರೆ.

ಆಂಗ್ಲ ಭಾಷೆಯಲ್ಲಿ ಜನರು ಇ ಮೇಲ್‌ಗಳನ್ನು ಕಳುಹಿಸುವ ಪದ್ಧತಿ ರೂಢಿಯಲ್ಲಿತ್ತು. ಆದರೆ ಬರಹದಿಂದ ಇಂದು ಕನ್ನಡದಲ್ಲಿಯೆ ಇ ಮೇಲ್‌ಗಳ ಮೂಲಕ ಶುಭ ಸಂದೇಶಗಳನ್ನು ಕಳುಹಿಸಲು ಈ ಅಂತರ್ಜಾಲದಲ್ಲಿ ಕನ್ನಡ ಭಾಷೆ ನೆರವಾಗುತ್ತಿದೆ. ವಿಚಾರ ವಿನಿಮಯಗಳನ್ನು ಮಾಡಲು ಬರಹ

ಸಹಾಯವಾಗುತ್ತದೆ. ಬರಹವನ್ನು ಶೇಷಾದ್ರಿ ವಾಸುರವರು ಅನಕೃರವರಿಗೆ ಅರ್ಪಣೆ ಮಾಡಿದ್ದು, **about baraha** ಎಂಬ ಬಟನ್ ಒತ್ತಿ ಅದರ ಮಾಹಿತಿ ಪಡೆಯಬಹುದು. ಅದನ್ನು ಬಳಸಿಕೊಳ್ಳುವುದು ಕನ್ನಡಿಗ ರಾದ ನಮ್ಮ ಕರ್ತವ್ಯವಾಗಿದೆ. ಅದು ಕನ್ನಡ ಭಾಷೆಯ ಬೆಳವಣಿಗೆಗೆ ಪ್ರೇರಕವಾಗುವುದು. ಹಲವಾರು ಪ್ರಯೋಜನಗಳುಳ್ಳ, ಬರಹ ಸಾಫ್ಟ್‌ವೇರ್‌ನ್ನು ಸೃಷ್ಟಿಸಿ ಶೇಷಾದ್ರಿ ವಾಸುರವರು ಕನ್ನಡ ಸಾರಸ್ವತ ಲೋಕ ಕ್ಕೆ ಬಹಳ ಮುಖ್ಯವಾದ ಕೊಡುಗೆ ನೀಡಿದ್ದಾರೆ. ಇವರು ನ್ಯೂಯಾರ್ಕ್‌ನಲ್ಲಿ ಸಿಟಿ ಬ್ಯಾಂಕ್‌ನ ಸಾಫ್ಟ್ ವೇರ್ ಎಂಜಿನಿಯರ್ ಆಗಿದ್ದು. ಜರ್ಮನಿಯಲ್ಲಿ ಸುಮಾರು ೬ ತಿಂಗಳು ಕಾಲ ಫೌಂಡೇಶನ್ ಸಾಫ್ಟ್ ವೇರ್ ಕುರಿತು ಅಧ್ಯಯನ ನಡೆಸಿದ್ದರು. ಅವರ ಅಧ್ಯಯನದ ಫಲವಾಗಿ ಬರಹ ವಿಶ್ವವ್ಯಾಪಿಯಾಗಿ ಅಂತರ್ಜಾಲದಲ್ಲಿ ಕಾಣ ಸಿಗುತ್ತದೆ. ಕನ್ನಡದ ಸಾಫ್ಟ್‌ವೇರ್‌ಗಳು ಕೇವಲ ಕನ್ನಡ ಫಾಂಟ್ಸ್, ವರ್ಡ್ ಪ್ರೊಸೆಸಿಂಗ್ ಕಾರ್ಯಕ್ಕೆ ಸೀಮಿತವಾಗಬಾರದು. ಕನ್ನಡ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಕನ್ನಡ ಟಿಡಿಪಿಯನ್ನು ಮೀರಿ ಮುಂದೆ ಯೋಚಿಸಬೇಕು ಎಂಬ ಆಕಾಂಕ್ಷೆ ಶೇಷಾದ್ರಿ ವಾಸುರವರದ್ದಾಗಿದೆ. ಕನ್ನಡದ ಇನ್ನಿತರೆ ಅಗತ್ಯಗಳಿಗೆ ಹೊಸ ಹೊಸ ರೀತಿಯ ಸಾಫ್ಟ್‌ವೇರ್ ತಯಾರಿಸಬೇಕು. ಈ ಮಹತ್ತರ ಉದ್ದೇಶದಿಂದ ಅವರು ಬರಹ ಸಾಫ್ಟ್‌ವೇರನ್ನು ಎಲ್ಲರಿಗೂ ಉಚಿತವಾಗಿ ಪ್ರಕಟಿಸುತ್ತಿದ್ದಾರೆ.

ಸರಕಾರಿ ಕಛೇರಿಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ತಂತ್ರಾಂಶ ಶಬ್ದ ರತ್ನ. ಇದು ಕನ್ನಡ–ಇಂಗ್ಲಿಷ್, ಹಿಂದಿ – ಇಂಗ್ಲೀಷ್‌ಗಳ ದ್ವಿಭಾಷಾ ಆವೃತ್ತಿಗಳಲ್ಲಿ ದೊರಕುತ್ತದೆ. ಕನ್ನಡ ಭಾಷೆಯ ಪರಂಪರೆಯನ್ನು ಅಂತರ್ಜಾಲದಲ್ಲಿ ಒಮ್ಮೆ ಗಮನಿಸಿದರೆ ಸಾಕು. ಕನ್ನಡ ಭಾಷೆಯ ಮಹತ್ವ ಅರ್ಥವಾಗುತ್ತದೆ. ಕನ್ನಡ ಭಾಷೆಯ ಸಿರಿವಂತಿಕೆ ಏನೆಂಬುದು ತಿಳಿಯುತ್ತದೆ.

ಕನ್ನಡಕ್ಕೆ ಸಂಬಂಧಿಸಿದ ಜಾಲತಾಣಗಳು ಬಹಳಷ್ಟಿವೆ. ಅವುಗಳ ಸಹಾಯದಿಂದ ನಾವು ನಮಗೆ ಬೇಕಾದ ಮಾಹಿತಿ ವಿಚಾರಗಳನ್ನು ತಿಳಿಯಬಹುದು. ಬರಹ, ನುಡಿ, ನಿಘಂಟು, ಕನ್ನಡ ತಂತ್ರಾಂಶಗಳು, ಕನ್ನಡ ಕಸ್ತೂರಿ, ಕಂಪ್ಯೂ ಇನ್ ಕನ್ನಡ, ಸಂಘದ ದಿನಪತ್ರಿಕೆ, ವಾರಪತ್ರಿಕೆಗಳು, ದೈನಿಕ ವೆಬ್ ಪೋರ್ಟ ಲ್‌ಗಳು, ಇತರೆ ವೆಬ್ ಪತ್ರಿಕೆಗಳು, ಸಿನಿಮಾ, ಟಿವಿ, ಸಂಗೀತಕ್ಕೆ ಸಂಬಂಧಿಸಿದ ವೆಬ್ ಸೈಟುಗಳು, ಬ್ಲಾಗ್ ಪ್ರಪಂಚ ಎಂಬ ಹಲವಾರು ಜಾಲತಾಣಗಳು ಅಂತರ್ಜಾಲದಲ್ಲಿ ಕನ್ನಡದಲ್ಲಿ ಬಳಕೆಯಲ್ಲಿವೆ. ಇವುಗಳ ಸಹಾಯದಿಂದ ಕನ್ನಡದಲ್ಲಿ ಬೇಕಾದ ಮಾಹಿತಿ ತೆಗೆದುಕೊಳ್ಳಬಹುದು. ಲೇಖನಗಳನ್ನು, ಪತ್ರಿಕೆ ಗಳನ್ನು, ಕವನಗಳನ್ನು, ಓದಬಹುದು ಮತ್ತು ಪ್ರಕಟಿಸಬಹುದು. ಕಥೆ, ವಚನ, ಪ್ರಬಂಧ, ಭಾಷಣ, ಇತ್ಯಾದಿಗಳನ್ನು ಕನ್ನಡ ಭಾಷೆಯಲ್ಲಿ ಪಡೆಯುವ ಸೌಲಭ್ಯವನ್ನು ಅಂತರ್ಜಾಲದಲ್ಲಿ ಕಾಣುತ್ತೇವೆ. ಒಂದೇ ಸ್ಥಳದಲ್ಲಿ ಕೂತು ಇಡೀ ಪ್ರಪಂಚದಲ್ಲಿನ ವ್ಯವಹಾರದ ಬಗ್ಗೆ ಕನ್ನಡದಲ್ಲಿಯೂ ತಿಳಿದುಕೊಳ್ಳಬಹುದು.

ಇಂಗ್ಲೀಷ್ ಬಳಕೆಯಲ್ಲಿದ್ದಾಗ ಗಣಕ ಯಂತ್ರದ ಕಡೆ ತಿರುಗಿ ನೋಡುವುದು ವಿರಳವಾಗಿತ್ತು. ಆದರೆ ಈಗ ಕನ್ನಡ ಕಸ್ತೂರಿಯ ಕಂಪು ಗಣಕ ಯಂತ್ರದಲ್ಲಿ ರಾರಾಜಿಸುತ್ತಿದೆ. ಅದೇ ಮಾಹಿತಿಯನ್ನು ಗಣಕ ಯಂತ್ರದಲ್ಲಿ ಉಳಿಸಿಕೊಂಡು ಯಾವಾಗ ಬೇಕಾದರೂ ತೆರೆದು ನೋಡಿಕೊಳ್ಳಬಹುದು. ಅಂತರ್ಜಾಲದಲ್ಲಿ ಕ ಎಂಬ ಅಕ್ಷರಕ್ಕೆ ಇಂಗ್ಲೀಷ್‌ನಲ್ಲಿ **k** ಟೈಪ್ ಮಾಡಿದರೆ ಸಾಕು. **k** ಅಕ್ಷರದಿಂದ ಪ್ರಾರಂಭವಾಗುವ ಮಾಹಿತಿಗಳು ಗೂಗಲ್‌ನ ತೆರೆಯ ಮೇಲೆ ಕಾಣಿಸುತ್ತದೆ. 'ಕವಿತೆ' ಇದು 'ಕ' ಅಕ್ಷರದಿಂದ ಪ್ರಾರಂಭವಾಗುತ್ತದೆ. ಆಂಗ್ಲದಲ್ಲಿ **kavithe** ಎಂದು ಟೈಪ್ ಮಾಡಿದರೆ, ಹಲವಾರು ಮಾಹಿತಿ ತಾಣಗಳು ಕಾಣಿಸುತ್ತವೆ. ಆಗ ಯಾವುದು ಬೇಕೋ ಅದನ್ನು ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಪಡೆದುಕೊಳ್ಳಬಹುದು.

"**Lekhanagalu** ಎಂದು ನಮೂದಿಸಿದರೆ ವಿವಿಧ ಲೇಖಕರ ವಿವಿಧ ವಿಷಯಗಳ ಲೇಖನಗಳು ಅಂಕಣಗಳ ಮಾದರಿಯಲ್ಲಿ ಓದಲು ಸಿಗುತ್ತದೆ. ಲೇಖನಗಳಿಗೆ ಪ್ರತಿ ಉತ್ತರ ನೀಡಲು ಅವಕಾಶವೂ ಇದೆ. ಕನ್ನಡ ಭಾಷೆಯಲ್ಲಿ ಲೇಖನಗಳನ್ನು ಬರೆಯುವವರಿಗೆ, ಅದನ್ನು ಪ್ರಕಟ ಮಾಡಲು ಅಂತರ್ಜಾಲ ಮಾಧ್ಯಮವಾಗಿದೆ. ಅದನ್ನು ಟೈಪ್ ಮಾಡಲು ನುಡಿ ಮತ್ತು ಬರಹಗಳು ಸಹಾಯಕವಾಗಿವೆ. ಇವುಗಳ ಮೂಲಕ ವಿಶ್ವದ ಮೂಲೆ ಮೂಲೆಯಲ್ಲಿನ ಕನ್ನಡಾಭಿಮಾನಿಗಳಿಗೆ ತಲುಪಬಹುದು."[3] ಎಂದು ನಂಬಲಾಗಿದೆ.

ಅಂತರ್ಜಾಲದಲ್ಲಿ ಕನ್ನಡ ಭಾಷೆ ಬಳಕೆಯಲ್ಲಿರುವುದರಿಂದ ಶಾಲೆಗಳಲ್ಲಿ ಶಿಕ್ಷಕರು ನೀಡುವ ಕೆಲವು ಪ್ರಾಯೋಗಿಕ ಚಟುವಟಿಕೆಗಳಿಗೆ ನೆರವಾಗುತ್ತದೆ. ವಿದ್ಯಾರ್ಥಿಗಳು ಅಂತರ್ಜಾಲದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪಡೆದುಕೊಂಡು ತಮ್ಮ ಚಟುವಟಿಕೆಗಳನ್ನು ನಿರ್ವಹಿಸುತ್ತಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ಕನ್ನಡದ ಅಭಿರುಚಿ ಹೆಚ್ಚಾಗುತ್ತದೆ. ಕನ್ನಡ ಭಾಷೆಯ ಬೆಳವಣಿಗೆ ಸಹ ಆಗುತ್ತದೆ. ಶಿಕ್ಷಕರು ಕನ್ನಡದ ಪ್ರಖ್ಯಾತ ಕವಿಗಳು ಎಂಬ ವಿಷಯವನ್ನು ಪ್ರಾಯೋಗಿಕ ಚಟುವಟಿಕೆ ನೀಡಿದರೆ, ವಿದ್ಯಾರ್ಥಿಗಳು ಗೂಗಲ್‌ಗೆ ಹೋಗಿ ಕವಿಗಳು ಎಂದು ನಮೂದಿಸಿದರೆ, ಅದಕ್ಕೆ ಸಂಬಂಧಿಸಿದ ಮಾಹಿತಿಗಳು ತೆರೆಯ ಮೇಲೆ ಲಭ್ಯವಾಗುತ್ತವೆ. ಕೇವಲ ಅದೊಂದೆ ಪ್ರಾಯೋಗಿಕ ಚಟುವಟಿಕೆಯಿಂದ ಹಲವಾರು ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಜ್ಞಾನವನ್ನು ಪಡೆದುಕೊಳ್ಳುತ್ತಾರೆ.

ಅಂತರ್ಜಾಲದಲ್ಲಿ ಕನ್ನಡ ಭಾಷೆಯ ಪದಗಳು ಸಾಗರದಂತೆ ತುಂಬುತ್ತಿವೆ. ಇಂದು ಅಂತರ್ಜಾಲ ನಿಘಂಟಿಗೆ ಯಾರು ಬೇಕಾದರೂ ಕನ್ನಡ ಪದ ಸೇರಿಸಬಹುದು. ಪ್ರತಿಯೊಂದು ಪದಕ್ಕೂ ಅನೇಕ ಮಾಹಿತಿಗಳನ್ನು ಜೋಡಿಸಬಹುದು. ಪ್ರತಿ ಪದಕ್ಕೂ ಯಾವ ಭಾಷೆಯಲ್ಲಿ ಬೇಕಾದರೂ ಅರ್ಥ

ನೀಡಬಹುದು. ಅಂದರೆ ಒಂದು ಕನ್ನಡ ಪದಕ್ಕೆ ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿ ಏನಂತಾರೆ ಅಂತ ಬರೀಬಹುದು.

ಮುಂದಿನ ದಿನಗಳಲ್ಲಿ ನಮ್ಮ ಅಂತರ್ಜಾಲದ ಮೇಲಿನ ಅವಲಂಬನೆ ಹೆಚ್ಚಾಗುವ ಸಾಧ್ಯತೆಗಳಿದ್ದು, ಇಂತಹ ಅಂತರ್ಜಾಲ ನಿಘಂಟಿನ ಪಾತ್ರ ಮಹತ್ವದ್ದಾಗಲಿದೆ. ಆ ದೃಷ್ಟಿಯಿಂದ ನೋಡಿದಾಗ ಅಂತರ್ಜಾಲ ನಿಘಂಟಿನಲ್ಲಿ ಕನ್ನಡ ಪದಗಳು ಹೆಚ್ಚು ಹೆಚ್ಚು ಸಂಗ್ರಹಗೊಳ್ಳಬೇಕಾದ ಅಗತ್ಯವಿದೆ. ಸುಮಾರು ಒಂದು ವರ್ಷದ ಹಿಂದೆ ಕನ್ನಡ ಡಿಕ್ಷನರಿಯಲ್ಲಿ ಇದ್ದ ಪದಗಳ ಮೊತ್ತ ಮುನ್ನೂರಕ್ಕಿಂತ ಕಡಮೆ. ಈ ಸಂದರ್ಭದಲ್ಲಿ ಬನವಾಸಿ ಬಳಗವು ಕನ್ನಡ ಡಿಕ್ಷನರಿಯನ್ನು ಬಲಗೊಳಿಸುವ ಕೆಲಸಕ್ಕೆ ಕೈ ಹಾಕಿತು. ಸಮಾನ ಮನಸ್ಕರನ್ನು ಒಗ್ಗೂಡಿಸುವ, ಅಗತ್ಯ ಇರುವವರಿಗೆ ಮಾರ್ಗದರ್ಶನ ಮತ್ತು ತರಬೇತಿ ನೀಡುವ, ಡಿಕ್ಷನರಿಯಲ್ಲಿ ಪದಗಳನ್ನು ತುಂಬುವ ಯೋಜನೆಯನ್ನು ರೂಪಿಸಿತು. ಕನ್ನಡಮ್ಮನ ಕೈಂಕರ್ಯಕ್ಕೆ ಕಂದಮ್ಮಗಳ ಕೊರತೆಯಾಗಿ ಹತ್ತಾರು ಆಸಕ್ತರು ಈ ಕೆಲಸದಲ್ಲಿ ಕೈ ಜೋಡಿಸಿದರು. ಈ ಎಲ್ಲರ ಶ್ರಮದ ಫಲವಾಗಿ ಇಂದು ಡಿಕ್ಷನರಿಯಲ್ಲಿ ಸುಮಾರು ಅರವತ್ತಾರು ಸಾವಿರದ ನೂರಾ ನಲವತ್ನಾಲ್ಕು ಪದಗಳಿವೆ.

ಸಂಖ್ಯಾ ಬಲದಲ್ಲಿ ಕನ್ನಡವು ಜೂನ್ ೨೦೦೯ರಲ್ಲಿ ಭಾರತೀಯ ಭಾಷೆಗಳ ಪಟ್ಟಿಯಲ್ಲಿ ಕೊಟ್ಟ ಕೊನೆಯಲ್ಲಿತ್ತು. ಇದೀಗ ಎರಡನೇ ಸ್ಥಾನಕ್ಕೇರಿದೆ. ಅತಿ ಹೆಚ್ಚು ಪದಗಳನ್ನು ಹೊಂದಿರುವ ಭಾರತೀಯ ಭಾಷೆ ತಮಿಳು. ಇದರಲ್ಲಿ ಒಂದು ಲಕ್ಷದ ಹತ್ತೊಂಬತ್ತು ಸಾವಿರದ ಎಂಟು ನೂರಾ ಎಪ್ಪತ್ತೈದು (೧,೧೯,೮೭೫) ಪದಗಳಿವೆ. ಕನ್ನಡದ ನಂತರದ ಸ್ಥಾನ ಮಲೆಯಾಳಂನದು. ಇದರಲ್ಲಿ ೫೯,೯೫೯ ಪದಗಳಿವೆ. ನಂತರದ್ದು ತೆಲುಗಿನದು. ಇದರಲ್ಲಿ ಒಟ್ಟು ೩೪,೭೨೪ ಪದಗಳಿವೆ. ಇಡೀ ವಿಶ್ವದಲ್ಲಿರೋ ಭಾಷೆಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡರೆ ಕನ್ನಡ ಭಾಷೆಯ ಸ್ಥಾನ ೨೧ನೆಯದು.

ಅಂತರ್ಜಾಲ ತಾಣದಲ್ಲಿ ಕನ್ನಡದ ನುಡಿ ಗುಡಿಯ ಈ ತೇರನ್ನು ಎಳೆಯಲು ಲಕ್ಷ ಲಕ್ಷ ಕನ್ನಡಿಗರ ಸಂಖ್ಯೆ ಅಂತರ್ಜಾಲದಲ್ಲಿ ಹೆಚ್ಚುತ್ತಿದೆ. ಕನ್ನಡ ಭಾಷೆಯಲ್ಲದೆ ಮಲೆಯಾಳಂ, ಗುಜರಾತ್, ಪಂಜಾಬ್ ಮುಂತಾದ ಭಾಷೆಗಳನ್ನು ಅಂತರ್ಜಾಲದಲ್ಲಿ ಬಳಸಬಹುದು. ಕಣ್ಣ ಮುಂದೆ ಇಡೀ ಜಾಲದಲ್ಲಿ ಅಳವಡಿಸಲಾಗಿರುವ ಮಾಹಿತಿಯನ್ನು ಹಾಗೂ ಕನ್ನಡ ಭಾಷೆಗೆ ಸಂಬಂಧಿಸಿದ ಹಲವಾರು ಬರವಣಿಗೆಗಳನ್ನು ಸಹ ಈ ಅಂತರ್ಜಾಲದಲ್ಲಿ ತಿಳಿಯಬಹುದು. ಸಾಹಿತ್ಯ – ಕಥೆ – ಖಂಬರಿಗಳನ್ನು ಸಹ ಕನ್ನಡ ಭಾಷೆಯ ಸಹಾಯದಿಂದ ಪಡೆಯಬಹುದು. ಅಂತರ್ಜಾಲದಲ್ಲಿ ಕನ್ನಡ ಭಾಷೆಯನ್ನು ಇಂದು ಇಮೇಲ್‌ಗಳಿಂದ ಫೇಸ್‌ಬುಕ್‌ಗಳವರೆಗೂ ಬಳಸುತ್ತಿರುವುದನ್ನು ಗಮನಿಸಬಹುದು. ರಾಜ್ಯದಲ್ಲಿರುವ ಕನ್ನಡಿಗರಲ್ಲದೆ ಬೇರೆ ರಾಜ್ಯಗಳ ಕನ್ನಡಿಗರು, ಬೇರೆ ದೇಶದಲ್ಲಿ ನೆಲೆಸಿರುವ ಕನ್ನಡಿಗರು, ಕನ್ನಡ

ಭಾಷೆಯನ್ನು ಅಂತರ್ಜಾಲದಲ್ಲಿ ಬಳಸುತ್ತಿದ್ದಾರೆ ಎಂಬುದಕ್ಕೆ ಇ ಮೇಲ್ ಮತ್ತು ಫೇಸ್‌ಬುಕ್‌ಗಳು ಸಾಕ್ಷಿಯಾಗಿವೆ.

ಅಂತರ್ಜಾಲದಲ್ಲಿ ಗೆಳೆತನ, ನಂಟು, ಬೆಸೆಯುವ ಸಾಮಾಜಿಕ ಸಂಪರ್ಕ ತಾಣಗಳಲ್ಲಿ ಮುಂಚೂಣಿಯಲ್ಲಿರೋದು ಫೇಸ್‌ಬುಕ್ ಆಗಿದೆ. ಇನ್ನೂ ಹೆಚ್ಚು ಜನರನ್ನು ತಲುಪಲು ತನ್ನ ಸೇವೆಯನ್ನು "ಜಗತ್ತಿನ ೭೫ಕ್ಕು ಹೆಚ್ಚು ಭಾಷೆಗಳಿಗೆ ಫೇಸ್‌ಬುಕ್ ವಿಸ್ತರಿಸಿದೆ. ಅದರಲ್ಲಿ ಕನ್ನಡ ಭಾಷೆಯು ಅಗ್ರಸ್ಥಾನವನ್ನು ಪಡೆದಿದೆ. ಈ ಭಾಷೆಗಳ ಪಟ್ಟಿಯಲ್ಲಿ ಭಾರತದ ೬ ಭಾಷೆಗಳಿವೆ. ಕನ್ನಡಕ್ಕಿಂತಲು ಕಡಿಮೆ ಜನ ಮಾತಾಡೋ ಮಲೆಯಾಳಂ, ಪಂಜಾಬ್‌ಗಳಲ್ಲೂ ಈ ತಾಣ ಲಭ್ಯವಿದೆ. ಅದೆಲ್ಲ ಬಿಡಿ. ಬರೀ ೩ ಲಕ್ಷ ೨೦ ಸಾವಿರ ಜನ ಮಾತಾಡೋ ವಸ್ ಲ್ಯಾಂಡ್ ದೇಶದ ಇಸಲೆನಸ್ಕಾ ಭಾಷೆಯಲ್ಲಿ ಫೇಸ್ ಬುಕ್ ಇದೆ."[೪] ಮುಂದೊಂದು ದಿನ ಈಗಿನ ಸಾಂಪ್ರದಾಯಿಕ ಬರವಣಿಗೆ ನಶಿಸಿ, ಕಂಪ್ಯೂಟರ್ ಬರವಣಿಗೆಯನ್ನು ಮಾಡುವ, ಓದುವ ಶಿಕ್ಷಣ ಬರಬಹುದು.

ಅಡಿಟಿಪ್ಪಣಿಗಳು

೧. ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನದ ಬೆಳವಣಿಗೆ – ಡಾ. ಯು. ಬಿ. ಪವನಜ, ಅಂತರ್ಜಾಲದಲ್ಲಿನ ಲೇಖನ

೨. ಗೂಗಲ್ ಡಾಟ್ ಕಾಮ್ ಅಂತರ್ಜಾಲ ತಾಣ

೩. ಹಸ್ತಪ್ರತಿ ವ್ಯಾಸಂಗ, ಕಂಪ್ಯೂಟರ್ ಮತ್ತು ಕನ್ನಡಾಭಿವೃದ್ಧಿ – ಶಂಕರ್ ಅಜ್ಜಂಪುರ, ೨೦೦೨

೪. ಗೂಗಲ್ ಯಂತ್ರವನ್ನು ಓಲೈಸುವುದು ಹೇಗೆ? – ಗೌತಮ್ ಅಮೇರಿಕ, ಅಂತರ್ಜಾಲದಲ್ಲಿನ ಲೇಖನ

ಅಧ್ಯಾಯ – ೪

ಅಂತರ್ಜಾಲದಲ್ಲಿ ಕನ್ನಡ ತಾಣಗಳು ಹಾಗೂ ಕನ್ನಡ ಬ್ಲಾಗುಗಳು

ಅಧ್ಯಾಯ – ೪
ಅಂತರ್ಜಾಲದಲ್ಲಿ ಕನ್ನಡ ತಾಣಗಳು ಹಾಗೂ ಕನ್ನಡ ಬ್ಲಾಗುಗಳು

ಅಂತರ್ಜಾಲದಲ್ಲಿ ಕನ್ನಡ ತಾಣಗಳು ಹಾಗೂ ಬ್ಲಾಗ್‌ಗಳ ಇತಿಹಾಸವು ಬಹಳ ಕಿರಿದು. ಅದಕ್ಕೆ ಒಂದೆರಡು ದಶಕಗಳ ಇತಿಹಾಸವಿದೆಯಷ್ಟೆ. ಆದರೂ ಕನ್ನಡ ತಾಣಗಳು ಅಲ್ಪಾವಧಿಯಲ್ಲೇ ಜನರ ಮೆಚ್ಚುಗೆ ಪಡೆದಿವೆ. ವಿಶ್ವದ ಮಾಹಿತಿಯನ್ನು ಕ್ಷಣಾರ್ಧದಲ್ಲಿ ನಮ್ಮ ಕಣ್ಣ ಮುಂದೆ ತರಿಸುವ ಪ್ರಯತ್ನ ಈ ತಾಣಗಳದ್ದಾಗಿದೆ. ಮಾಹಿತಿಯನ್ನು ಅಂತರ್ಜಾಲದಲ್ಲಿ ಯಾವಾಗ ಬೇಕಾದರೂ ತೆರೆದು ಓದಬಹುದು. ಈ ತಾಣಗಳಿಂದ ನಮಗೆ ಬೇಕಾದ ಮಾಹಿತಿ ಪಡೆಯಬಹುದು. ಇದು ಕನ್ನಡ ಭಾಷೆಯಲ್ಲಿ ಲಭ್ಯವಿರುವುದರಿಂದ ಇತ್ತೀಚಿನ ದಿನಗಳಲ್ಲಿ ಅಂತರ್ಜಾಲ ಬಳಸಲು ಸರಳವಾಗುತ್ತಿದೆ. ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

೧) **ಪ್ರಮುಖ ಕನ್ನಡ ತಾಣಗಳು** : ಸಂಪದ, ಕನ್ನಡ ವಿಕಿಪೀಡಿಯ, ಸುಮ್ನೆ ಆನ್ ಲೈನ್, ವಿಸ್ಮಯ ನಗರಿ, ಗೆಳತಿ, ಕನ್ನಡ ಧ್ವನಿ, ಕನ್ನಡ ಕವಿ, ಕನ್ನಡ ಸಾಹಿತ್ಯ ಡಾಟ್ ಕಾಂ, ಕೆಂಡ ಸಂಪಿಗೆ, ದಿ ಸಂಡೆ, ಇಂತಿ ಕನ್ನಡ – ಕನ್ನಡಿ, ಕನ್ನಡ ಕಾರ್ಟೂನ್ಸ್, ಕನ್ನಡ ಸಾರತಿ, ಕನ್ನಡವೆ ಸತ್ಯ, ಕನಸಿನ ಕಡಲು ಮುಂತಾದವು. ಇವುಗಳಲ್ಲಿ ಲೇಖನಗಳನ್ನು, ವಿವಿಧ ವಿಚಾರಗಳನ್ನು ತಿಳಿಯಬಹುದು.

೨) **ಕನ್ನಡ ಸುದ್ದಿ ತಾಣಗಳು** : ಸಿಹಿ ಕನ್ನಡ, ಕನ್ನಡಪ್ರಭ, ಪ್ರಜಾವಾಣಿ, ವಿಜಯವಾಣಿ, ಉದಯವಾಣಿ, ಈ ಸಂಜೆ, ಸಂಜೆವಾಣಿ, ವಿಜಯ ಕರ್ನಾಟಕ."[೧]

೩) **ಕನ್ನಡದ ಸಂಘಟನೆಗಳು** : ಅವಿರತ, ಇಂಡಿಯಾ ವಾಟರ್, ಪೋರ್ಟರ್, ಕನ್ನಡ ಗಣಕ ಪರಿಷತ್, ಕನ್ನಡ ರಕ್ಷಣ ವೇದಿಕೆ, ಸಾಹಿತ್ಯ ಗೋಷ.

೪) **ಪೋರ್ಟಲ್‌ಗಳು** : ಯಾಹೂ ಕನ್ನಡ, ಎಂ.ಎಸ್.ಎನ್. ಕನ್ನಡ, ವೆಬ್ ದುನಿಯಾ ಕನ್ನಡ, ದಟ್ಸ ಕನ್ನಡ, ಅರಿವು, ಬಾನುಲಿ, ಗಲ್ಫ್ ಕನ್ನಡಿಗ, ಇಬ್ಬನಿ, ಕನ್ನಡರತ್ನ, ನಮ್ಮ ಕರ್ನಾಟಕ, ಪ್ರಕಾಶಕ, ಉಡುಪಿ ಆನ್ ಲೈನ್.

೫) **ದ್ವಿಭಾಷಾ ತಾಣಗಳು** : ಮಿತ್ರ ಮಾಧ್ಯಮ, ಕನ್ನಡ ಸಂಗೀತ, ಪ್ಲಾನೇಟ್ ಕನ್ನಡ, ಸಾಹಿತ್ಯಾಂಜಲಿ, ಬಿಗ್ಗಿಕಾಂ, ಕರ್ನಾಟಕ ಡಯಾಸ್ಪೋರಾ, ಕನ್ನಡ ವಿಶ್ವವಿದ್ಯಾಲಯ, ಸುಗಮ ಕನ್ನಡ, ಬುಕ್ಸ್ ಯುರೋಪ್, ಬೆಳಕು, ಬೆಂಗಳೂರು ವೇದಿಕೆ, ವಿಶ್ವಕನ್ನಡ, ಕನ್ನಡ ಗ್ರೀಟಿಂಗ್ಸ್, ಕುವೆಂಪು ಡಾಟ್ ಕಾಂ."[೨]

೬) ಆಂಗ್ಲ ಭಾಷೆಯ ತಾಣಗಳು : ಚಿತ್ರಲೋಕ, ಕನ್ನಡ ಕಸ್ತೂರಿ, ಕನ್ನಡ ಆಡಿಯೋ, ಕನ್ನಡ ಆಡಿಯೋ ನೆಟ್, ಕನ್ನಡ ಮ್ಯೂಸಿಕ್ ವರ್ಲ್ಡ್.

ಇನ್ನು ಮುಂತಾದ ತಾಣಗಳನ್ನು ಅಂತರ್ಜಾಲದಲ್ಲಿ ಕಾಣುತ್ತೇವೆ.

ಅಂತರ್ಜಾಲದಲ್ಲಿ ಕನ್ನಡದ ಅಂತರ್ಜಾಲ ತಾಣಗಳು, ಚರ್ಚಾ ವೇದಿಕೆಗಳು, ಕನ್ನಡದಲ್ಲಿಯೇ ಇ ಮೇಲ್, ಯಾಹೂ, ಗೂಗಲ್ ಮೆಸೆಂಜರ್‌ಗಳಲ್ಲಿ ಕನ್ನಡದಲ್ಲಿಯೆ ಮಾತುಕತೆ ನಡೆಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಕನ್ನಡ, ಕರ್ನಾಟಕ, ಕನ್ನಡಿಗರ ಪಾಲಿಗೆ ಸೇರುತ್ತಿರುವ ಇನ್ನೊಂದು ವರ್ಗವೆಂದರೆ ಮುದ್ರಿತ ಅವತರಣಿಕೆಯನ್ನೆ ಅಂತರ್ಜಾಲದಲ್ಲಿ ಲಭ್ಯಗೊಳಿಸುತ್ತಿರುವ ದಿನಪತ್ರಿಕೆಗಳು. ಅವುಗಳನ್ನು ಓದಲು ಹಣ ಕೊಡಬೇಕಾದ ತಗಾದೆ ಈಗಿಲ್ಲ. ಅಂತರ್ಜಾಲದಲ್ಲೇ ಎಲ್ಲ ಪತ್ರಿಕೆಗಳನ್ನು ಓದುವ ಸೌಲಭ್ಯವಿದೆ. ಹಿಂದೆ ಅಂತರ್ಜಾಲ ಆವೃತ್ತಿಯಲ್ಲಿ ಲೇಖನಗಳು ಸಿಗುತ್ತಿತ್ತೇ ಹೊರತು ಪತ್ರಿಕೆಯ ಪುಟಗಳು ತಿರುವಿಹಾಕಿದ ಅನುಭವವಾಗುತ್ತಿರಲಿಲ್ಲ. ಒಂದು ಪುಟವೂ ಬಿಡದೆ ಓದುವವರಿಗಂತೂ ಏನೇನೂ ಸಿಗುತ್ತಿಲ್ಲವೇನೋ ಎಂಬ ಅನುಭವ. ಆದರೆ ಈಗ ಹಾಗಿಲ್ಲ. ಕನ್ನಡದ ಪ್ರಮುಖ ಪತ್ರಿಕೆ ಗಳನ್ನು, ಲೇಖನಗಳನ್ನು ಲೀಲಾಜಾಲವಾಗಿ ಮುದ್ರಿತ ಅವತರಣಿಕೆಯಲ್ಲೇ ಓದಬಹುದು.

ಬ್ಲಾಗ್ ಎಂದರೆ : ಬ್ಲಾಗ್ ಎಲ್ಲರಿಗೂ ಓದಲು ಅನುಕೂಲವಾಗುವಂತೆ ಅಂತರ್ಜಾಲದಲ್ಲಿ ಇಟ್ಟಂತಹ ತೆರೆದ ದಿನಚರಿ ಅಥವಾ ಡೈರಿ. ಬ್ಲಾಗ್ ಎಂದರೆ ಮತ್ತೊಂದು ರೀತಿಯಲ್ಲಿ ಸಾರ್ವಜನಿಕ ಸ್ವಾಗತ ಎನ್ನಬಹುದು. ಬ್ಲಾಗ್‌ನ ಕ್ರಿಯಾ ರೂಪವೇ ಬ್ಲಾಗಿಂಗ್. ಅಂದರೆ ಬ್ಲಾಗ್ ನಡೆಸುವ ಕ್ರಿಯೆ. ಬ್ಲಾಗ್ ಬರೆಯುವ ವ್ಯಕ್ತಿಯನ್ನು ಬ್ಲಾಗರ್ ಎಂದು ಕರೆಯುತ್ತಾರೆ.

'ಬ್ಲಾಗ್' ಎಂಬ ಪದವು ವೆಬ್‌ಲಾಗ್ ಎನ್ನುವ ಪದದಿಂದ ಉತ್ಪತ್ತಿಯಾಗಿದೆ. ಇದನ್ನು ಮೊತ್ತ ಮೊದಲು ಜಾನ್ ಬಾರ್ಗರ್ ಎಂಬುವವರು ೧೯೯೭ರಲ್ಲಿ ಬಳಸಿದರು. ಪೀಟರ್ ಮರ್ಹೋಲ್ಜ್ ಅವರು ೧೯೯೯ರಲ್ಲಿ ಇದನ್ನು ವಿ ಬ್ಲಾಗ್ ಎಂಬುದಾಗಿ ವಿಭಜಿಸಿದರು. ಬ್ಲಾಗ್ ಎನ್ನುವುದು ನಾಮಪದ ಮತ್ತು ಕ್ರಿಯಾಪದವಾಗಿ ಬಳಕೆಯಾಗತೊಡಗಿತು. ನಂತರ ನಾವು ಬ್ಲಾಗ್ ಮಾಡುತ್ತಿದ್ದೇವೆ. ೨೦೦೧ರ ನಂತರ ಬ್ಲಾಗ್ ಜನಪ್ರಿಯವಾಗ ತೊಡಗಿತಾದರೂ ೨೦೦೩ ರಲ್ಲಿ ಹಲವು ಉಚಿತ ಬ್ಲಾಗಿಂಗ್ ತಾಣಗಳು ಅವತರಿಸಿ ಬ್ಲಾಗಿಂಗ್ ಇತ್ತೀಚಿನ ದಿನಗಳಲ್ಲಿ ಮನೆ ಮಾತಾಗಿ ಮುಂದುವರೆದಿದೆ.

ಬ್ಲಾಗ್‌ನ ಲಕ್ಷಣಗಳು : ನಿಯಮಿತವಾಗಿ ಹೊಸ ಬರವಣಿಗೆಗಳನ್ನು ಸೇರಿಸುತ್ತಿರಬೇಕು. ಅವು ಗಳನ್ನು ಸೇರಿಸಿದ ದಿನಾಂಕ ಪ್ರಕಾರ ಅಳವಡಿಸಿರಬೇಕು. ಕೊನೆಯ ಬರವಣಿಗೆ ಮೊದಲು ಲಭ್ಯವಾಗಿ ರುವಂತಿರುತ್ತದೆ. ಬ್ಲಾಗ್‌ನಲ್ಲಿ ಸೇರಿಸಲ್ಪಡುವ ಲೇಖನಕ್ಕೆ ಪೋಸ್ಟ್ ಅಥವಾ ಪೋಸ್ಟಿಂಗ್ ಎನ್ನುತ್ತಾರೆ. ಈ

ಪೋಸ್ಟಿಂಗ್‌ಗೆ ಒಂದು ಶೀರ್ಷಿಕೆ, ಸೇರಿಸಿದ ದಿನಾಂಕ, ಮುಖ್ಯ ಬರಹ ಅಥವಾ ಲೇಖನ, ವಿಷಯ ಇತ್ಯಾದಿ ಲಕ್ಷಣಗಳಿರುತ್ತದೆ.

ಈ ಪೋಸ್ಟಿಂಗ್ ಕೆಳಗೆ ಓದುಗರು ತಮ್ಮ ಟೀಕೆ ಟಿಪ್ಪಣಿ ಸೇರಿಸುವ ಸೌಲಭ್ಯವಿದೆ. ಇಷ್ಟಲ್ಲದೆ ಈ ಬ್ಲಾಗ್‌ಗಳಿಗೆ ಆರ್.ಎಸ್.ಎಸ್. ಸೌಲಭ್ಯವಿದೆ. ಆರ್.ಎಸ್.ಎಸ್. ಎಂದರೆ ರಿಯಲಿ ಸಿಂಪಲ್ ಸಿಂಟಿಕೇಶನ್.ಆರ್.ಎಸ್.ಎಸ್.ರೀಡರ್ ಎಂಬ ಹೆಸರಿನ ತಂತ್ರಾಂಶವನ್ನು ಗಣಕಗಳಲ್ಲಿ ಅಳವಡಿಸಿಕೊಂಡರೆ, ಈ ಬ್ಲಾಗ್‌ಗಳನ್ನು ಗಣಕಕ್ಕೆ ವಿ ಅಂಚೆಗಳನ್ನು ಇಳಿಸಿಕೊಂಡು ಅಂತರ್ಜಾಲ ಸಂಪರ್ಕ ಕಡಿದ ಮೇಲೂ ಓದಬಹುದು. ಬ್ಲಾಗ್ ಸುಲಭವಾಗಿ ಹೊಸ ಪುಟವನ್ನು ಸೇರಿಸುವ ಸೌಲಭ್ಯ ಹೊಂದಿದೆ. ಮಾಮೂಲಿ ಅಂತರ್‌ಜಾಲ ತಾಣಗಳಿಗೆ ಈ ಸೌಲಭ್ಯವಿರುವುದಿಲ್ಲ. ಹೊಸ ಪೋಸ್ಟಿಂಗ್ ಸಾಮಾನ್ಯವಾಗಿ ಪುಟದ ಮೇಲೆ ತೋರುತ್ತದೆ. ಇನ್ನೊಂದು ಹೊಸ ಪೋಸ್ಟಿಂಗ್ ಬಂದಾಗ ಹಳೆಯ ಪೋಸ್ಟಿಂಗ್ ತಂತಾನೆ ಕೆಳಗೆ ತಳ್ಳಲ್ಪಡುತ್ತದೆ. ಟೀಕೆಯ ಕೆಳಗೆ ಇತರೆ ಓದುಗರು ಟೀಕೆಗೆ ಟೀಕೆ ಸೇರಿಸಬಹುದು. ಕೆಲವೊಮ್ಮೆ ಈ ಸರಪಣಿ ದೊಡ್ಡ ಚರ್ಚೆ ಅಥವಾ ವಾಗ್ವಾದವಾಗುವುದೂ ಇದೆ. ಎಲ್ಲ ಅಂತರ್‌ಜಾಲ ತಾಣಗಳಿಗಿರುವಂತೆ ಬ್ಲಾಗ್‌ಗಳಿಗೂ ಇತರೆ ಬ್ಲಾಗ್‌ಗಳಿಗೆ ಕೊಂಡಿ ನೀಡುವ ಸೌಲಭ್ಯವಿದೆ. ಸರಳವಾಗಿ ಹೇಳಬೇಕೆಂದರೆ ಬ್ಲಾಗ್ ಒಬ್ಬ ವ್ಯಕ್ತಿಯ ವೈಯಕ್ತಿಕ ಅನಿಸಿಕೆಗಳನ್ನು ಜಗತ್ತಿಗೆಲ್ಲ ತಿಳಿಯುವಂತೆ ಸಾರ್ವಜನಿಕವಾಗಿ ಬರೆಯುವ ವ್ಯವಸ್ಥೆ.

"ಪರಿಣಿತರಾದ ತಂತ್ರಜ್ಞರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಆಗುತ್ತಿರುವ ಹೊಸ ಸಂಶೋಧನೆಗಳ ಬಗ್ಗೆ ಪೂರ್ವಭಾವಿಯಾಗಿ ಬ್ಲಾಗ್ ಬರೆಯುವ ಮೂಲಕ ಈ ವಿಷಯಗಳಲ್ಲಿ ಆಸಕ್ತಿ ಇರುವವರಿಗೆ ಬೇಗನೆ ಮಾಹಿತಿ ಸಿಗುವಂತಾಗುತ್ತದೆ. ಉದಾ: ಮೈಕ್ರೋಸಾಫ್ಟ್ ಕಂಪನಿಯ ಹಲವು ಉದ್ಯೋಗಿಗಳು ಮುಂಬರುವ ತಂತ್ರಾಂಶಗಳ ಬಗ್ಗೆ ಬ್ಲಾಗಿಂಗ್ ಮಾಡುತ್ತಾರೆ. ಅಷ್ಟು ಮಾತ್ರವಲ್ಲ. ಈಗಿರುವ ತಂತ್ರಾಂಶಗಳ ಬಗ್ಗೆ ಸಲಹೆ ನೀಡುತ್ತಾರೆ. ಕೆಲವೊಮ್ಮೆ ಯಾವುದೇ ಗ್ರಾಹಕ ಕೈಪಿಡಿಯಲ್ಲಿ ಸಿಗದ ಮಾಹಿತಿ ಇಂತಹ ಬ್ಲಾಗ್‌ಗಳಲ್ಲಿ ದೊರೆಯುತ್ತದೆ. ಕೆಲವು ತಂತ್ರಜ್ಞರು ತಮ್ಮ ಕ್ಷೇತ್ರದಲ್ಲಿಯ ಕೆಲವು ಉಪಯುಕ್ತ ಸಲಹೆ, ಕಿವಿಮಾತುಗಳನ್ನು ತಮ್ಮ ಬ್ಲಾಗ್‌ಗಳಲ್ಲಿ ನೀಡುತ್ತಿರುತ್ತಾರೆ. ಆದುದರಿಂದ ಎಲ್ಲಾ ಬ್ಲಾಗ್‌ಗಳನ್ನು ಕೆಲಸವಿಲ್ಲದವರ ಗಾಳಹೂಡಿಕೆ ಎಂದು ತುಚ್ಛೀಕರಿಸುವಂತಿಲ್ಲ."[೩]

ಕನ್ನಡ ಬ್ಲಾಗ್‌ಗಳು : "ಕರ್ನಾಟಕ ಸರ್ಕಾರದ ಕರ್ನಾಟಕ ಜ್ಞಾನ ಆಯೋಗವು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಹಕಾರದೊಂದಿಗೆ 'ಕಣಜ' ಯೋಜನೆಯನ್ನು ಪರಿಕಲ್ಪಿಸಿ, ರೂಪಿ ಸಿದ್ದು, ಇಂಟರ್ ನ್ಯಾಷನಲ್ ಇನ್ಸಿಟ್ಯೂಟ್ ಅಫ್ ಇನ್ಫರ್‌ಮೇಷನ್

ಟೆಕ್ನಾಲಜಿ, ಬೆಂಗಳೂರು ಇವರು ಜಾರಿಗೊಳಿಸಿದ್ದಾರೆ. ಕಣಜ ತಾಣವನ್ನು ನಿದರ್ಶನವಾಗಿ ದಾಖಲಿಸಲಾಗಿದೆ

'ಕಣಜ' ತಾಣದ ಉದ್ದೇಶಗಳು

- ಇದು ಕನ್ನಡ ಭಾಷೆಯಲ್ಲಿ ಯಾವುದೇ ಮಾಹಿತಿಗೆ ಏಕೈಕ ಮೂಲವಾಗುತ್ತದೆ. ಕರ್ನಾಟಕ ಜ್ಞಾನ ಆಯೋಗದ ಹೆಗ್ಗುರಿಯಾದ ಜ್ಞಾನ ಸಮಾಜದ ಸೃಷ್ಟಿಯ ದಿಕ್ಕಿನಲ್ಲಿ ಇದೊಂದು ಹೆಜ್ಜೆ.
- ವಿವಿಧ ಸಂಸ್ಥೆ ಮತ್ತು ವ್ಯಕ್ತಿಗಳಿಂದ ಮಾಹಿತಿಗಳನ್ನು ಪಡೆದು, ಮಾಹಿತಿಗಳು ಆದಷ್ಟು ಅಧಿಕೃತವೂ, ಖಚಿತವೂ, ಸುವರ್ಣವೂ, ಗುಣಮಟ್ಟದ್ದು ಆಗಿರುವಂತೆ ತಜ್ಞರ ನೆರವನ್ನು ಪಡೆದು ಎಲ್ಲಾ ಮಾಹಿತಿಗಳನ್ನು ಪರಾಮರ್ಶೆಗೆ ಒಳಪಡಿಸಿಯೇ ಸಾರ್ವಜನಿಕ ಬಳಕೆಗಾಗಿ ಕನ್ನಡ ಭಾಷೆಯಲ್ಲಿ, ವಿದ್ಯುನ್ಮಾನ ರೂಪದಲ್ಲಿ ವಿಶ್ವವ್ಯಾಪಿ ಜಾಲತಾಣದಲ್ಲಿ ಪ್ರಕಟಿಸುವುದು.
- ಪಠ್ಯ, ಚಿತ್ರ, ಧ್ವನಿ ಮತ್ತು ಚಲನಚಿತ್ರ – ಹೀಗೆ ಬಹು ಮಾಧ್ಯಮಗಳಲ್ಲಿ ಕನ್ನಡ ಮಾಹಿತಿಯನ್ನು ಪ್ರಕಟಿಸಲು ಎಲ್ಲಾ ಮಾಹಿತಿಗಳ ಸಂಗ್ರಹ ಮತ್ತು ತಂತ್ರಜ್ಞಾನದ ಕ್ರಮಗಳನ್ನು ಕೈಗೊಳ್ಳುವುದು.
- ದೃಷ್ಟಿ ಸವಾಲು ಎದುರಿಸುತ್ತಿರುವವರಿಗೂ ಕಣಜ ಮಾಹಿತಿ ಪಡೆಯುವುದಕ್ಕೆ ಬೇಕಾದ ಸಾಧನಗಳನ್ನು ಅಳವಡಿಸುವುದು.
- ನಗರ ಮತ್ತು ಗ್ರಾಮೀಣ ಪ್ರದೇಶಗಳ ಜನತೆ, ಉನ್ನತ ಶಿಕ್ಷಣ ಪಡೆದವರು ಅಥವಾ ಕನಿಷ್ಠ ಶಿಕ್ಷಣ ಪಡೆದವರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ಸಾರ್ವಜನಿಕ ಸೇವಾನಿರತರು, ವೃತ್ತಿಪರರು ಮತ್ತು ಮನೆಕಾರ್ಯಗಳಲ್ಲಿ ನಿರತರಾಗಿರುವವರು ಹೀಗೆ ಎಲ್ಲ ಸ್ಥರದ ಜನರಿಗೂ ಮಾಹಿತಿ ದಕ್ಕುವಂತೆ ಶ್ರಮಿಸುವುದು.
- ಪ್ರತಿಯೊಂದು ಮಾಹಿತಿಯನ್ನು ತತ್ಸಮಯಿಕವಾಗಿ ಸಿರಿವಂತಗೊಳಿಸಿ, ಸದಾ ಕಾಲವು ಸರಿಯಾದ ಮತ್ತು ಸಮಕಾಲೀನವಾದ ಮಾಹಿತಿ ದೊರಕುವಂತೆ ಮಾಡುವುದು.
- ಅರಿವಿನ ದಾಖಲೆಗಳ ಪ್ರಕಟಣೆಯ ಜೊತೆಗೆ ವಿವಿಧ ಜ್ಞಾನ ಪ್ರವಾಹಗಳ ಸಂರಕ್ಷಣೆಗೆ ಶ್ರಮಿಸುವುದು.

ಕಣಜ ತಾಣದಿಂದ ಕನ್ನಡ ಭಾಷೆಗಾಗುವ ಲಾಭಗಳು

- ಕನ್ನಡದ ಬಳಕೆಯನ್ನು ಹೆಚ್ಚಿಸುವ ಮೂಲಕ ಕನ್ನಡ ಸಾಹಿತ್ಯ ಶ್ರೀಮಂತವಾಗುತ್ತದೆ.
- ಕನ್ನಡ ಭಾಷೆ ಮತ್ತು ಸಂಸ್ಕೃತಿ ಜಾಗತಿಕ ಮಟ್ಟಕ್ಕೇರಲು ಸಹಕಾರಿಯಾಗುತ್ತದೆ.

- ಕಲಿಕೆ ಮತ್ತು ಶೈಕ್ಷಣಿಕ ಉದ್ದೇಶಗಳಿಗೆ ಬಹು ಕಾಲದಿಂದ ಇರುವ ಮಾಹಿತಿ ಸಾಮಗ್ರಿಯ ಕೊರತೆ ನೀಗುತ್ತದೆ.
- ಕನ್ನಡದ ಎಲ್ಲಾ ಕ್ಷೇತ್ರಗಳ ಬರಹಗಾರರು ಅನುಕೂಲಕರ ಮಾಧ್ಯಮದಲ್ಲಿ ಬರೆದು ಜಾಗತಿಕ ಓದುಗ ವರ್ಗವನ್ನು ತಲುಪುತ್ತಾರೆ.
- ಕಣಜವು ಎಲ್ಲರಿಗಾಗಿಯೇ ರೂಪುಗೊಳ್ಳಲಿದೆ. ವಿಶೇಷವಾಗಿ ಕನ್ನಡದಲ್ಲಿ ಮಾಹಿತಿಯನ್ನು ಬಯಸುವ, ಕನ್ನಡ ಭಾಷೆಯಲ್ಲಿ ವ್ಯವಹರಿಸುವ, ಕನ್ನಡ ಭಾಷೆ ಮಾತ್ರ ಗೊತ್ತಿರುವ ಹಾಗೂ ಬೇರೆ ಭಾಷೆಗಳು ಗೊತ್ತಿದ್ದರೂ ಕನ್ನಡದಲ್ಲಿ ಹೊಸ ಹೊಸ ಅರಿವನ್ನು ಹುಡುಕುತ್ತಿರುವವರಿಗೆ ಉಪಯುಕ್ತ. ಅಲ್ಲದೆ ಇದು ಶಾಲಾ ಕಾಲೇಜು ವಿದ್ಯಾರ್ಥಿಗಳು ಮತ್ತು ಯುವ ಜನತೆ, ರೈತರು, ಗೃಹಿಣಿಯರು, ಸಂಶೋಧಕರು ಮತ್ತು ವಿವಿಧ ವಿಷಯಗಳಲ್ಲಿ ಆಸಕ್ತಿ ಇರುವ ಜನರು ಬಳಸುವ ಮಾಹಿತಿ ಕಣಜವಾಗಿರಲಿದೆ.

ಕಣಜದಲ್ಲಿ ಮಾಹಿತಿ ಸಂಗ್ರಹ ಹೇಗೆ?

- ವಿವಿಧ ವಿಶ್ವವಿದ್ಯಾಲಯಗಳು, ಅಧ್ಯಯನ ಸಂಸ್ಥೆಗಳನ್ನು ವಿನಂತಿಸಿಕೊಂಡು ಈಗಾಗಲೇ ಸಿದ್ಧ ಪಡಿಸಿದ ಮಾಹಿತಿಗಳನ್ನು ಇಂದಿನ ಅಗತ್ಯಕ್ಕೆ ತಕ್ಕಂತೆ ಸಂಗ್ರಹಿಸಿ ಪ್ರಕಟಿಸಲಾಗುವುದು. ಇದಕ್ಕಾಗಿ ಸೂಕ್ತ ಸಾಂಸ್ಥಿಕ ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದು.
- ವಿವಿಧ ಸಾಹಿತಿಗಳು, ಲೇಖಕರು, ಪತ್ರಕರ್ತರು ಬರೆದ ಮಾಹಿತಿ ಪೂರ್ಣ ಲೇಖನಗಳನ್ನು ಅವರ ಸಮ್ಮತಿ ಪಡೆದು ಪ್ರಕಟಿಸಲಾಗುವುದು.
- ಪ್ರಸಕ್ತ ಕಾಲಮಾನಕ್ಕೆ ಬೇಕಾದ ಸಂಗತಿಗಳ ಬಗ್ಗೆ ಕನ್ನಡದಲ್ಲಿ ಲೇಖನಗಳನ್ನು ಬರೆಸಿ ಪ್ರಕಟಿಸ ಲಾಗುವುದು. ಸ್ವತಂತ್ರ ಲೇಖನಗಳಲ್ಲದೆ ಅನುವಾದಿತ ಕೃತಿಗಳನ್ನು ಸಂಗ್ರಹಿಸಲಾಗುವುದು.
- ಸಾರ್ವಜನಿಕರು ಜಾಲತಾಣದಲ್ಲೇ ತಮ್ಮ ಲೇಖನಗಳನ್ನು ಪ್ರತಿಕ್ರಿಯೆಗಳನ್ನು ಬರೆಯುವುದಕ್ಕೆ ಸಾಧನಗಳನ್ನು ಒದಗಿಸಿ, ಸಾರ್ವಜನಿಕ ಭಾಗಿತ್ವವನ್ನು ಹೆಚ್ಚಿಸಲಾಗುವುದು.
- ಐತಿಹಾಸಿಕ ಮತ್ತು ಅಧ್ಯಯನದ ಮಹತ್ವವನ್ನು ಹೊಂದಿರುವ ಕನ್ನಡ ಸಂಸ್ಕೃತಿ ಪರಂಪರೆಯನ್ನು ಬಿಂಬಿಸುವ ಎಲ್ಲ ಬಹುಮಾಧ್ಯಮದ ಮಾಹಿತಿಗಳನ್ನು ಸಂಗ್ರಹಿಸಲಾಗುವುದು.

ಕಣಜ ತಾಣದಿಂದಾಗುವ ಉಪಯೋಗಗಳು

ಕಣಜವು ವಿಶ್ವವ್ಯಾಪಿ ಜಾಲತಾಣದಲ್ಲಿ ಸರ್ವರೂ ಬಳಸಬಹುದಾದ ಯುನಿಕೋಡ್ ಭಾಷಾ ವ್ಯವಸ್ಥೆಯಲ್ಲಿ ಸಿಗುವುದರಿಂದ ಕನ್ನಡ ಬಲ್ಲ ಯಾರಾದರೂ ಈ ಮಾಹಿತಿಯಿಂದ ತಮ್ಮ ಅರಿವನ್ನು ವಿಸ್ತ

ರಿಸಿಕೊಳ್ಳಬಹುದು. ಈ ಮಾಹಿತಿಗಳನ್ನು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕಲಿಕೆಗಾಗಿ, ಮುಕ್ತವಾಗಿ ಬಳಸಿಕೊಳ್ಳಬಹುದು. ಎಲ್ಲರಿಗೂ ಖರೀದಿಸಲಾಗದ ಎಲ್ಲೆಡೆಯೂ ಸಿಗಲಾರದ ಪುಸ್ತಕಗಳಿಂದಲೂ ಮಾಹಿತಿ ವ್ಯವಸ್ಥಿತವಾಗಿ ಸಿಗಬೇಕೆಂಬುದು ಕಣಜದ ಆಶಯ. ಯಾವುದೇ ಮಾಹಿತಿಯನ್ನು ಪದ ಅಥವಾ ಪದ ಸಮೂಹವನ್ನು ಬಳಸಿ ತತ್ ಕ್ಷಣವೇ ಹುಡುಕಬಹುದು. ಈ ಮಾಹಿತಿಗಳು ವಿಷಯ ಪರಿಣಿತರಿಂದ ಪರಿಷ್ಕರಣೆ ಪರಾಮರ್ಶೆಗೆ ಒಳಗಾಗಿಯೇ ಪ್ರಕಟವಾಗುವುದರಿಂದ ಎಲ್ಲ ಮಾಹಿತಿಗೂ ಒಂದು ಪ್ರಮಾಣದ ಅಧಿಕೃತತೆಯಿರುತ್ತದೆ.

ಕಣಜದ ಮಾಹಿತಿಗಳನ್ನು ಸದಾ ಕಾಲವು ತತ್ಸಮಯಕಗೊಳಿಸುವ ಉದ್ದೇಶವಿದೆ. ಇದರಿಂದಾಗಿ ಪುಸ್ತಕಗಳಲ್ಲಿ ಮಾಡಲಾಗದ ತತ್ ಕ್ಷಣದ ಬದಲಾವಣೆಗಳನ್ನು, ತಿದ್ದುಪಡಿಗಳನ್ನು, ಹೊಸ ಬೆಳವಣಿಗೆ ಗಳನ್ನು ಕಣಜದಲ್ಲಿ ಪಡೆಯಬಹುದು. ಇಂದಿನ ಮತ್ತು ಮುಂದಿನ ಪೀಳಿಗೆಯ ಜನರು ಮಾಹಿತಿ ಮತ್ತು ತಂತ್ರಜ್ಞಾನ ಆಧಾರಿತ ಬದುಕನ್ನು ಹೆಚ್ಚು ಅವಲಂಬಿಸುತ್ತಾರೆ ಎಂಬುದು ಈಗಿನ ಬೆಳವಣಿಗೆಗಳಿಂದ ಗೊತ್ತಾಗುತ್ತದೆ. ಮುಂದಿನ ಶತಮಾನಗಳಲ್ಲಿ ಕನ್ನಡವು ಗಣಕ ವ್ಯವಸ್ಥೆಯಲ್ಲಿ ಈಜುವುದಕ್ಕೆ ಕಣಜವು ಮೊದಲ ಹೆಜ್ಜೆಯಾಗಲಿದೆ. ದೇಶ ವಿದೇಶಗಳಲ್ಲಿರುವ ಕನ್ನಡದ ಕುಟುಂಬಗಳು ತಮ್ಮ ಮಕ್ಕಳಿಗೆ ಕನ್ನಡ ವನ್ನು ಕಲಿಸುವುದಕ್ಕೆ ಕನ್ನಡ ಸಂಸ್ಕೃತಿ ಪರಂಪರೆಯನ್ನು ಅನುಸರಿಸುವುದಕ್ಕೆ ಕಣಜವು ನೆರವಾಗುವ ನಿರೀಕ್ಷೆಯಿದೆ.

ಕನ್ನಡಿಗರ ಪಾಲಿಗೆ ಕನ್ನಡ ಬ್ಲಾಗುಗಳು ಜ್ಞಾನ ಸಂಪಾದನೆಗೆ ಉಪಯುಕ್ತವಾದ ಮಾರ್ಗಗಳಾ ಗಿವೆ. ಈ ಬ್ಲಾಗ್‌ಗಳಲ್ಲಿ ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ಬರೆಯುವುದರಿಂದ ಮುಕ್ತ ಮನಸ್ಸಿನಲ್ಲಿ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು. ಇದರಿಂದ ವೈಯಕ್ತಿಕ ತಿದ್ದುಪಡಿಗಳಿದ್ದರೂ ತಿದ್ದಿಕೊಂಡು ಲೇಖನ, ಹನಿಗವನ, ಸಾಹಿತ್ಯ ಬರವಣಿಗೆ ಇತ್ಯಾದಿಗಳನ್ನು ಸೇರಿಸಬಹುದು. ಕನ್ನಡ ಬ್ಲಾಗ್ ಲೋಕ ಇಂದು ಕನ್ನಡಿಗರಿಗೆಂದೇ ವಿಶಾಲ ಹೃದಯದಂತೆ ತೆರೆದುಕೊಂಡಿದೆ. ಇದರಲ್ಲಿ ಈಗಾಗಲೇ ಸಾವಿರಾರು ಮಂದಿ ಕನ್ನಡಭಿಮಾನಿಗಳು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಪ್ರಕಟಿಸುತ್ತ ಬೇರೊಬ್ಬರ ಬರವಣಿಗೆಗಳ ಬಗ್ಗೆ ವಿಮರ್ಶೆಗಳನ್ನು ಮಾಡುತ್ತಾ ಮುಂದುವರೆಯುತ್ತಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ತನ್ನ ಬ್ಲಾಗ್‌ನಲ್ಲಿ ತನ್ನ ಪುಸ್ತಕಗಳ ಬಗ್ಗೆ ಮಾಹಿತಿ, ಲೇಖನ, ವಿಮರ್ಶೆಗಳನ್ನು ಪ್ರಕಟಿಸುವುದರಲ್ಲಿ ಇದು ಮುಂದಾಗುತ್ತದೆ. ಯಾವ ಪುಸ್ತಕಗಳು ಮುದ್ರಣಕ್ಕೆ ತಯಾ ರಾಗಿವೆ ಎಂಬಿತ್ಯಾದಿ ವಿಚಾರಗಳನ್ನು ಪ್ರಕಟಿಸುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಬ್ಲಾಗ್‌ನಲ್ಲಿ ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಲೇಖನ, ಅಂಕಣಗಳನ್ನು ಪ್ರಕಟಿಸುತ್ತದೆ. ಅಲ್ಲದೆ ಹಲವು ಕೃತಿಗಳನ್ನು, ವಿಮರ್ಶೆಗಳನ್ನು ಸಹ ಪ್ರಕಟಿಸುತ್ತದೆ. ಇದೇ ರೀತಿ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಕನ್ನಡ

ಬ್ಲಾಗ್‌ಗಳ ಸೇವೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಇಂದಿನ ಮತ್ತು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳಲು ಸಹಾಯವಾಗುತ್ತದೆ.

ನಮ್ಮ ಕನ್ನಡ ಭಾಷೆಯಲ್ಲಿ ಹಲವಾರು ಬ್ಲಾಗ್‌ಗಳನ್ನು ಕಾಣುತ್ತೇವೆ. ಪ್ರಸ್ತುತದಲ್ಲಿ ಸುಮಾರು ೬೦೦ಕ್ಕು ಹೆಚ್ಚು ಕನ್ನಡ ಬ್ಲಾಗ್‌ಗಳನ್ನು ಕಾಣಬಹುದು. ಇವುಗಳಲ್ಲಿ ನೆರೆಹೊರೆಯ ರಾಜ್ಯದವರು, ನೆರೆ ದೇಶದ ಕನ್ನಡಿಗರು ಸಹ ಭಾಗಿಯಾಗಿದ್ದಾರೆ. ಇದರಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದ ಅಭಿಪ್ರಾಯ ಅನಿಸಿಕೆಗಳನ್ನು ಪ್ರಕಟಿಸುತ್ತಾರೆ."[೪] ಈ ಕೆಳಕಂಡ ಕನ್ನಡ ಬ್ಲಾಗ್‌ಗಳನ್ನು ಗುರುತಿಸಬಹುದು

1. http://obbakannadiga.blogspot.com
2. http://nammasahithyakk.blogspot.com
3. http://bedagu.blogspot.com
4. http://komuvadivarthabharathi.blogspot.com/?spref=fb
5. http://aditya-beta.blogspot.com
6. http://my-kanglish.blogspot.com
7. http://alanthadka.blogspot.com
8. http://muroor.wordpress.com
9. www.lalithakala.com
10. http://sakshiprajne.blogspot.com
11. http://pdfbooksdownload.appspot.com
12. http://appsproducts.com
13. http://girigitlay.blogspot.com
14. http://poeticguru.blogspot.com
15. http://vismayanagari.com
16. http://mmnagaraj.wordpress.com
17. http://anaghamanasa.blogspot.com
18. http://chikkaranga.blogspot.com
19. http://bestandroidphone.in

ವೈಯಕ್ತಿಕ ಬ್ಲಾಗುಗಳು

ಅಂತರಂಗ	ಅಂತರಂಗದ ಅಲೆಗಳು	ಅಂತರಗಂಗೆ	ಅಂತರಾಳದ ಮಾತು
ಅಂತರ್ಯಾಮಿ	ಅಂತರ್ವಾಣಿ	ಅಂದದೂರು ಬೆಂಗಳೂರು	ಅಕ್ಷರ ವಿಹಾರ
ಅಕ್ಷರ ಹೂ	ಅಕ್ಷರ ಪಾತ್ರೆ	ಅಗಸೆಯ ಅಂಗಳ	ಅಚ್ಚ – ಕನ್ನಡ
ಅಧಿಕಪ್ರಸಂಗ	ಅನಿರ್ವಚನೀಯ	ಅನಿವಾಸಿ	ಅನಿಸಿಕೆ
ಅನುಭವ	ಅನುಭವಗಳು	ಅನುಭೂತಿ	ಅನುರಾಗ
ಅನುಸೃಷ್ಟಿ	ಅಪಾರ	ಅಪಾರ್ಥಕೋಶ	ಅಮಿತಾಂಜಲಿ
ಅಮೃತ ಸಿಂಚನ	ಅಮೃತ ವರ್ಷಿಣಿ	ಅಮೇರಿಕದಿಂದ ರವಿ	ಅಮೇರಿಕೆಯಿಂದ ಅವಲೋಕಿಸುತ್ತ
ಅರಳೀ ಕಟ್ಟೆ	ಅರುಣ ಸಿರಿಗೆರೆ	ಅರುಣ್ ಕುಮಾರ್	ಅರ್ಚನಾ
ಅಲೆಮಾರಿ	ಅಲೆಮಾರಿ ನೆನಪುಗಳು	ಅಲೆಮಾರಿ	ಅಲೆಮಾರಿಯ ಅನುಭವಗಳು
ಅವಧಿ	ಅವಲೋಕನ ೧	ಅವಲೋಕನ ೨	ಅವಲೋಕನ ೩
ಅವಿಲು	ಅವ್ಯಕ್ತ ರಂಗಭೂಮಿ	ಅಶೋಕ್	ಅಸತೋಮ ಸದ್ಗಮಯ
ಅಹಂ ಬ್ಲಾಗಾಸ್ಮಿ	ಆಕಾಶ ಬುಟ್ಟಿ	ಆಕಾಶವೀಧಿ	ಅದಮ್ಯ ರಮಾನಂದ
ಆದಿತ್ಯ ಬಾರಿಗಾಲಿ	ಆನಂದ ಆನಂದ ಈ ಭಾವ	ಆರೋಗ್ಯವೇ ಭಾಗ್ಯ	ಅಲೆಮಾರಿಯ ನೆನಪುಗಳು
ಆಸ್ರವ	ಇಂಚರ ೧	ಇಂಚರ ೨	ಇಂದಿನ ವಿಜ್ಞಾನ
ಇ – ಜ್ಞಾನ	ಇಬ್ಬನಿ ೧	ಇಬ್ಬನಿ ೨	ಇ ಯುಗದ ಪರಿಚಯ
ಈ ಕನ್ನಡ	ಈ ಕ್ಷಣದ ಸತ್ಯ	ಈ ಸುದ್ದಿ	ಉದಯರಾಗ
ಉನ್ಮುಖಿ	ಋಜುವಾತು	ಎಂಡ್ಕುಡ್ಕ	ಎಲ್ಲ ನೋಟಗಳಾಚೆಗೆ ಇನ್ನೊಂದು ಚಿತ್ರವಿದೆ
ಎಲ್ಲ ಬಲ್ಲವ ನಾನಲ್ಲ	ಏಕಾಂತ	ಏನ್ ಗುರು	ಏನ್ ಸಮಾಚಾರ
ಒಂಟಿ ಹಕ್ಕಿಯ ಹಾಡು	ಒಂದಾನೊಂದು ಕಾಲದಲ್ಲಿ	ಒಂದು ಪ್ರೀತಿಯ ಕಥೆ	ಒಡಕಲು – ಬಡಕಲು
ಒಲವಿನ ಪತ್ರ	ಒಲವೇ	ಒಳಗೂ ಹೊರಗೂ	ಓ.ಎಲ್. ಎನ್. ಸ್ವಾಮಿ
ಓ ನನ್ನ ಚೇತನಾ	ಓದಿನ ಕೋಣೆ	ಓದು ಜನಮೇಜಯ	ಓದುವ ಹವ್ಯಾಸ
ಓಲೆ ಗರಿ	ಕಗ್ಗ – ನನ್ನರಿವಿನಲಿ	ಕಡಲ ಮುತ್ತು	ಕತೆ, ಕವನ, ಜೀವನ

ಕಥಾ – ಕಾನನ	ಕಥಾಗಗನ	ಕನವರಿಕೆ	ಕನಸಿನರಮನೆ
ಕನಸು ದಾರಿ	ಕನಸು ಮತ್ತು ಪ್ರೀತಿ	ಕನ್ನಡ	ಕನ್ನಡ ಕನ್ನಡಿ
ಕನ್ನಡ ಕವಿತೆಗಳು	ಕನ್ನಡ ಕಸ್ತೂರಿ	ಕನ್ನಡ ಕಾರ್ಟೂನ್ಸ್	ಕನ್ನಡ ಪ್ರಜ್ಞೆ
ಕನ್ನಡ ಸಾರಥಿ	ಸಾಹಿತ್ಯ ಸಮ್ಮೇಳನ ೭೫	ಕನ್ನಡ ಹನಿಗವನ ಕವನ	ಕನ್ನಡ ಹನಿಗವನಗಳು
ಕನ್ನಡಗುರು	ಕನ್ನಡದ ಕಂದ	ಕನ್ನಡದ ಕುವರ	ಕನ್ನಡ ಪುಟ
ಕನ್ನಡಮ್ಮ	ಕನ್ನಡವೇ ನಿತ್ಯ	ಕನ್ನಡವೇ ನಿತ್ಯ, ಕನ್ನಡವೇ ಸತ್ಯ	ಕನ್ನಡವೇ ಸತ್ಯ
ಕಪ್ಪು ಬಿಳುಪು	ಕರುಣಾಳು ಬಾ ಬೆಳಕೆ	ಕರ್ಣನ ಮಾತು	ಕರ್ನಾಟಕ ರಕ್ಷಣಾವೇದಿಕೆ
ಕರ್ನಾಟಿಕ್‌ಕಾನ್ವರ್ಷೇಶನ್ಸ್	ಕರ್ಮಕಾಂಡ	ಕಲರವ	ಕಲಾವಿದರು
ಕಲ್ಪನಾ ಛಾಯೆಯಲಿ	ಕಲ್ಪನೆಗಳ ಲೋಕದಲ್ಲಿ	ಕಲ್ಯಾಣ ಕಿರಣ	ಕವನ ರಸಾಯನ
ಕವಿ	ಕಳ್ಳ ಕುಳ್ಳ ಬ್ಲಾಗ್	ಕಾಡು ಪ್ರಾಣಿಗಾಗಿ	ಕಾಡು ಹರಟೆ ೧
ಕಾಡು ಹರಟೆ ೨	ಕಾದಂಬರಿ	ಕಾರ್ಟೂನ್	ಕಾಲಚಕ್ರ
ಕಾಲಾತೀತ ದಿಗಂತದೆಡೆ	ಕಾವ್ಯ ಜೀವಿ	ಕಾವ್ಯ ಸುಧೆ	ಕಾವ್ಯ ಕೃಷಿ
ಕುಂಚ ಪ್ರಪಂಚ	ಕುಂಟಿನಿ	ಕುಚೇಲ	ಕುಟುಕು
ಕೃಷ್ಣಮೂರ್ತಿ ಅಜ್ಜಹಳ್ಳಿ ೨	ಕೃಷ್ಣರಾಜ್‌ರವರ ನನ್ನ ಮಾತು	ಕೆ.ಜಿ.ಎಫ್ ಪೋಲೀಸ್	ಕೆಂಡ ಸಂಪಿಗೆ
ಕೆನ್ನೆ ಮೇಲೊಂದು ಮಳೆ ಹನಿ ಬಿದ್ದಾಗ	ಕೋಲಾರ ಪೋಲೀಸ್	ಕೋಸಂಬರಿ	ಕ್ರಿಕೆಟ್ ಸುತ್ತ ಮುತ್ತ
ಕ್ಷ ಕಿರಣ	ಕ್ಷಿತಿಜದೆಡೆಗೆ	ಕ್ಷಿತಿಜಾನಿಸಿಕೆ	ಖಜಾನೆ
ಗಂಡಭೇರುಂಡ	ಗಣೇಶ್ ಲಿಂಗದಹಳ್ಳಿ	ಗರಿ ಬಿಚ್ಚಿದ ಗರುಡ	ಗಾದೆ – ನಾಣ್ಣುಡಿ
ಗಿರಿ	ಗಿರೀಶ್ ಭಟ್	ಗಿರೀಶ್ ಹೆಗಡೆ	ಗೀಚುಗಳು
ಗುಬ್ಬಚ್ಚಿ	ಗುಬ್ಬಚ್ಚಿ ಗೂಡು	ಗುಬ್ಬಿ ಗೂಡು	ಗುರುಪ್ರಸಾದ ಕುರ್ತಕೋಟಿ
ಗುಲಾಬಿ	ಗೆರೆ	ಗೊಣಗಾಟ	ಗೋತಾ ಪುರಾಣ
ಗ್ಲೋಕಲ್ ಫಂಡಾ	ಚಂಡಮಾಣಿ	ಚಂದನ	ಚಂಪಕಾವತಿ
ಚರಿತ್ರ	ಚಾಮರಾಜ ಸವಡಿ	ಚಾವಡಿ	ಚಿಂತನೆ
ಚಿಂದಿ ಚಿತ್ರಾನ್ನ	ಚಿಗುರು	ಚಿತ್ರಕವನ	ಚಿತ್ರ ಕಾವ್ಯ
ಚಿರನೂತನ–ಈ ಚಿಂತನ	ಚಿಲಿಪಿಲಿ	ಚುಂ ಬನವಾಸಿ	ಚುಕ್ಕಿ ಸಂಸ್ಥೆ

ಚುರ್ ಮುರಿ	ಚುಳುಕು	ಚಂಡೆಮದ್ದಳೆ	ಚೆವಾರ್
ಚೈತ್ರಿಕಾ	ಚೌಪದಿ	ಜಯಪ್ರಕಾಶ ಪೂಜಾರ್	ಜಿಂದಗಿ ಕಾಲಿಂಗ್
ಜಿಜ್ಞಾಸೆ	ಜೀವ ದನಿ	ಜೀವ ಸಂಚಲನ	ಜೀವನದಿ
ಜೀವನ್ಮುಖಿ	ಜೀವಸಂಶಯ	ಜೇನುಗೂಡು	ಟೀನಾಜೋನ್
ಟೈಂಪಾಸ್ ಕಡ್ಲೆ ಕಾಯಿ	ಡುಂಡಿ ರಾಜ್ ದಿನ	ತಂಗಾಳಿ	ತಂತ್ರಜ್ಞಾನಿಯ ಪ್ರಪಂಚ
ತಡವಾಗಿ ಬಂದವ	ತಲೆ ಹರಟೆ	ತಿರುವು	ತಿರದ ಬಯಕೆಗಳು
ತುಂಗಾ ತೀರದಿ	ತುಂತುರು ಹನಿಗಳು	ತುಟಿಮೇಲೆ ಬಂದಂತ ಮಾತೊಂದೆ ಒಂದು	ತುಮಕೂರು
ತುಳಸಿವನ	ತೆರೆದ ಮನಸಿನ ಪುಟಗಳು	ತೊದಲು ಮಾತು	ತೋಚಿದ್ದನ್ನು ಗೀಚುವೆ
ತೋಚಿದ್ದು ಗೀಚಿದ್ದು ೧	ತೋಚಿದ್ದು ಗೀಚಿದ್ದು ೨	ತೋಚಿದ್ದು ಗೀಚಿದ್ದು ೩	ದಾರಿದೀಪ
ದಿಗಂತ	ಡಿವಿಜಿ ಸಾಹಿತ್ಯ	ದೀನ ನಾ ದಾನಿ ನೀ	ದೀಪಕ
ನಂದಗೋಕುಲ	ನಗೆ ನಗಾರಿ ಡಾಟ್ ಕಾಮ್	ನಟೇಶ್‌ರವರ ನನ್ನೂರು ಚಂದ	ನದಿ ಪ್ರೀತಿ
ನನ್ ಮನೆ	ನನ್ನ ಗೂಡು ನನ್ನ ನದರು	ನನ್ನ ನದರು	ನನ್ನ ಪುಟ
ನನ್ನ ಪುಟಗಳು	ನನ್ನ ಮನದಾಳ	ನನ್ನ ಸ್ವರ	ನನ್ನದಲ್ಲದ ಕವಿತೆ
ನಮ್ ಟೀಮ್	ನಮ್ಮ ನಾಡು ಕನ್ನಡ	ನಮ್ಮ ಬೆಂಗಳೂರು	ನಮ್ಮ ಮನೆ
ನವಿಲಗರಿ	ನಾಕುತಂತಿ	ನಾವೇಕೆ ಹೀಗೆ?	ನಿನ್ನೆ – ನಾಳೆ
ನಿರಚಿತ	ನಿಶಾಚರ	ನಿಶು ಮನೆ	ನಿಸರ್ಗ
ನಿಹಾರಿಕಾ	ನೀಮಾಯೆಯೊಳಗೋ	ನೀರ ದಾರಿಯ ಹೆಜ್ಜೆ	ನೀಲಗಿರಿ
ನೀಲಗ್ರೀವ	ನೀವು ಕಲಾವಿದರೇ?	ನುಡಿಬೀಡು	ನೂರು ಕನಸು
ನೂರೆಂಟು ಸುಳ್ಳು	ನೂರೊಂದು ನೆನಪು	ನೆಂಪು	ನೆಟ್ ನೋಟ
ನೆನಪು, ಕನಸುಗಳ ನಡುವೆ	ನೆಲದ ಮಾತು	ನೋಡಿ ಸ್ವಾಮಿ ನಾವು ಇರೋದೆ ಹೀಗೇ	ಪಂಚಮುಖಿಯ ಕಥೆಗಳು
ಪಂಚ್ ಲೈನ್	ಪಟ್ಟಾಂಗ	ಪದ ನಾಲ್ಕು ಸಾಲಾಗಿ	ಪಮ್ಮಿ
ಪರ್ಯಾಯ	ಪಾತರಗಿತ್ತಿ ಪಕ್ಕ	ಪಾರಿಜಾತ ೧	ಪಾರಿಜಾತ ೨
ಪಿಚ್ಚರ್	ಪಿರಮಿಡ್ ಸಾಯಿಮಿರ ಥಿಯೇಟರ್ ಲಿ.	ಪಿಸುಮಾತು	ಪುಟಾಣಿ

ಪುರಂದರ ದರ್ಶನ	ಪುಷ್ಪಲತ	ಪೂರ್ಣ ವಿರಾಮ	ಪೋಲಿ ಮನೆ
ಪೋಲಿ ಹುಡುಗ	ಪ್ರಕಟಣೆ	ಪ್ರಕೃತಿ	ಪ್ರತಿಕ್ರಿಯೆ
ಪ್ರತಿಸ್ಪಂದನ	ಪ್ರವೀಣ್ ಪಟವರ್ಧನ್	ಪ್ರಸನ್ನ ಎಸ್	ಪ್ರಸ್ತಾಪ
ಪ್ರಾಂಜಲ	ಪ್ರಿಯ ಹನಿಗವನ	ಪ್ರಿಯ ಹೃದಯ	ಪ್ರೇಮ್ ಕಹಾನಿ
ಫೋಟೋಒಂದೆ ನೋಟ ಹಲವು	ಬಡೆಕ್ಕಿಲ	ಬಣ್ಣ ಬಣ್ಣದ ಲೋಕ	ಬಣ್ಣದ ನವಿಲು
ಬಣ್ಣದ ಚಿಗುರು	ಬದಲಾವಣೆಯೇ ಜಗದ ನಿಯಮ	ಬದುಕಲು ಕಲಿಯಿರಿ	ಬಯಲಸಿರಿ
ಬಯಲು ೧	ಬಯಲು ೨	ಬರೆವ ಬದುಕಿನ ತಲ್ಲಣ	ಬಲ್ಲವರ ಬರಹ
ಬಲ್ಲಿರೇನಯ್ಯ	ಬಹುಮುಖಿ	ಬಾ(ಭಾ)ಳ ಕವನ	ಬಾನಾಡಿ ೧
ಬಾನಾಡಿ ೨	ಬಾಲವನ	ಬಾಳ ದೋಣಿ	ಬಿಂಬ
ಬುಕ್ ಬಜಾರ್	ಬುಡುಬುಡಿಕೆ	ಬೆಂಕಿ ಬಿರುಗಾಳಿ	ಬೆಂಗಳೂರಿಗ
ಬೆಟ್ಟದಡಿ	ಬೆನಕ	ಬೊಗಳೆ ರಗಳೆ	ಬೊಮ್ಮನಹಳ್ಳಿ
ಬ್ರಹ್ಮಾನಂದ ಓಂಕಾರ	ಬ್ಲಾಗಾಯಣ	ಬ್ಲಾಗಾವತಾರ	ಬ್ಲಾಗುತ್ತಾ ಇರು
ಭಂಡಾರ	ಭಾವ ಚಿತ್ತಾರ	ಭಾವ ಬಿಂದು	ಭಾವಗಾನ
ಭಾವಜೀವಿ	ಭಾವ ದರ್ಪಣ	ಭಾವನೆಗಳ ತುಡಿತ	ಭಾವನೆಗಳ ಹೊಳೆಯಲ್ಲಿ
ಮಂಗಳೂರು ಮಾಣಿ	ಮಂಜು ಮುಸುಕಿದ ದಾರಿಯಲ್ಲಿ	ಮಂಜುನಾಥ್ ಸಿಂಗ್	ಮಂಜುರವರ ಬರಹಗಳು
ಮಂಡ್ಯ.ಕಾಂ	ಮಂದಾರ	ಮಜಾವಾಣಿ	ಮಟಕ್ಕುಕ್ ರಿಸೈಪ್ಸ್
ಮಧುವನ ೧	ಮಧುವನ ೨	ಮನಕ್ಕೆ ನೆನಹಾಗಿ	ಮನದ ಕುಲುಮೆಯಲ್ಲಿ ಭಾವನೆಗಳ ಮಂಥನ
ಮನದ ಬಯಲು	ಮನದ ಮಾತು ೧	ಮನದ ಬಾಗಿಲು	ಮನದಂಗಳದ ಮಾತು
ಮನದನಿ	ಮನದಾಳದ ಕಲರವ	ಮನದಾಳದ ಮಾತು ೧	ಮನದಾಳದ ಮಾತು ೨
ಮನದಾಳದ ಮಾತುಗಳು	ಮನದಾಳದಿಂದ	ಮನಸಿನ ಪುಟಗಳ ನಡುವೆ	ಮನಸಿನ ಮಾತು
ಮನಸಿನ್ಯಾಗೊಂದು ಮನಸು	ಮನಸು ಹಕ್ಕಿ	ಮನಸೆಂಬ ಹುಚ್ಚು ಹೊಳೆ	ಮನಸ್ವಿನಿ
ಮನಸ್ಸಿನ ಮಾತು	ಮನಸ್ಸೆ ಓ ಮನಸ್ಸೆ	ಮನಸ್ಸೇ	ಮನು ಸತ್ಯ
ಮರ್ಕಟ	ಮಲೆನಾಡಿಗನ ಕಣಜದಲ್ಲಿನ ಲೇಖನಗಳು	ಮಲೆಯ ಮಾತು	ಮಲ್ಲಿ ಸಣ್ಣಪ್ಪನವರ

ಮಲ್ಲಿಕಾರ್ಜುನ ತಿಪ್ಪಾರರ ನನ್ನ ಹಾಡು	ಮಳೆಹನಿ	ಮಾತಿಲ್ಲದ ಮೌನ ರಾಗಗಳು	ಮಾತು – ಕಥೆ
ಮಾತು ಕತೆ	ಮಾತು ಮೌನದ ಪ್ರತಿಮೆ	ಮಾನಸ ೧	ಮಾನಸ ೨
ಮಾನಸ ಯಾತ್ರೆ	ಮಾನಸ ಸರೋವರ ೧	ಮಾನಸ ಸರೋವರ ೨	ಮಾವಿನರಸ
ಅವಳ ಕವನಗಳು	ಆಗಾಗ ಆಟೋರಾಣಿ	ಆರಿಫ್ ರಿಪೋರ್ಟರ್	ಆರೋಗ್ಯ
ಅಲಾಪ	ಇ ಹೊತ್ತಿಗೆ	ಏಎಂಇ ಫೌಂಡೇಷನ್ ಬಿಜಾಪುರ	ಏನೂ ಇಲ್ಲ
ಒಲವಿನ ಓಲೆ	ಒಲವೇ ಮರೆಯದ ಮಮಕಾರ	ಕನ್ನಡ ಕಂಪು	ಕನ್ನಡ ರಂಗ
ಕನ್ನಡದ ಹರಟೆ ಕಟ್ಟೆ	ಕೇದಗೆಬನ	ಚಿಗುರು	ಜಕಾಸ್ ಹುಡ್ಗ
ಜೋಗಿಮನೆ	ತನ್ ಹಾಯಿ	ತಮಾಷೆಗಾಗಿ	ತೇನವಿನಾ
ಥಟ್ ಅಂತ ಹೇಳಿ	ನಮ್ಮ ಕಾಲೇಜು	ನಳಂದ ಮಂಟಪ	ಪಂಜ ಸೀಮಾ ಹವ್ಯಕರು
ಪ್ರಹೀಶ್	ಪ್ರೀತಿ ಮಾಡು ತಪ್ಪೇನಿಲ್ಲ	ಪ್ರೇಮ ಪತ್ರ	ಬಾನಾಡಿ
ಬೆಳದಿಂಗಳು	ಭಾವ ತೀರದ ಯಾನ	ಭಾವಗೀತೆಗಳ ಗುಚ್ಚ	ಭಾವತರಂಗ
ಮಣ್ಣಿನ ಮಕ್ಕಳು	ಮನದ ಮಾತು ೨	ಮನಸಿನ ಮರ್ಮರ	ಮೂಕ ಹಕ್ಕಿಯು ಹಾಡುತಿದೆ
ಮ್ಯಾಜಿಕ್ ಕಾರ್ಪೆಟ್	ಯಾಮಿನೀ	ವಿಶ್ವ ಪಥ	ಶಶಿಕಿರಣ
ಸಮಯದ ಗೊಂಬೆ	ಸಿರಿಗನ್ನಡಂಗೆಲ್ಲೆ ಸಿರಿಗನ್ನಡಂ ಬಾಳ್ಗೆ	ಸುಧೀರ್ ಎಸ್ ನಾಯಕ್	ಸುಪ್ತ ಮನಸು
ಹಂಸ ನಾದ	ಹನಿ ಹನಿ	ಹಾಯ್ ಬಂಗಾರಿ	ಕಲ್ ಸಕ್ರಿ
ಚಿಲಿಪಿಲಿ ೨	ನಿನಗಾಗಿ ಮಾತ್ರ ಕಣೇ	ಪ್ರಕೋಪ ಕನ್ನಡಿಗ	ಭಾವನ
ಯಾತನೆ	ಶೇರು ಮಾರುಕಟ್ಟೆ	ಸಂತೋಷ್ ರಾವ್	ಸ್ಮೃತಿಯಾತ್ರೆ
ಹೆಜ್ಜೆ ೨	ಬಾಳದಾರಿಯಲ್ಲಿ	ಬ್ಲಾ ಬ್ಲಾ ಬ್ಲಾ	ಮನಸು
ಸ್ಮೈಲಿಂಗ್ ಕಲರ್ಸ್	ನನ್ ಪ್ರಪಂಚ	ಅಂಗಳ	ಅಂಚೆಮನೆ

ಈ ಮೇಲ್ಕಂಡ ಬ್ಲಾಗ್‌ಗಳನ್ನು ಕನ್ನಡ ಅಂತರ್ಜಾಲದಲ್ಲಿ ಕಾಣುತ್ತೇವೆ. ಮೇಲೆ ತಿಳಿಸಿದ ಬ್ಲಾಗ್ ಗಳೆಲ್ಲವನ್ನು ಬಳಸುತ್ತಿರುವವರು ನಮ್ಮ ಕನ್ನಡಿಗರೇ. ಕನ್ನಡ ಬ್ಲಾಗ್‌ಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ಪುರವಣಿಗಳನ್ನು, ಕೃತಿಗಳನ್ನು ತಿಳಿಯಬಹುದು."[೨] ಕನ್ನಡ ಬ್ಲಾಗ್‌ಗಳ ಸಂಖ್ಯೆ ಮತ್ತಷ್ಟು ಮುಂಬರುವ ದಿನಗಳಲ್ಲಿ ಹೆಚ್ಚುತ್ತದೆ ಎಂದು ಆಶಿಸಬಹುದು. ಇವುಗಳ ವ್ಯಾಪ್ತಿ ಮತ್ತು ಸ್ವರೂಪದ ಬಗ್ಗೆ ಮತ್ತಷ್ಟು ತಿಳಿಯಲು ಮತ್ತೊಂದು ಸಂಶೋಧನೆಯ ಅಗತ್ಯವಿದೆ.

ಅಡಿಟಿಪ್ಪಣಿಗಳು

೧. www.sampada.com

೨. www.sudditana.com

೩. www.antarjala.com

೪. www.kanaja.com

೫. www.kannadablogs.com

ಅಧ್ಯಾಯ – ೫

ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯ

(ಕವಿಗಳು ಹಾಗೂ ಬರಹಗಾರರು)

ಅಧ್ಯಾಯ – ೫
ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯ
(ಕವಿಗಳು ಹಾಗೂ ಬರಹಗಾರರು)

ಅಂತರ್ಜಾಲದಲ್ಲಿ ಹಿಂದಿಗಿಂತಲೂ ಇಂದು ಕನ್ನಡ ಸಾಹಿತ್ಯ ಹೆಚ್ಚು ವ್ಯಾಪ್ತಿಯನ್ನು ಪಡೆದು ಕೊಳ್ಳುತ್ತಿದೆ. ಇದರಿಂದಾಗಿ ಕನ್ನಡ ಸಾಹಿತ್ಯದ ಪ್ರಸರಣ ಹೆಚ್ಚಿದೆ. ಇಂದು ಪ್ರಚಲಿತವಿರುವ ಸುಮಾರು ೬೦೦ಕ್ಕೂ ಹೆಚ್ಚು ಬ್ಲಾಗುಗಳಲ್ಲಿ ಕನ್ನಡ – ಕನ್ನಡ ಸಾಹಿತ್ಯ ಹಿಂದಿನ ಅಧ್ಯಾಯದಲ್ಲಿ ವಿವರಿಸಿದ ಹಾಗೆ ಪ್ರಮುಖ ಕವಿಗಳ ಸಾಹಿತ್ಯ ನಿರ್ಮಾಣ ಹಾಗು ಹೊಸ ಪುಸ್ತಕಗಳ ಬಗೆಗೆ ವಿಮರ್ಶೆ, ಚರ್ಚೆ, ವಾದ ವಿವಾದಗಳನ್ನು ಸಮರ್ಪಕವಾಗಿ ನಾವು ಪಡೆಯಬಹುದಾಗಿದೆ. ಇದೊಂದು ಅಚ್ಚರಿಯ ಬೆಳವಣಿಗೆ. ಮಾಹಿತಿ ತಂತ್ರಜ್ಞಾನದ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯದ ಬಗೆಗೆ ಮಾಹಿತಿಗಳನ್ನು ಕಲೆಹಾಕಬಯಸುವ ಕನ್ನಡಿಗ ಸಾಹಿತ್ಯ ಪ್ರೇಮಿಗೆ ಇದು ಸುವರ್ಣಾವಕಾಶವೇ ಸರಿ. ಕಡಿಮೆ ಸಮಯದಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟ ಹೆಚ್ಚು ಮಾಹಿತಿಯನ್ನು ಸಂಗ್ರಹಿಸಿಕೊಳ್ಳಬಹುದಾದ ಇಂತಹ ವಿದ್ಯಮಾನ ಅಚ್ಚರಿಯನ್ನು ಮೂಡಿಸುತ್ತದೆ.

ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯದ ಮಹತ್ವ : ಕನ್ನಡ ಸಾಹಿತ್ಯ ಅಂತರ್ಜಾಲದಲ್ಲಿ ವೈವಿಧ್ಯಮಯ ಸ್ವರೂಪವನ್ನು ಪಡೆದಿದೆ. ಇದರಲ್ಲಿ ಹಳೆಗನ್ನಡದಿಂದ ಹೊಸಗನ್ನಡ ಸಾಹಿತ್ಯ ಚರಿತ್ರೆಯವರೆಗೂ ಕಾಣ ಬಹುದು. ಸಾಹಿ ತ್ಯದ ಕಾಲಘಟ್ಟಗಳು, ಕೃತಿಗಳು, ಅವುಗಳ ಪರಿಚಯ, ಲೇಖನಗಳು, ವಚನಗಳು ಮತ್ತು ಅವುಗಳ ವೈಶಿಷ್ಟ್ಯ, ಕೀರ್ತನೆಗಳು, ದಾಸ ಸಾಹಿತ್ಯ, ಸಣ್ಣಕತೆಗಳು, ಹನಿಗವನ, ನಾಟಕಗಳು, ಚುಟುಕು ಗಾದೆಗಳು, ನುಡಿಮುತ್ತು, ನಾಣ್ಣುಡಿಗಳು, ಲೇಖಕರು, ವೈಜ್ಞಾನಿಕ ಬರಹಗಾರರು ಇನ್ನು ಮುಂತಾದ ವಿಷಯಗಳನ್ನು ಅಂತರ್ಜಾಲದಲ್ಲಿ ಕಾಣುತ್ತೇವೆ.

ದಿನದಿನವೂ ಹೊಸ ವಿಚಾರಗಳನ್ನು ಜನಸಮೂಹದ ಮುಂದೆ ತರುತ್ತಿರುವ ಸಾಹಿತ್ಯ ಲೋಕವು ಜನರ ಮೆಚ್ಚುಗೆಯ ತಾಣವಾಗಿದೆ. ಖಾಸಗಿ ಬ್ಲಾಗ್ ಆದ 'ಕಣಜ'ದಲ್ಲಿ ಬೇಕಾದ ಲೇಖನ, ವಿಮರ್ಶೆ ಬರವಣಿಗೆಗಳನ್ನು ಆಸಕ್ತ ಬರಹಗಾರರು ಪ್ರಕಟಿಸುತ್ತಾರೆ. ಇದು ಸಮೂಹದ ಮೆಚ್ಚುಗೆಯನ್ನು ಪಡೆ ಯುತ್ತಿದೆ. ಅನೇಕ ಸಾಹಿತ್ಯಾಭಿಮಾನಿಗಳು ತಮ್ಮ ಎಷ್ಟೋ ಕೆಲಸಗಳ ನಡುವೆ ತಮ್ಮ ಬರವಣಿಗೆ, ಕವಿತೆ, ಪ್ರಬಂಧಗಳನ್ನು ಮುದ್ರಿಸಿ ಅಂತರ್ಜಾಲಕ್ಕೆ ಕಳುಹಿಸುತ್ತಿದ್ದು, ಅದು ಓದುಗರ ಕುತೂಹಲ ಕೆರಳಿಸುತ್ತಿದೆ. 'ಯೂ ಟ್ಯೂಬ್'ನಂತಹ ತಾಣದಲ್ಲಿ ಅನೇಕ ಲೇಖನಗಳನ್ನು, ಬರವಣಿಗೆಗಳನ್ನು ತಿಳಿಯುತ್ತೇವೆ. ಅನೇಕ ಕಿರು ಬ್ಲಾಗ್‌ನ ತಾಣದಲ್ಲಿ ಪತ್ರ ಸಂದೇಶ ರೂಪದಲ್ಲಿ ಭಾಷೆ ಮತ್ತು ಸಾಹಿತ್ಯದ ಪ್ರಸರಣ ನಡೆಯುತ್ತಿದ್ದು,

ಹಲವು ಬುಡಕಟ್ಟು ಭಾಷೆಗಳು ಇದರಿಂದ ಇಂದಿಗೂ ಅಸ್ತಿತ್ವ ಉಳಿಸಿಕೊಂಡಿವೆ' ಎನ್ನುತ್ತಾರೆ ಅಮೇರಿಕಾದ ಸ್ವಾರ್ಥ್‌ಮೋರ್ ಭಾಷಾ ಉಪನ್ಯಾಸಕ ಹ್ಯಾರಿಸನ್.

ಸದ್ಯಕ್ಕೆ ಪ್ರಪಂಚದಾದ್ಯಂತ ಮಾತನಾಡುತ್ತಿರುವ ಸುಮಾರು ೭ ಸಾವಿರದಷ್ಟು ಭಾಷೆಗಳಲ್ಲಿ ಸುಮಾರು ಅರ್ಧದಷ್ಟು ಭಾಷೆಗಳು ಈ ಶತಮಾನ ಅಂತ್ಯಕ್ಕೆ ಹೊಸ ತಿರುವುಗಳನ್ನು ತೆರೆಯಲಿವೆ ಎನ್ನುವುದು ಭಾಷಾ ವಿಜ್ಞಾನಿಗಳ ಅಭಿಪ್ರಾಯ. ಇದರಲ್ಲಿ ನಮ್ಮ ಕನ್ನಡ ಭಾಷೆಯ ಸಾಹಿತ್ಯ ಹೊಸದೊಂದು ಬದಲಾವಣೆಯನ್ನು, ಅಭಿವೃದ್ಧಿಯನ್ನು ಹೊಂದುತ್ತದೆ.

"ಕನ್ನಡ ಸಾಹಿತ್ಯವು ಇಲ್ಲಿಯವರೆಗೂ ಮುಂದುವರೆದು ಬಂದಿರುವುದಕ್ಕೆ ಮುಖ್ಯ ಕಾರಣ ಭಾಷೆ ಬೆಳವಣಿಗೆ. ಇಂದು ಅಂತರ್ಜಾಲದಲ್ಲಿ ಯಾವ ಪುಸ್ತಕ ಯಾವ ಪ್ರಕಾಶನದಲ್ಲಿ ಸಿಗುತ್ತದೆ? ಎಂದು ಥಟ್ಟನೆ ತಿಳಿದುಕೊಳ್ಳಬಹುದು. ಯಾವುದೇ ಕಾದಂಬರಿಯ ಯಾವುದೇ ಪುಟವನ್ನು ತೆರೆದು ಓದುವ ಮಟ್ಟಿಗೆ ನಮ್ಮ ಕನ್ನಡ ಅಂತರ್ಜಾಲದಲ್ಲಿ ಬೆಳೆದಿದೆ. ಸಣ್ಣ ಕತೆಗಳಿಂದ ಪ್ರಾರಂಭಿಸಿ, ದೊಡ್ಡ ದೊಡ್ಡ ಕಾದಂಬರಿಗಳನ್ನು ಸಹ ತೆರೆದು ಓದಬಹುದು. ಕುವೆಂಪುರವರ ಮಲೆಗಳಲ್ಲಿ ಮಧುಮಗಳು ಕಾದಂಬರಿಯ ಯಾವ ಪುಟವನ್ನಾದರೂ ತೆರೆದು ಓದುವ ಸೌಲಭ್ಯ ಇಂದು ಕನ್ನಡ ಅಂತರ್ಜಾಲದಲ್ಲಿ ಇದೆ. ಇದಲ್ಲದೆ ಕಾದಂಬರಿಗಳ ವಿಮರ್ಶೆಗಳನ್ನು ಸಹ ತೆರೆದು ಓದಬಹುದು."[7] ಅಲ್ಲದೆ ಸಾಹಿತ್ಯ ಕೃತಿಗಳ ಹೊಸ ಮುದ್ರಣಗಳು ಎಂದು ಹೊರಬೀಳುವುವು ಎಂಬುದನ್ನು ಸಹ ಇಂದು ಕ್ಷಣಾರ್ಧದಲ್ಲಿ ತಿಳಿದು ಕೊಳ್ಳಬಹುದು.

ಅಂತರ್ಜಾಲದಲ್ಲಿ ಹಳೆಗನ್ನಡದ ಕವಿಗಳು, ನಡುಗನ್ನಡದ ಕವಿಗಳು, ಜ್ಞಾನಪೀಠ ಪುರಸ್ಕೃತರು, ಹಿರಿಯ ಚೇತನಗಳು, ಕನ್ನಡ ಕುಲೋದ್ಧಾರಕರು, ಕಾದಂಬರಿಕಾರರು, ನವ್ಯ ಕವಿಗಳು, ಮಹಿಳಾ ಸಾಹಿತಿಗಳು, ಬಂಡಾಯ ಸಾಹಿತಿಗಳು, ಹಾಸ್ಯ ಸಾಹಿತಿಗಳು, ಜಾನಪದ ಸಾಹಿತಿಗಳು, ಪತ್ರಿಕೋದ್ಯಮಿಗಳು, ಅಂಕಣಕಾರರು, ಪ್ರಬಂಧಕಾರರು, ನಾಟಕಕಾರರು, ಸಂಶೋಧಕರು, ವಿಮರ್ಶಕರು, ಅನುವಾದಕರು, ವಿಜ್ಞಾನ ಸಾಹಿತಿಗಳು, ಶರಣ ಸಾಹಿತಿಗಳು, ದಾಸ ಸಾಹಿತಿಗಳು, ಚಿತ್ರ ಸಾಹಿತಿಗಳು, ಕವಿ ಕಾವ್ಯನಾಮ, ಆತ್ಮಚರಿತ್ರೆಗಳು, ಪ್ರಶಸ್ತಿ ವಿಜೇತರು ಇನ್ನೂ ಮುಂತಾದ ಕನ್ನಡ ಕವಿಗಳ ಕೂಟವನ್ನು ವಿಶಾಲವಾದ ಅಂತರ್ಜಾಲದಲ್ಲಿ ಕಾಣುತ್ತೇವೆ. ಹಳೆಗನ್ನಡದಿಂದ ಹೊಸಗನ್ನಡದವರೆಗೂ ಪ್ರತಿಯೊಬ್ಬರ ಮಾಹಿತಿ, ಕೃತಿಗಳನ್ನು ಅಂತ ರ್ಜಾಲದಲ್ಲಿ ನೋಡುತ್ತೇವೆ. ಅವರ ದಿನದಿನದ ಬರವಣಿಗೆಗಳನ್ನು ಸಹ ಪ್ರಕಟಿಸಲಾಗುತ್ತದೆ. ವಿಮರ್ಶೆಗಳನ್ನು, ಹೊಸ ಬರವಣಿಗೆಗಳನ್ನು ಸಹ ಸೇರಿಸಲಾಗುತ್ತದೆ.

“**ಹಳೆಗನ್ನಡದ ಕವಿಗಳು** : ಅಂತರ್ಜಾಲದಲ್ಲಿ ಹಳೆಗನ್ನಡದ ಕವಿಗಳು ಅವರ ಕೃತಿಗಳನ್ನು ತೆರೆದು ಓದಬಹುದು. ಹಳೆಗನ್ನಡದ ಕವಿಗಳೆಂದರೆ ನೃಪತುಂಗ, ಶ್ರೀವಿಜಯ, ಪಂಪ, ಪೊನ್ನ, ರನ್ನ, ಚಾವುಂಡ ರಾಯ ಮುಂತಾದವರ ವಿವರಣೆ ಸಾಹಿತ್ಯ ಕೃತಿಗಳನ್ನು ಅಂತರ್ಜಾಲದಲ್ಲಿ ಪಡೆದುಕೊಳ್ಳಬಹುದು.

ನಡುಗನ್ನಡದ ಕವಿಗಳು : ಅಂತರ್ಜಾಲದಲ್ಲಿ ನಡುಗನ್ನಡದ ಕವಿಗಳನ್ನು ಸಹ ಕಾಣುತ್ತೇವೆ. ಅವರೆಂದರೆ ನಾಗವರ್ಮ ೧, ದುರ್ಗಸಿಂಹ, ಜಗದಾಳ ಸೋಮನಾಥ, ನೇಮಿಚಂದ್ರ, ಬಂಧುವರ್ಮ, ನಾಗವರ್ಮ ೨, ರಾಜಾದಿತ್ಯ, ವಿರುಪಾಕ್ಷ ಪಂಡಿತ, ರಾಜರಾಯ, ಮಂಗರಾಜ, ಹರಿಹರ, ಕೇಶಿರಾಜ, ಭೀಮಕವಿ, ಕುಮಾರವ್ಯಾಸ, ಚಾಮರಸ, ಲಕ್ಷ್ಮೀಶ, ನಾಗಚಂದ್ರ, ರುದ್ರಭಟ್ಟ, ಆಂಡಯ್ಯ, ನಯಸೇನ, ತಿರುಮಲಾರ್ಯ ಇನ್ನು ಮುಂತಾದ ನಡುಗನ್ನಡದ ಕವಿಗಳು ವೈಯಕ್ತಿಕ ಪರಿಚಯ ಹಾಗೂ ಲಭ್ಯವಿದ್ದರೆ ಅವರ ಸಂಪೂರ್ಣ ಮಾಹಿತಿ ಸಿಗುತ್ತದೆ. ಇಲ್ಲವಾದರೆ ಕೃತಿಗಳು, ನಾಮಧೇಯಗಳನ್ನು ಕಾಣುತ್ತೇವೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು : ಕನ್ನಡ ಸಾಹಿತ್ಯಕ್ಕೆ ಸುವರ್ಣ ಮಹತ್ವವೆಂದರೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು. ಇವರು ಕನ್ನಡಕ್ಕೆ ಸಲ್ಲಿಸಿರುವ ಸೇವೆ ಅಗ್ರಗಣ್ಯ. ಅವರನ್ನು ಇಂದು ಅಂತರ್ಜಾಲದಲ್ಲಿ ಕಾಣುವ ಆಧುನಿಕತೆ ಬಂದಿದೆ ಎಂದರೆ ಕನ್ನಡಿಗರು ಹೆಮ್ಮೆ ಪಡಬೇಕಾದ ವಿಷಯವೇ. ಕುವೆಂಪು, ದ.ರಾ.ಬೇಂದ್ರ, ಶಿವರಾಮಕಾರಂತ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ವಿ.ಕೃ.ಗೋಕಾಕ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಹಾಗೂ ಚಂದ್ರಶೇಖರ್ ಕಂಬಾರ. ಎಂಟು ಜನ ಕನ್ನಡ ಸಾಹಿತ್ಯ ಸಾರಸತ್ವ ಲೋಕಕ್ಕೆ ದಿಗ್ಗಜರು. ಇವರ ವೈಯಕ್ತಿಕ ವಿಚಾರ ಸಾಹಿತ್ಯ, ಅದರ ನಿರ್ಮಾಣ ಕಾರ್ಯ, ಕೃತಿಗಳನ್ನು ಸಹ ಅಂತರ್ಜಾಲದಲ್ಲಿ ತಿಳಿಯುತ್ತೇವೆ.

ಅಂತರ್ಜಾಲದಲ್ಲಿ ಹಿರಿಯ ಚೇತನಗಳು : ಅಂತರ್ಜಾಲದಲ್ಲಿ ಮಹತ್ವದ ಸ್ಥಾನ ಪಡೆದಿರುವ ಹಿರಿಯ ಚೇತನಗಳನ್ನು ಅವರ ವಯಕ್ತಿಕ ಪರಿಚಯವನ್ನು ತಿಳಿಯುತ್ತೇವೆ. ನಾವು ಯಾರ ಬಗ್ಗೆ ತಿಳಿಯಬೇಕೋ ಅವರ ಹೆಸರನ್ನು ಗೂಗಲ್‌ನಲ್ಲಿ ಕನ್ನಡ ಭಾಷೆ ಆಯ್ಕೆ ಮಾಡಿಕೊಂಡರೆ ಅವರ ಸಂಪೂರ್ಣ ಮಾಹಿತಿಯು ನಮಗೆ ಕನ್ನಡ ಬರವಣಿಗೆಯಲ್ಲಿ ಲಭ್ಯವಾಗುತ್ತದೆ. ಅದನ್ನು ಕವಿ ತೆರೆವುಗೊಳಿಸಬಹುದು. ಇಲ್ಲದಿದ್ದರೆ ಮುದ್ರಿತ ಪ್ರತಿಗಳನ್ನು ಸಹ ತೆಗೆದುಕೊಳ್ಳಬಹುದು. ಸಾಹಿತಿಗಳು ತಮ್ಮ ಬರವಣಿಗೆಯನ್ನು ಅಂತರ್ಜಾಲ ತಾಣಗಳಲ್ಲಿ ಸೇರಿಸುತ್ತ ಇರುತ್ತಾರೆ. ಅಂತ ಮಹಾನ್ ವ್ಯಕ್ತಿಗಳನ್ನು ಈ ಕೆಳಕಂಡಂತೆ ತಿಳಿಯುತ್ತೇವೆ. ಕೆಂಪು ನಾರಾಯಣ, ಮುದ್ದಣ್ಣ, ಕೆ.ಎಫ್. ಕಿಟೆಲ್, ರಾಲಿನ್ ಮೆಕೆಂಜಿ, ಬಿ.ಎಲ್. ರೈಸ್, ಫ್ಲೀಟ್, ಹರ್ಮನ್ ಮೋಗ್ಲಿಂಗ್, ಸಿದ್ಧಾಂತಿ ಶಿವಶಂಕರ ಶಾಸ್ತ್ರಿ, ತಾತಾಚಾರ್ಯ, ಉತ್ತಂಗಿ ಚೆನ್ನಪ್ಪ, ರಾಮಕೃಷ್ಣಯ್ಯ, ಶಿವರಾಮ ಉಡುಪ, ಆಲೂರು ವೆಂಕಟರಾಯರು, ಬಿ.ಎಂ.ಶ್ರೀ. ಹುಯಿಲಗೋಳ

ನಾರಾಯಣರಾವ್, ಎ.ಆರ್. ಕೃಷ್ಣಶಾಸ್ತ್ರಿ, ಡಿ.ವಿ. ಗುಂಡಪ್ಪ, ಟಿ.ಎಸ್. ವೆಂಕಣ್ಣಯ್ಯ, ಕಡಿದಾಳ ಮಂಜಪ್ಪ, ಸುಭೇಧ ರಾಮರಾವ್, ಉಗ್ರಾಣ ಮಂಗೇಶರಾಯರು, ನವರತ್ನ ರಾಮರಾಯ, ಎಸ್. ಅನಂತ ನಾರಾಯಣ, ವಿ. ಸೀತಾರಾಮಯ್ಯ, ಮಧುರಚೆನ್ನ, ಬೆನೆಗಲ್ ರಾಮರಾಯ, ಚಂದ್ರಶೇಖರ್ ಶಾಸ್ತ್ರಿ, ಶಿಶಿ ಬಸವನಾಳ, ಜಿ.ಪಿ. ರಾಜರತ್ನಂ, ಆನಂದಕಂದ, ಟಿ.ಪಿ. ಕೈಲಾಸಂ, ಇನ್ನು ಮುಂತಾದ ಹಿರಿಯ ಚೇತನ ಸಾಹಿತಿಗಳನ್ನು ಅಂತರ್ಜಾಲದಲ್ಲಿ ಕಾಣುತ್ತೇವೆ.

ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯದ ಕುಲೋದ್ಧಾರಕರು : ಅಂದರೆ ಕನ್ನಡ ಸಾಹಿತಿಗಳು ಕನ್ನಡ ಅಭಿವೃದ್ಧಿಯ ಉದ್ದೇಶದಿಂದ ಅಂತರ್ಜಾಲದಲ್ಲಿ ಸಹ ಅದನ್ನು ಜಾರಿಗೆ ತಂದಿರುವುದು ನಮ್ಮೆಲ್ಲರಿಗೂ ಸಂತಸದ ವಿಷಯ. ಅಂತಹ ಕನ್ನಡ ಕುಲೋದ್ದಾರಕರನ್ನು ಕೆಳಕಂಡಂತೆ ತಿಳಿಯಬಹುದು. ಅಂತ ರ್ಜಾಲದಲ್ಲಿ ಇವರ ಬಗ್ಗೆ ತಿಳಿಯಬೇಕಾದರೆ ಗೂಗಲ್‌ನಲ್ಲಿ ಕನ್ನಡ ಭಾಷೆ ಆಯ್ಕೆ ಮಾಡಿಕೊಂಡು ಹೆಸರನ್ನು ನಮೂದಿಸಿದರೆ ಅವರ ಬಗ್ಗೆ ತಿಳಿದುಕೊಳ್ಳಬಹುದು. ಬೇಕಾದಲ್ಲಿ ಅದನ್ನು ಮುದ್ರಣ ರೂಪ ದಲ್ಲೂ ತೆಗೆದುಕೊಳ್ಳಬಹುದು. ಕನ್ನಡ ಕುಲೋದ್ದಾರಕರಾದ ಇವರನ್ನು ಅಂತರ್ಜಾಲದಲ್ಲಿ ಕಾಣುತ್ತೇವೆ. ಸರ್. ಕೆ.ಪಿ. ಪುಟ್ಟಣ್ಣ ಶೆಟ್ಟಿ, ಕರ್ಪೂರ ಶ್ರೀನಿವಾಸ್ ರಾವ್, ಎಚ್.ವಿ. ನಂಜುಂಡ, ಕಂಠೀರವ ನರಸಿಂಹ ರಾಜ ಒಡೆಯರ್, ಜಯಚಾಮರಾಜ ಒಡೆಯರ್, ಮದವೀಡು ಕೃಷ್ಣರಾಯ, ಎಂ.ವಿ. ಸೀತಾರಾಮಯ್ಯ, ಸರೋಜಿನಿ ಮಹಿಷಿ, ಜಿ. ನಾರಾಯಣ ಮುಂತಾದವರು.

ಅಂತರ್ಜಾಲದಲ್ಲಿ ಕನ್ನಡ ಕಾದಂಬರಿಕಾರರು : ಕನ್ನಡ ಸಾಹಿತ್ಯ ಲೋಕದ ಹಲವಾರು ಕಾದಂಬರಿಕಾರರು ಸಹ ಅಂತರ್ಜಾಲದಲ್ಲಿ ವಿಶೇಷ ಸ್ಥಾನವನ್ನು ಪಡೆದಿರುವುದು ನಾವು ತಿಳಿಯ ಬಹುದು. ಕಾದಂಬರಿಗಳ ಪುಟಗಳು, ವಿಮರ್ಶೆಗಳನ್ನು ಕಾದಂಬರಿಕಾರರು ಅಂತರ್ಜಾಲದಲ್ಲಿ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಕಾದಂಬರಿಕಾರರೆಂದರೆ – ಎಂ.ಎಸ್ ಪುಟ್ಟಣ್ಣ, ಕರೂರು ವಾಸುದೇವಾ ಚಾರ್ಯ, ಗಳಗನಾಥ, ಮಿರ್ಜಿ ಅಣ್ಣಾರಾಯ, ರಾಮಮೂರ್ತಿ, ರಾವ್ ಬಹದ್ದೂರ್, ಅನ.ಕೃ, ತ.ರಾಸು. ಶಂಕರ ಮುಕಾಶಿ ಪುಣೇಕರ, ಕೆ.ವಿ. ಅಯ್ಯರ್, ಅಶ್ವಥ, ಕೃಷ್ಣಮೂರ್ತಿ ಪುರಾಣಿಕ, ನಿರಂಜನ, ಚದುರಂಗ, ಟಿ.ಕೆ. ರಾಮರಾವ್, ಬೆಳಗೆರೆ ಕೃಷ್ಣಶಾಸ್ತ್ರಿ, ಎನ್. ನರಸಿಂಹಯ್ಯ, ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ, ಜಿ.ಎಸ್. ಸಿದ್ದಲಿಂಗಯ್ಯ, ಎಸ್.ಎಲ್. ಭೈರಪ್ಪ, ಕೆ.ಟಿ. ಗಟ್ಟಿ, ಸು. ರುದ್ರಮೂರ್ತಿ ಶಾಸ್ತ್ರಿ, ಪೂರ್ಣಚಂದ್ರ ತೇಜಸ್ವಿ, ನಾ. ಡಿಸೋಜ, ನೇಮಿಚಂದ್ರ, ಕೆದಂಬಾಡಿ ಜತ್ತಪ್ಪ ರೈ, ಸತ್ಯಕಾಮ, ಮತ್ತೂರು ಕೃಷ್ಣಮೂರ್ತಿ, ಶಾಂತರಸ, ಡಾ. ಸಿದ್ದಲಿಂಗಪಟ್ಟಣ ಶೆಟ್ಟಿ, ಸುದರ್ಶನ ದೇಸಾಯಿ, ಎಚ್.ಕೆ. ಅನಂತರಾಮು, ಮೊಗಸಾಲೆ, ಪಿ.ಎಸ್. ರಾಮಾನುಜಂ, ತ.ಪು. ವೆಂಕಟರಾಮು, ಕೆ. ಸದಾಶಿವ.

ಇನ್ನೂ ಮುಂತಾದ ಪ್ರಖ್ಯಾತ ಕಾದಂಬರಿಕಾರರು ಕನ್ನಡ ಭಾಷೆಯನ್ನು ಎಲ್ಲರ ಕೈಗೆ ಸುಲಭವಾಗಿ ಎಟುಕುವಂತೆ ಮಾಡಲು ಮುಂದಾಗಿ ಇಂದು ಅಂತರ್ಜಾಲದಲ್ಲಿ ಕನ್ನಡ ಭಾಷೆ ವಿಜೃಂಭಿಸುತ್ತಿರುವುದಕ್ಕೆ ಇವರೆಲ್ಲರ ಸಹಕಾರ ಬೆಂಬಲವೇ ಕಾರಣವಾಗಿದೆ.

ಅಂತರ್ಜಾಲದಲ್ಲಿ ಮಹಿಳಾ ಸಾಹಿತಿಗಳು : ಇತರ ಸಾಹಿತಿಗಳಂತೆ ಇವರು ಸಹ ಕನ್ನಡ ಸಾಹಿತ್ಯ ರಚನೆಯಲ್ಲಿ ಅಂತರ್ಜಾಲವನ್ನು ಬಳಸಿಕೊಳ್ಳುತ್ತಿದ್ದು, ನಮ್ಮ ಕನ್ನಡ ಸಾಹಿತ್ಯ ಪಡೆದುಕೊಂಡಿರುವ ಮಹತ್ವದ ಬಿಂಬವನ್ನು ಸೂಚಿಸುತ್ತದೆ. ಅಂತಹ ಮಹಿಳಾ ಸಾಹಿತ್ಯದ ಸಾಹಿತಿಗಳೆಂದರೆ – ಹೆಳವನಕಟ್ಟೆ ಗಿರಿಯಮ್ಮ, ತಿರುಮಲಾಂಬ, ಆರ್. ಕಲ್ಯಾಣಮ್ಮ, ತಿರುಮಲೆ ರಾಜಮ್ಮ, ಕೊಡಗಿನ ಗೌರಮ್ಮ, ಎಚ್.ವಿ. ಸಾವಿತ್ರಮ್ಮ, ತ್ರಿವೇಣಿ, ತಾಯಿಜಯದೇವಿ ಲಿಗಾಡೆ, ವಾಣಿ, ಎಂ.ಕೆ. ಇಂದಿರಾ, ವೈದೇಹಿ, ಅನುಪಮಾ ನಿರಂಜನ, ಉಷಾ ನವರತ್ನರಾಂ, ಶಾಂತಾದೇವಿ ಮಾಳವಾಡ, ಸಾಯಿಸುತೆ, ಆರ್ಯಾಂಭ ಪಟ್ಟಾಭಿ, ಕಮಲಾ ಹಂಪನಾ, ಎಚ್.ಜಿ. ರಾಧಾದೇವಿ, ಸಾರಾ ಅಬೂಬಕರ್, ಡಾ. ಹೇಮಾ ಪಟ್ಟಣಶೆಟ್ಟಿ, ಗೀತಾ ನಾಗಭೂಷಣ, ಸವಿತಾ ನಾಗಭೂಷಣ, ಚಿ. ನ. ಮಂಗಳಾ, ವೀಣಾ ಶಾಂತೇಶ್ವರ, ಗೀತಾ ಬಿ.ಯು. ಮುಂತಾದವರು.

ನವ್ಯ ಕವಿಗಳು : ಬಸವಪ್ಪ ಶಾಸ್ತ್ರಿ, ಪಂಜೆ ಮಂಗೇಶರಾಯ, ಸೇಡಿಯಾಪು ಕೃಷ್ಣಭಟ್ಟ, ಡಿ.ಎಸ್. ಕರ್ಕಿ, ದಿನಕರ ದೇಸಾಯಿ, ಎಸ್.ವಿ. ಪರಮೇಶ್ವರ ಭಟ್ಟ, ಕೆ.ಎಸ್. ನರಸಿಂಹಸ್ವಾಮಿ, ಕೈಯ್ಯಾರ ಕಿಞ್ಞಣ್ಣರೈ, ಗೋಪಾಲಕೃಷ್ಣ ಅಡಿಗ, ಸಿದ್ಧಯ್ಯ ಪುರಾಣಿಕ, ಸು.ರಂ. ಎಕ್ಕುಂಡಿ, ಬಿ.ಸಿ. ರಾಮಚಂದ್ರ ಶರ್ಮ, ಜಿ.ಎಸ್. ಶಿವರುದ್ರಪ್ಪ, ಎ.ಕೆ. ರಾಮಾನುಜಂ, ಚನ್ನವೀರ ಕಣವಿ, ಕೆ. ನಿಸಾರ್ ಅಹಮದ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಸುಮತೀಂದ್ರ ನಾಡಿಗ, ಅಡ್ಯನಡ್ಕ ಕೃಷ್ಣಭಟ್ಟ, ಎಚ್.ಎಸ್. ವೆಂಕಟೇಶಮೂರ್ತಿ, ದೊಡ್ಡರಂಗೇಗೌಡ, ಬಿ.ಆರ್. ಲಕ್ಷ್ಮಣರಾವ್, ದುಂಡಿರಾಜ್, ಇಟಗಿ ಈರಣ್ಣ.

ಅಂತರ್ಜಾಲದಲ್ಲಿ ಬಂಡಾಯ ಸಾಹಿತಿಗಳು : ಅಂತರ್ಜಾಲದಲ್ಲಿ ಇತರ ಸಾಹಿತಿಗಳಂತೆ ಬಂಡಾಯ ಸಾಹಿತಿಗಳು ಸಹ ಬಂಡಾಯ ಸಾಹಿತ್ಯವನ್ನು ಅಂತರ್ಜಾಲದಲ್ಲಿ ಪ್ರಕಟಿಸಿರುವುದು ಗಮನಾರ್ಹವಾದದ್ದು. ಅಂತಹ ಬಂಡಾಯ ಸಾಹಿತಿಗಳನ್ನು ಕೆಳಕಂಡಂತೆ ತಿಳಿಯಬಹುದು. ಪಾಟೀಲ್ ಪುಟ್ಟಪ್ಪ, ಸಿದ್ದಲಿಂಗಯ್ಯ, ಅರವಿಂದ ಮಾಲಗತ್ತಿ, ಬರಗೂರು ರಾಮಚಂದ್ರಪ್ಪ, ಕುಂ. ವೀರಭದ್ರಪ್ಪ, ದೇವನೂರು ಮಹಾದೇವ, ಎಲ್. ಹನುಮಂತಯ್ಯ, ಫಕೀರ್ ಮಹಮದ್ ಕಪಾಡಿ ಇನ್ನು ಮುಂತಾದವರ ಬರಹಗಳನ್ನು ಅಂತರ್ಜಾಲದಲ್ಲಿ ತಿಳಿಯುತ್ತೇವೆ.

ಅಂತರ್ಜಾಲದಲ್ಲಿ ಹಾಸ್ಯ ಸಾಹಿತಿಗಳು : ಇತರರಂತೆ ಹಾಸ್ಯ ಸಾಹಿತಿಗಳು ಸಹ ಅಂತರ್ಜಾಲ ಲೋಕದಲ್ಲಿ ಪ್ರಾಮುಖ್ಯತೆ ಪಡೆದಿದ್ದಾರೆ. ಅವರೆಂದರೆ ನಾ. ಕಸ್ತೂರಿ, ಶಿವರಾಂ, ಬೀಚಿ, ಟಿ. ಸುಂದರ್ ರಾವ್, ಗುಂಡುರಾವ್, ಎಚ್.ಎನ್. ಶಿಲಾಸ್ವೀ, ಭುವನೇಶ್ವರಿ ಹೆಗಡೆ, ದಾಶರಥಿ ದೀಕ್ಷಿತ್, ಎಂ.ಎಸ್. ಸುಂಕಾಪುರ, ಇನ್ನು ಮುಂತಾದವರು.

ಅಂತರ್ಜಾಲದಲ್ಲಿ ಜಾನಪದ ಸಾಹಿತಿಗಳು : ಜಾನಪದ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಕಾರವಾಗಿದ್ದು, ಇದನ್ನು ಜನಪದಗಾರರು ಹಾಡಿನ ಮೂಲಕ, ಬರವಣಿಗೆಯ ಮೂಲಕವು ಅಂತ ರ್ಜಾಲವನ್ನು ಅವಲಂಭಿಸಿ ಪ್ರಕಟಿಸಿದ್ದಾರೆ. ಅಂತಹವರನ್ನು ಈ ಕೆಳಕಂಡಂತೆ ತಿಳಿಯಬಹುದು. ಸಂತ ಶಿಶುನಾಳ ಷರೀಫ್, ಎಸ್.ಕೆ. ಕರೀಂ ಖಾನ್, ಸಿ.ಪಿ. ಲಿಂಗಣ್ಣ, ಎಚ್.ಎಲ್. ನಾಗೇಗೌಡ, ಗೋರು ಚನ್ನಬಸಪ್ಪ, ಪರಮಶಿವಯ್ಯ, ಇನ್ನು ಮುಂತಾದವರು ಪ್ರಖ್ಯಾತಿ ಪಡೆದಿದ್ದಾರೆ.

ಅಂತರ್ಜಾಲದಲ್ಲಿ ಪತ್ರಿಕೋದ್ಯಮಿಗಳು, ಅಂಕಣಕಾರರು, ಪ್ರಬಂಧಕಾರರು : ಹಿಂದಿನ ಕೆಲವು ವರ್ಷಗಳ ಹಿಂದೆ ಕನ್ನಡವನ್ನು ಅಂತರ್ಜಾಲದಲ್ಲಿ ಬಳಸವುದರ ಸಂಖ್ಯೆ ಕಡಿಮೆ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅವರ ಸಂಖ್ಯೆ ಹೆಚ್ಚುತ್ತಿರುವುದು ಅಂತರ್ಜಾಲದಲ್ಲಿ ಕನ್ನಡ ಭಾಷೆ, ಸಾಹಿತ್ಯ ಪಡೆದು ಕೊಂಡಿರುವ ಮಹತ್ವ ಕಾರಣವಾಗಿದೆ. ಇದಕ್ಕೆ ಪ್ರೋತ್ಸಾಹ ನೀಡುತ್ತಿರುವವರು ಪತ್ರಿಕೋದ್ಯಮಿಗಳು, ಅಂಕಣಕಾರರು, ಪ್ರಬಂಧಕಾರರು. ಇವರು ಕಾಲಕಾಲಕ್ಕೆ ಬದಲಾಗುವ ವಿದ್ಯಮಾನಗಳ ಬಗ್ಗೆ ಲೇಖನಗಳ ಮೂಲಕ ಜನಸಾಮಾನ್ಯರಿಗೆ ತಲುಪುವಂತೆ ಮಾಡುತ್ತಿದ್ದಾರೆ. ಇವರು ಅಂತರ್ಜಾಲದಲ್ಲಿ ಪ್ರಕಟಿಸಿದ ಲೇಖನ ಬರಹಗಳನ್ನು ಇಂದು ಸಾವಿರಾರು ಮಂದಿ ಓದುತ್ತಿದ್ದಾರೆ. ಅಂತಹ ಬರಹಗಾರರನ್ನು ತಿಳಿಯ ಬಹುದು. ಎಂ. ವೆಂಕಟಕೃಷ್ಣಯ್ಯ, ಡಾ. ಆರ್.ಆರ್. ದಿವಾಕರ್, ಬಿ. ಶಿವಮೂರ್ತಿಶಾಸ್ತ್ರಿ, ಎಂ.ಎ. ರಾಮಾನುಜ ಅಯ್ಯಂಗಾರ್, ಮೊಹರೆ ಹನುಮಂತರಾಯ, ವೀರಕೇಸರಿ, ಸೀತರಾಮಶಾಸ್ತ್ರಿ, ಟಿ.ಎಸ್. ರಾಮಚಂದ್ರರಾಯ, ಎ.ಎನ್. ಮೂರ್ತಿ ರಾಮ, ಸಿದ್ಧವನಹಳ್ಳಿ ಕೃಷ್ಣಶರ್ಮ, ಪಿ ಲಂಕೇಶ್, ಎ.ಎಸ್. ಮೂರ್ತಿ, ಬಸವರಾಜ ಕಟ್ಟೀಮಣಿ, ಮಹಾದೇವ ಬಣಕಾರ, ಅಬ್ದುಲ್ ಬಷೀರ್, ವಿಶ್ವೇಶ್ವರ್ ಭಟ್, ರವಿಬೆಳೆಗೆರೆ, ನಾಗೇಶ ಹೆಗ್ಗಡೆ ಮುಂತಾದವರ ಬರಹಗಳನ್ನು ಅಂತರ್ಜಾಲದಲ್ಲಿ ಓದಬಹುದು.

ಅಂತರ್ಜಾಲದಲ್ಲಿ ನಾಟಕಕಾರರು : ನಾಟಕವು ಸಹ ಸಾಹಿತ್ಯದ ಒಂದು ಪ್ರಕಾರವಾಗಿದ್ದು, ಅಂತ ರ್ಜಾಲದಲ್ಲಿ ಕಾಣುವ ಸುವರ್ಣ ಅವಕಾಶ ಬಂದಿದೆ. ಇದು ಕನ್ನಡಿಗರಿಗೆ ಉನ್ನತವಾದ ಕಾರ್ಯ ವಾಗಿದೆ. ನಾಟಕಕಾರರೆಂದರೆ ಬಿ ಪುಟ್ಟಸ್ವಾಮಿ, ಎಸ್.ವಿ. ರಂಗಣ್ಣ, ಸಂಸ, ಶ್ರೀರಂಗ, ಪರ್ವತವಾಣಿ, ಎಂ.ಆರ್. ಶ್ರೀನಿವಾಸಮೂರ್ತಿ, ಶಾಂತಕವಿ, ಬಿ.ವಿ. ಕಾರಂತ, ವಿ.ವಿ. ಜೋಶಿ, ಚಂದ್ರಶೇಖರ್ ಕಂಬಾರ, ಇನ್ನು ಮುಂತಾದವರು. ಅಂತರ್ಜಾಲದಲ್ಲಿ ತಮ್ಮ ನಾಟಕಗಳನ್ನು ಪ್ರಕಟಿಸಿರುವುದನ್ನು ತಿಳಿಯುತ್ತೇವೆ.

ಅಂತರ್ಜಾಲದಲ್ಲಿ ಸಂಶೋಧಕರು : ಇವರು ಸಹ ತಮ್ಮ ಸಂಶೋಧನೆಗಳಿಗೆ ಸಂಬಂಧಿಸಿದಂತೆ ಬರಹಗಳನ್ನು ಸಾಧನೆಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಿದ್ದಾರೆ. ಅಂತಹವರೆಂದರೆ ಆರ್. ನರಸಿಂಹಾ ಚಾರ್, ತೀ.ತಾ. ಶರ್ಮ, ತೀ.ನಂ.ಶ್ರೀ., ಡಿ.ಎಲ್. ನರಸಿಂಹಚಾರ್, ಆರ್.ಸಿ. ಹಿರೇಮಠ, ಎಂ. ಚಿದಾನಂದಮೂರ್ತಿ, ಸಾ.ಶಿ. ಮರಳಯ್ಯ, ದೇ. ಆವರೇಗೌಡ, ಎಸ್. ವಿದ್ಯಾಶಂಕರ್ ಮುಂತಾದವರು.

ಅಂತರ್ಜಾಲದಲ್ಲಿ ವಿಮರ್ಶಕರು : ಇವರು ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ. ಇವರು ಹಲವಾರು ವಿಮರ್ಶಾ ಕೃತಿ. ಲೇಖನಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಿದ್ದಾರೆ. ಅವರೆಂದರೆ ಮುಳಿಯ ತಿಮ್ಮಪ್ಪಯ್ಯ, ರಂ.ಶ್ರೀ. ಮುಗಳಿ, ಕೀರ್ತಿನಾಥ ಕುರ್ತುಕೋಟಿ, ಡಿ.ಆರ್. ನಾಗರಾಜ್, ಎಲ್.ಎಸ್. ಶೇಷಗಿರಿರಾಯ, ಮುಗಳ್ಳಿ ಗಣೇಶ, ಎಚ್.ಕೆ. ರಂಗನಾಥ, ಎಸ್. ದಿವಾಕರ್, ಕೀ.ರಂ. ನಾಗರಾಜು ಮುಂತಾದ ವಿಮರ್ಶಕರು ಕನ್ನಡ ಸಾಹಿತ್ಯ ಲೋಕದಲ್ಲಿ ಪ್ರಮುಖರು ಹಾಗೂ ಅಂತರ್ಜಾಲ ದಲ್ಲಿ ಸಹ ಕಾಣಿಸಿಕೊಳ್ಳುತ್ತಾರೆ.

ಅಂತರ್ಜಾಲದಲ್ಲಿ ಅನುವಾದಕರು : ಅಂತರ್ಜಾಲದಲ್ಲಿ ಅನುವಾದಕರ ಸ್ಥಾನ ಮಹತ್ವವಾದದ್ದು. ಏಕೆಂದರೆ ಅನುವಾದ ಮುಖ್ಯವಾಗಿ ಬೇಕು. ಇದನ್ನು ಈ ಅನುವಾದಕರು, ಕನ್ನಡ ಸಾಹಿತ್ಯದಲ್ಲಿ ಮಾಡಿ ಅದನ್ನು ಅಂತರ್ಜಾಲದಲ್ಲಿ ಪ್ರಕಟಿಸುತ್ತಾರೆ. ಅಂತಹ ಅನುವಾದಕರಿಂದ ಇತರ ಕ್ಲಿಷ್ಟವಾದ ಸಾಹಿತ್ಯವನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಅಂತರ್ಜಾಲದಲ್ಲಿ ಸಾಧ್ಯವಾಗಿದೆ. ಅಂತಹವರೆಂದರೆ ಬಿ. ವೆಂಕಟಚಾರ್ಯ, ವಂಶಿ ರಾಜಾ ಚೆಂಡೂರ್, ಸರಿತಾ, ಜ್ಞಾನಾನಂದ, ಜಿ. ಸೂರಿ ಮುಂತಾದವರು.

ಅಂತರ್ಜಾಲದಲ್ಲಿ ವಿಜ್ಞಾನ ಸಾಹಿತಿಗಳು : ಅಂತರ್ಜಾಲದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಸಾಹಿತ್ಯ ವನ್ನು ಲೇಖನಗಳನ್ನು ಪ್ರಕಟಿಸುವಲ್ಲಿ ಇವರ ಪಾತ್ರ ಮಹತ್ವದ್ದು. ಅವರೆಂದರೆ ಬೆಳ್ಳಾವೆ ವೆಂಕಟನಾರ ಣಪ್ಪ, ಬಿ.ಜಿ.ಎಲ್. ಸ್ವಾಮಿ, ಜಿ.ಟಿ. ನಾರಾಯಣ, ಎಚ್. ಗಿರಿಜಮ್ಮ, ಸಿ.ಆರ್. ಚಂದ್ರಶೇಖರ್, ಪ್ರಭು ಶಂಕರ್ ಮುಂತಾದವರು.

ಅಂತರ್ಜಾಲದಲ್ಲಿ ಶರಣ ಸಾಹಿತಿಗಳು : ಶರಣರು ಕ್ನನಡ ಸಾಹಿತ್ಯ ಲೋಕದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಅಂತಹವರ ಬಗ್ಗೆಯು ಅಂತರ್ಜಾಲದಲ್ಲಿ ನಾವು ಮಾಹಿತಿಗಳನ್ನು ತಿಳಿದುಕೊಳ್ಳುತ್ತೇವೆ. ಶರಣರ ವೈಯಕ್ತಿಕ ವಿಚಾರಗಳ ಜೊತೆಗೆ ಅವರ ವಚನಗಳನ್ನು ಸಹ ತಿಳಿದುಕೊಳ್ಳುತ್ತೇವೆ. ಅಂತಹ ಶರಣರೆಂದರೆ ಅಲ್ಲಮಪ್ರಭು, ಬಸವಣ್ಣ, ಮಾದರ ಚೆನ್ನಯ್ಯ, ಅಂಬಿಗರ ಚೌಡಯ್ಯ, ಜೇಡರ ದಾಸಿ ಮಯ್ಯ , ಅಕ್ಕಮಹಾದೇವಿ, ಅಕ್ಕನಾಗಮ್ಮ, ಅಮುಗೆ ರಾಯಮ್ಮ.

ಅಂತರ್ಜಾಲದಲ್ಲಿ ದಾಸರು : ಅಂತರ್ಜಾಲದಲ್ಲಿ ದಾಸರ ವಿಚಾರದ ಬಗ್ಗೆ ಹಾಗೂ ಅವರ ಕೀರ್ತನೆಗಳ ಬರಹಗಳನ್ನು ನಾವು ತಿಳಿಯುತ್ತೇವೆ. ಅಂತಹ ದಾಸರೆಂದರೆ ಶ್ರೀಪಾದರಾಯರು, ವ್ಯಾಸ ರಾಯ, ಪುರಂದರದಾಸ, ಕನಕದಾಸ, ವಿಜಯದಾಸ, ಜಗನ್ನಾಥದಾಸ ಮುಂತಾದವರು.

ಅಂತರ್ಜಾಲದಲ್ಲಿ ಚಿತ್ರ ಸಾಹಿತಿಗಳು : ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯ, ಸಾಹಿತಿಗಳಂತೆ ಚಿತ್ರ ಸಾಹಿತಿಗಳು ಕನ್ನಡ ಭಾಷೆಯನ್ನು ಅಂತರ್ಜಾಲದಲ್ಲಿ ಬಳಸುತ್ತಿದ್ದಾರೆ. ಅಂತಹ ಚಿತ್ರ ಸಾಹಿತಿಗಳೆಂದರೆ ಭಾರತೀ ಸುತ, ಶ್ರೀ. ಕೃಷ್ಣ ಅಲನಹಳ್ಳಿ, ನಾಗತೀಹಳ್ಳಿ ಚಂದ್ರಶೇಖರ್, ಎಂ.ಎನ್. ವ್ಯಾಸರಾಯ, ವಿಜಯ ನರಸಿಂಹ, ಹಂಸಲೇಖ, ಚಿ. ಉದಯ್ ಶಂಕರ್, ಆರ್.ಎನ್. ಜಯಗೋಪಾಲ್ ಮುಂತಾದ ಚಿತ್ರ ಸಾಹಿತಿಗಳಿದ್ದಾರೆ.

ಅಂತರ್ಜಾಲದಲ್ಲಿ ಕವಿ ಕಾವ್ಯ ನಾಮಗಳು : ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯದ ಕವಿಗಳ ಕಾವ್ಯ ನಾಮಗಳನ್ನು ಸಹ ತಿಳಿದುಕೊಳ್ಳಬಹುದು. ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ: ಕುವೆಂಪು, ದ.ರಾ. ಬೇಂದ್ರ: ಅಂಬಿಕಾನಯದತ್ತ, ಶ್ರೀ, ವಿ.ಕೃ.ಗೋಕಾಕ್: ವಿನಾಯಕ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್: ಶ್ರೀನಿವಾಸ, ವಿ. ಸೀತಾರಾಮಯ್ಯ: ವಿಸೀ, ಬೆಟಗೇರಿ ಕೃಷ್ಣಶರ್ಮ: ಆನಂದ ಕಂದ, ರಾಯಸಂ ಭೀಮಸೇನ್ ರಾವ್: ಬೀಚಿ, ಸಿದಯ್ಯ ಪುರಾಣಿಕ: ಕಾವ್ಯಾನಂದ, ಆರ್.ಬಿ. ಕುಲಕರ್ಣಿ: ರಾವ್ ಬಹದ್ದೂರ್, ರಂ.ಶ್ರೀ. ಮುಗಳಿ: ರಸಿಕರಂಗ, ಎ. ಶಿವರಾಮ್: ರಾಶಿ, ಅ. ನ. ಸೂರ್ಯಶಂಕರ: ತ್ರಿವೇಣಿ, ಪಂಜೆ ಮಂಗೇಶ ರಾಯರು: ಕವಿಶಿಷ್ಯ, ಅರಗ ಲಕ್ಷ್ಮಣರಾವ್: ಹೊಯ್ಸಳ, ತೀ. ನಂ. ಶ್ರೀಕಂಠಯ್ಯ: ತೀ.ನಂ.ಶ್ರೀ, ಎ.ವಿ. ಸೀತರಾಮಯ್ಯ: ರಾಘವ, ಕೂದವಳ್ಳಿ ಅಶ್ವಥ ನಾರಾಯಣರಾವ್: ಅಶ್ವಥ, ಆದ್ಯರಂಗಾಚಾರ್ಯ: ಶ್ರೀರಂಗ, ಎ.ಆರ್. ಕೃಷ್ಣಶಾಸ್ತ್ರಿ: ಶ್ರೀಪತಿ, ಸುಬ್ರಮಣ್ಯರಾಜೇ ಅರಸ್: ಚದುರಂಗ, ಜೆ.ಬಿ. ಜೋಶಿ: ಜಡಭರತ, ಅರಕಲ ಗೂಡು ನರಸಿಂಗರಾಯ ಕೃಷ್ಣರಾಯ: ಅನಕೃ, ತ.ರಾ.ಸುಬ್ಬರಾಯ: ತರಾಸು, ಡಿ.ವಿ. ಗುಂಡಪ್ಪ: ಡಿ.ವಿ.ಜಿ.

ಅಂತರ್ಜಾಲದಲ್ಲಿ ಆತ್ಮ ಚರಿತ್ರೆಗಳು : ಕನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿಗಳಲ್ಲದೆ ಆತ್ಮ ಚರಿತ್ರೆ ಗಳನ್ನು ಸಹ ತೆರೆದು ಓದುವ ಅವಕಾಶವಿದೆ. ಯಾವುದನ್ನು ಓದಬೇಕೆಂಬುದು ಅದನ್ನು ಗೂಗಲ್‌ನಲ್ಲಿ ನಮೂದಿಸಿದರೆ ಅದು ತೆರೆಯ ಮೇಲೆ ಬರಹದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಆಗ ಅದನ್ನು ಓದಲು ಬಹುದು, ಮುದ್ರಿತವಾಗಿ ಪಡೆಯಬಹುದು. ಅಂತಹ ಆತ್ಮ ಚರಿತ್ರೆಗಳು ಹಾಗೂ ಅದರ ರಚನೆಕಾರರನ್ನು ಈ ಕೆಳಕಂಡಂತೆ ತಿಳಿಯಬಹುದು. ಶಿವರಾಮ ಕಾರಂತ – ಹುಚ್ಚು ಮನಸಿನ ಹತ್ತು ಮುಖಗಳು, ಕುವೆಂಪು – ನೆನಪಿನ ದೋಣಿಯಲ್ಲಿ, ತ.ರಾ.ಸು – ಹಿಂತಿರುಗಿ ನೋಡಿದಾಗ, ಭೈರಪ್ಪ – ಬಿತ್ತಿ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ – ಭಾವ, ಎ.ಎಸ್. ಮೂರ್ತಿರಾವ್ – ಸಂಜೆಗಣ್ಣಿನ ಹಿನ್ನೋಟ, ಆದ್ಯರಂಗ

ಚಾರ್ಯ – ಸಾಹಿತಿಯ ಆತ್ಮ ಜಿಜ್ಞಾಸೆ, ದೇ. ಆವರೇಗೌಡ – ಹೋರಾಟದ ಬದುಕು, ಅನುಪಮ ನಿರಂಜನ – ನೆನಪು ಸಿಹಿಕಹಿ, ಪಿ. ಲಂಕೇಶ್ – ಹುಳಿಮಾವಿನ ಮರ. ಈ ರೀತಿ ಆತ್ಮ ಚರಿತ್ರೆಗಳನ್ನು ಅದರ ಪುಟಗಳನ್ನು ತೆರೆದು ನೋಡುವ ಅವಕಾಶ ಅಂತರ್ಜಾಲದಲ್ಲಿ ಬಳಕೆಯಲ್ಲಿದೆ.

ಅಂತರ್ಜಾಲದಲ್ಲಿ ಪ್ರಶಸ್ತಿ ವಿಜೇತ ಕವಿಗಳು : ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯದ ಹಲವಾರು ಪ್ರಶಸ್ತಿಗಳನ್ನು ಪಡೆದ ಕವಿಗಳ ಬಗ್ಗೆ ತಿಳಿದುಕೊಳ್ಳಬಹುದು. ಅವರ ವೈಯಕ್ತಿಕ ವಿಚಾರಗಳು. ಅವರ ಕೃತಿ ಗಳ ಬಗ್ಗೆ ವಿವರವಾಗಿ ತಿಳಿದಕೊಳ್ಳಬಹುದು. ಪ್ರಶಸ್ತಿ ವಿಜೇತ ಕವಿಗಳನ್ನು ಈ ಕೆಳಕಂಡಂತೆ ಕಾಣುತ್ತೇವೆ.

ಜ್ಞಾನಪೀಠ ಪ್ರಶಸ್ತಿ ವಿಜೇತರು – ಕುವೆಂಪು, ದರಾ ಬೇಂದ್ರ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ.ಕೃ.ಗೋಕಾಕ್, ಯು.ಆರ್. ಅನಂತಮೂರ್ತಿ, ಗಿರೀಶ ಕಾರ್ನಾಡ್.

ರಾಷ್ಟ್ರಕವಿ ಪ್ರಶಸ್ತಿ ವಿಜೇತರು – ಎಂ. ಗೋವಿಂದ ಪೈ, ಕುವೆಂಪು, ಜಿ.ಎಸ್. ಶಿವರುದ್ರಪ್ಪ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ – ಕುವೆಂಪು, ರಂ.ಶ್ರೀ. ಮುಗಳಿ, ದ.ರಾ. ಬೇಂದ್ರ, ಶಿವರಾಮಕಾರಂತ, ವಿ.ಕೃ. ಗೋಕಾಕ್, ಎ.ಆರ್. ಕೃಷ್ಣಶಾಸ್ತ್ರಿ, ದೇವುಡು, ಬಿ. ಪುಟ್ಟಸ್ವಾಮಯ್ಯ, ಎಸ್.ವಿ. ರಂಗಣ್ಣ, ಪು.ತಿ.ನ, ಡಿ.ವಿ.ಜಿ, ಮಾಸ್ತಿ, ಎಚ್. ತಿಪ್ಪೇರುದ್ರೇಸ್ವಾಮಿ, ಶ್ರೀರಂಗ, ವಿ. ಸೀತಾರಾಮಯ್ಯ, ಎಂ. ಗೋಪಾಲಕೃಷ್ಣ ಅಡಿಗ, ಎಸ್.ಎಲ್. ಭೈರಪ್ಪ, ಎಂ.ಶಿವರಾಂ, ಕೆ.ಎಸ್. ನರಸಿಂಹಸ್ವಾಮಿ, ಬಿ.ಜಿ.ಎಲ್. ಸ್ವಾಮಿ, ಎ.ಎನ್. ಮೂರ್ತಿ ರಾವ್, ಗೊರೂರು, ಚೆನ್ನವೀರೆ ಕಣವಿ, ಚದುರಂಗ, ಯಶವಂತ ಚಿತ್ತಾಲ, ಜಿ.ಎಸ್. ಶಿವರುದ್ರಪ್ಪ, ತ.ರಾ.ಸು, ವ್ಯಾಸರಾಯ ಬಲ್ಲಾಳ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಶಂಕರ ಮೊಕಾಶಿ ಪುಣೇಕರ್, ಹಾ.ಮಾ. ನಾಯಕ, ದೇವನೂರು ಮಹಾದೇವ, ಚಂದ್ರಶೇಖರ್ ಕಂಬಾರ.[೨]

ಅಂತರ್ಜಾಲದಲ್ಲಿ ಮಹತ್ವದ ಸ್ಥಾನ ಪಡೆದಿರುವ ಸಾಹಿತ್ಯ ನಿರ್ಮಾಣದ ಹಿರಿಯ ಚೇತನ ಗಳನ್ನು, ಅವರ ವೈಯಕ್ತಿಕ ಪರಿಚಯವನ್ನು ಸಾಕಷ್ಟು ವಿವರಣೆಯೊಂದಿಗೆ ತಿಳಿಯಬಹುದು. ಮಾಹಿತಿ ತಂತ್ರಜ್ಞಾನವು ಕನ್ನಡ ಸಾಹಿತ್ಯದ ಒಟ್ಟು ಸ್ವರೂಪವನ್ನು, ವೈವಿಧ್ಯತೆಯನ್ನು ಗುರುತಿಸಿ ಅದಕ್ಕೆ ಒಂದು ಖಚಿತವಾದ ಸ್ಥಾನವನ್ನು ನೀಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇದು ನಮ್ಮ ಸಾಂಸ್ಕೃತಿಕ ಬದುಕಿನಲ್ಲಿ ಮಹತ್ವದ್ದಾಗಿದೆ. ನಾವು ಯಾರ ಬಗ್ಗೆ ತಿಳಿಯಬೇಕೋ ಅವರ ಹೆಸರನ್ನು ಗೂಗಲ್‌ನಲ್ಲಿ ಕನ್ನಡ ಭಾಷೆ ಆಯ್ಕೆ ಮಾಡಿಕೊಂಡರೆ ಅವರ ಮಾಹಿತಿಯು ನಮಗೆ ಕನ್ನಡ ಬರವಣಿಗೆಯಲ್ಲಿ ಲಭ್ಯ ವಾಗುತ್ತದೆ. ಮುದ್ರಿತ ಪ್ರತಿಗಳನ್ನು ಸಹ ತೆಗೆದುಕೊಳ್ಳಬಹುದು.

ಅಡಿಟಿಪ್ಪಣಿಗಳು

೧. www.kannadasahitya.com - ಅಂತರ್ಜಾಲ ತಾಣ

೨. www.kannadakavikoota.com - ಅಂತರ್ಜಾಲ ತಾಣ

ಅಧ್ಯಾಯ – ೬
ಸಮಾರೋಪ

ಅಧ್ಯಾಯ – ೬
ಸಮಾರೋಪ

ಆಧುನಿಕ ಅಥವಾ ಜಾಗತೀಕರಣದ ಈ ಹೊತ್ತಿನಲ್ಲಿ ಸ್ಥಳೀಯ ಭಾಷೆಗಳು ಗಣಕ ಯಂತ್ರವನ್ನು ಬಳಸುತ್ತಿವೆ. ಗಣಕ ಯಂತ್ರವನ್ನು ಜನ ಅವಲಂಬಿಸಿಕೊಂಡು ದೀರ್ಘಕಾಲೀನ ಕಾರ್ಯಗಳನ್ನು ಅಲ್ಪಾವಧಿಯಲ್ಲಿ ಮಾಡಲು ದಾರಿ ಮಾಡಿಕೊಂಡಿದ್ದಾರೆ. ಆ ಕಾರ್ಯ ಚಟುವಟಿಕೆಯ ಅಂಶಗಳನ್ನು ಈ ಅಧ್ಯಯನದಲ್ಲಿ ತಿಳಿಸಲಾಗಿದೆ. ಕನ್ನಡ ಭಾಷೆಯನ್ನು ಸಮಾಜದಲ್ಲಿ ವ್ಯವಹಾರಿಕ ಭಾಷೆಯಾಗಿ ಬಳಸುತ್ತಿದ್ದು, ಅದನ್ನು ಇಂದು ಯಾವ ರೀತಿಯಲ್ಲಿ ಗಣಕ ಯಂತ್ರದಲ್ಲಿ ಅಳವಡಿಸಿಕೊಂಡು ಕನ್ನಡ ಭಾಷೆ, ಸಾಹಿತ್ಯಗಳನ್ನು ಅಭಿವೃದ್ಧಿಗೊಳಿಸಲಾಗಿದೆ ಎಂಬುದನ್ನು ತಿಳಿಯಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. ಯಾವಾಗಲೂ ಏನನ್ನಾದರೂ ಹೊಸದನ್ನೇ ತಿಳಿಯಬೇಕೆನ್ನುವ ಮಾನವ ಯಾವ ಕ್ಷೇತ್ರಗಳಲ್ಲಿ ಕನ್ನಡ ಭಾಷೆಯ ಸಾಹಿತ್ಯವನ್ನು ಅಭಿನಂದಿಸುತ್ತಿದ್ದಾರೆ. ಅದು ಹೇಗೆ ಅಭಿವೃದ್ಧಿಯತ್ತ ಸಾಗಿದೆ ಎಂಬುದನ್ನು ಸಹ ತಿಳಿಯುವ ಪ್ರಯತ್ನ ನಡೆದಿದೆ.

